೨೦ ಪುಟಗಳು

ಕರ್ಮವೀರ

ಜನಪ್ರಿಯ ಸಚಿತ್ರ ವಾರಪತ್ರಿಕೆ - ಹುಬ್ಬಳ್ಳಿ.

೨೬ - ೯ - ೧೯೪೯

★

ಬೆಲೆ ಎರಡಾಣೆ



ಹಳೇಬೀಡಿನ ದೇವಾಲಯದ ಗೋಡೆಯಲ್ಲಿನ ಮಹಿಷಾಸುರಮರ್ದಿನಿ ಮೂರ್ತಿ

ಎರಡು ಕಥಾಸಂಗ್ರಹಗಳು

ಸೆರೆಯಿಂದ ಹೊರಗೆ: ಬಸವರಾಜ ಕಟ್ಟೀಮನಿಯವರಿಂದ. (ಪ್ರಗತಿಶೀಲಸಾಹಿತ್ಯ ಮಾಲೆ, ಧಾರವಾಡ; ೧೦೦ ಪುಟ, ರೂ. ೧/೪)

ಅವರು ಯುದ್ಧಕ್ಕೆ ಹೋಗಲಿಲ್ಲ: ಕು. ಶಿ. ಹರಿದಾಸಭಟ್ಟರಿಂದ. (ಸರ್ವೋದಯ ಸಾಹಿತ್ಯಮಾಲೆ, ಹುಬ್ಬಳ್ಳಿ ೮೦ ಪುಟ ರೂ. ೧)

ಶ್ರೀ ಬಸವರಾಜ ಕಟ್ಟೀಮನಿಯವರ ಹನ್ನೆರಡನೆಯ ಕಥಾಸಂಗ್ರಹವಾದ "ಸೆರೆಯ ಹೊರಗೆ"ಯಲ್ಲಿ ಅದೇ ಆ ಹಳೆಯ ಕಟ್ಟೀಮನಿಯವರೇ ಕಾಣಿಸುತ್ತಿದ್ದಾರೆ. ತಮ್ಮ ಅನೇಕ ಪ್ರಗತಿಶೀಲ ಗೆಳೆಯರಿಂದ ಅವರು ಸಿಡಿದು ಹೋಗಿ ಉತ್ತರ ಕರ್ನಾಟಕದಿಂದ ಬೆಂಗಳೂರಿಗೂ ಅಲ್ಲಿಂದ ಇಲ್ಲಿಗೂ ಪತ್ರಿಕೆಗಳನ್ನು ಹುಟ್ಟಿಸುತ್ತ (ಮತ್ತು ಕೊಲ್ಲುತ್ತ) ಬಂದಿದ್ದರೂ ಪ್ರಗತಿಶೀಲತೆಯ ಕೈ ಬಿಟ್ಟಿಲ್ಲ. ಅವರ ಇಲ್ಲಿನ ಹತ್ತು ಕತೆಗಳಲ್ಲಿ ಒಂದನ್ನು ಬಿಟ್ಟರೆ, ಉಳಿದೆಲ್ಲವೂ ಅವರ ಹಿಂದಿನ ಕತೆಗಳಿಗಿಂತಲೂ "ಪ್ರಗತಿಶೀಲ"ವಾಗಿವೆಯೆನ್ನಲು ಯಾವ ಅಡ್ಡಿಯೂ ತೋರುವುದಿಲ್ಲ. ಏಕೆಂದರೆ ಅವು ಜೀವನದಲ್ಲಿನ ಹಲಬಗೆಯ ಶೋಷಣೆ, ವಂಚನೆ, ದುಃಖ, ದಾರಿದ್ರ್ಯಗಳ ಬಗೆಗೆ ನಿಷ್ಕ್ರಿಯ ಅನುಕಂಪೆ, ನಿಸ್ಸಹಾಯ ಕ್ರೋಧ ಅಥವಾ ತಿರಸ್ಕಾರಗಳ ಹುಟ್ಟವನ್ನು ದಾಟಿ ಪ್ರತಿಭಟನೆಯ ಹಾದಿಯನ್ನು ಹಿಡಿದುದನ್ನು ಇಲ್ಲಿ ಕಾಣುತ್ತೇವೆ. ಶ್ರೀ ವಿ. ಎಂ. ಇನಾಮದಾರರಿಂದ ಬರೆಸಿದ ಅಷ್ಟು ಅನುಕೂಲವೆಂದು ಹೇಳಬರದ ಮುನ್ನುಡಿಯನ್ನು ಇದರಲ್ಲಿ ಸೇರಿಸಿದ್ದು ಅವರ ವಿನೋದ ಬುದ್ಧಿಯನ್ನೂ ತೋರಿಸುತ್ತದೆ;

"ಪ್ರಸಾದನಿಲಯ"ದಂಥ ದಯಾಧರ್ಮ ಸಂಸ್ಥೆಯನ್ನು ನಡೆಸುವವರಲ್ಲಿ ಕೂಡ ಕಠೋರ ಶಿಸ್ತಿನ ನಿರ್ದಯತೆಯಿರುವದನ್ನು ಚಿತ್ರಿಸುವ "ಸೆರೆಯಿಂದ ಹೊರಗೆ"; ಉಪಸಂಪಾದಕನ ಲೇಖನ ಸಾಮರ್ಥ್ಯದ ಬಲದಿಂದ ಪತ್ರಿಕೆಯನ್ನು ನಡೆಸಿ ಉತ್ಕರ್ಷಕ್ಕೆ ತಂದು ಲಕ್ಷಾಂತರ ಹಣಗಳಿಸಿದರೂ ಉಪಸಂಪಾದಕರನ್ನು ಅಸಹ್ಯ ದಾರಿದ್ರ್ಯದಲ್ಲಿಟ್ಟ ಪತ್ರಿಕಾ ಮಾಲಕನನ್ನು ಕುರಿತು "ಉಪಸಂಪಾದಕನ ರ್ಸಬರ್ಚ"; ಸತ್ತ ಶ್ರೀಮಂತನ ಹೆಣದ ಬಳಿ ಅಳುವ ಬಂಧುಬಾಂಧವರ ದಂಭವನ್ನು ಉದ್ಘಾಟಿಸುವ "ಅವನು ಕೊನೆಯುಸಿರು ಹಾಕಿದ ಬಳಿಕ"; ಸಕಾಲದಲ್ಲಿ ಬರುವ ಸಾವಿನ ಶಾಂತಿದಾಯಕತೆಯನ್ನು ಸುಂದರವಾಗಿ ಚಿತ್ರಿಸುವ "ಮದ್ಯ ಹಾಗು ಅಮೃತ" ಇವು ನಾಲ್ಕು ಓದುಗನ ಮೇಲಾಗುವ ಪರಿಣಾಮದ ದೃಷ್ಟಿಯಿಂದ ತುಂಬ ಸಫಲವಾಗಿವೆ. "ಗಿರಿಜಾ ಕಂಡ ಸಿನೆಮಾ"ದಲ್ಲಿ ಶೃಂಗಾರದ ಭಾಗದ ಬೆಳವಣಿಗೆ ಅಪ್ರಸ್ತುತವಾಗಿದೆಯಲ್ಲದೆ ಕೆಲ ಮಟ್ಟಿಗೆ ಅತಿರೇಕ ಬಿಚ್ಚುಮಾತಿನ ವರೆಗೆ ಮುಟ್ಟುತ್ತದೆ. ಇದರಲ್ಲಿ ಶೃಂಗಾರ ಕರುಣವೆರಡರಲ್ಲೂ ಲೇಖಕರು ಅಕಾರಣವಾಗಿ ಮೇರೆ ದಾಟಿದ್ದಾರೆ. ಹುತಾತ್ಮ ಮೈಲಾರ ಮಹಾದೇವಪ್ಪನವರ ಬಲಿದಾನವನ್ನು ಚಿತ್ರಿಸುವ "ಮೂವರು ಸೈನಿಕರು" ಆಯಶಸ್ವಿಯಾಗಿದೆಯಲ್ಲದೆ ಗಾಂಧೀಜಿಯ ಹೆಸರನ್ನು ಬೆರಸುವ ಮೂಲಕ ಅವರಿಗೆ ಅನ್ಯಾಯವನ್ನೂ ಮಾಡಿದೆ. ಶ್ರೀ ಮೈಲಾರರ ಬಗ್ಗೆ ನಮಗೆಷ್ಟೇ ಆದರವಿದ್ದರೂ ೧೯೪೨ರ ಕೂಟಿಯುದ್ಧಕ್ಕೆ ಗಾಂಧೀಜಿಯ ಸಮ್ಮತಿಯು ಶ್ರೀಂಬ ಅವರ ಮತ್ತು ಬೇರೆ ಹಲವರ ತಿಳಿವಳಿಕೆ ಭ್ರಾಂತಿಯಾಗಿತ್ತು. ಈ ಅಂಶವನ್ನು ಸೂಚಿಸದಿದ್ದುದರಿಂದ ಆ ಎರಡೂ ಸ್ವರ್ಗೀಯ ಆತ್ಮಗಳಿಗೆ ನ್ಯಾಯವಾಗಲಿಲ್ಲ. "ಎರಡು ಗುಲಾಬಿ" ಯೆಂಬ ಮೂರೂವರೆ ಪುಟದ ಪುಟ್ಟ ಕತೆ ಚನ್ನಾಗಿದ್ದರೂ ಈ ಸಂಗ್ರಹದ ಸಾಮಾನ್ಯ ಹೋಲಿಕದಲ್ಲಿ ಅಪಸ್ವರದಂತಿದೆ. ಉಳಿದ ಕತೆಗಳು ಸಾಮಾನ್ಯವಾಗಿವೆ.

ಶ್ರೀ ಕು. ಶಿ. ಹರಿದಾಸಭಟ್ಟರು ಇದೇ ಕಾಲೇಜು ಮುಗಿಸಿದವರು, ಕಥಾ ಪ್ರಪಂಚಕ್ಕೆ ಹುಸು ಹೊಸಬರು. ಅವರ ಏಳು ಕಥೆಗಳು ಇದೀಗ ಸಂಗ್ರಹವಾಗಿ ಹೊರಬಿದ್ದಿವೆ. ದಕ್ಷಿಣ ಕನ್ನಡದವರಾದ ಶ್ರೀ ಭಟ್ಟರು ಸಹಜವಾಗಿ ತಮ್ಮ ಜಿಲ್ಲೆಯ ಜನಜೀವನವನ್ನೇ ಅಧಿಕತರವಾಗಿ ಹಿನ್ನೆಲೆಯಲ್ಲಿಟ್ಟುಕೊಂಡು ಕಥೆಗಳನ್ನು ಹೆಣೆದಿದ್ದಾರೆ. ಆದರೆ ಇದು ಹಿನ್ನೆಲೆ ಮಾತ್ರ. ಕತೆಗಳು ಶ್ರೀ ಕಾರಂತರ ಕೃತಿಗಳಂತೆ ಆ ಪ್ರಾದೇಶಿಕತೆಯಿಂದಲೇ ವಿಶಿಷ್ಟವಾದವುಗಳಲ್ಲ. ಮೇಲಾಗಿ ಈ ಸಂಗ್ರಹದ ಅತ್ಯುತ್ತಮ ಕಥೆಗಳು ಆ ಹಿನ್ನೆಲೆ ಬಿಟ್ಟೇ ಇವೆ. ದಕ್ಷಿಣ ಕನ್ನಡದ ಒಬ್ಬ ಸಾತ್ವಿಕ ಶಾಲಾ ಮಾಸ್ತರರನ್ನು ಕುರಿತ "ಅವರು ಯುದ್ಧಕ್ಕೆ ಹೋಗಲಿಲ್ಲ", ಮದ್ರಾಸಿನಲ್ಲಿ ತಸ್ಕರ ವೃತ್ತಿಯಿಂದ ಜೀವಿಸುವ ಲಮಾಣಿಗಳ ಜೀವನವನ್ನು ಕುರಿತ "ಸಹಸಾಮೂರ್ತಿ", ಮತ್ತು ಮದ್ರಾಸಿನ ಒಬ್ಬ ಬಸ್ ಕಂಡಕ್ಟರನ ಮಗು ಗ್ಲುಕೋಸ್-ಡಿಯ ಅಭಾವಕ್ಕಾಗಿ ನರಳುತ್ತಿದ್ದುದನ್ನು ಸಹಿಸಲಾರದೆ ಅದರ ತಂದೆ (ಬಡತನದ ಕಾರಣ) ಒಂದು ಡಬ್ಬಿ ಗ್ಲುಕೋಸನ್ನು ಕದ್ದು ಮನೆಗೆ ತಂದಾಗ ಮಗು ಸತ್ತಿರುವುದನ್ನು ಕುರಿತ "ಗ್ಲುಕೋಸ್-ಡಿ" ಇವು ಮೂರು ಈ ಸಂಗ್ರಹದಲ್ಲಿ ಲೇಖಕರ ಬಗ್ಗೆ ಆಶೋತ್ತರವನ್ನುಂಟುಮಾಡುವ ಕಥೆಗಳು. "ಅರದ ಬಯಕೆ" ಪಂಜಾಬದ ಹತ್ಯಾಕಾಂಡವನ್ನು ಹಿನ್ನೆಲೆಯಲ್ಲಿಟ್ಟುಕೊಂಡು ಬರೆದ ಉತ್ತಮ ಕಥೆಯಾದರೂ ಅದು ಪೂರ್ಣ ಸ್ವತಂತ್ರವೆನ್ನಬರುವುದಿಲ್ಲ. ಸ್ಕ್ಯಾಂಡಿನೇವಿಯನ್ ಲೇಖಕನೊಬ್ಬನು ಸ್ತ್ರೀಯ ಅಸಂತೃಪ್ತ ಕಾಮ ಪಿಪಾಸೆಯ ಬೀಭತ್ಸ ಸ್ವರೂಪವನ್ನು ಚಿತ್ರಿಸುವ ಅಂಥದೇ ಕಥೆಯನ್ನು ಬರೆದಿದ್ದಾನೆ.

ಶ್ರೀ ಹರಿದಾಸಭಟ್ಟರ ಕೈ ಕಲಾಸೃಷ್ಟಿಯಲ್ಲಿ ಪೂರ್ತಿ ಪಳಗಿದೆಯೆಂದು ಮಿಥ್ಯಾಸ್ತುತಿ ಮಾಡಲು ನಾವು ಬಯಸುವುದಿಲ್ಲ. ಅವರ ಶೈಲಿ ಅಷ್ಟು ಮಾರ್ಮಿಕವಾಗಿಲ್ಲ. ಆದರೆ ಮೂಲ ಸಾಮಗ್ರಿಯ ಆಯ್ಕೆಯ ಕೌಶಲ್ಯ, ರಸಸ್ಥಾನಗಳ ಜ್ಞಾನ ಇವುಗಳನ್ನು ಇಲ್ಲಿ ಕಾಣಬಹುದಾಗಿದೆ. ಸ್ವಲ್ಪ ಅಭ್ಯಾಸದಿಂದ ಶ್ರೀ ಭಟ್ಟರು ಈ ಕಲಾವಿಭಾಗದಲ್ಲಿ ಪ್ರಭುತ್ವವನ್ನು ಗಳಿಸಬಲ್ಲರು.

ದೊರೆಸಾನಿ— (ಕಾವ್ಯನಾಟಕ) ಲೇಖಕರು: ಶ್ರೀಕೃಷ್ಣಮೂರ್ತಿ ಪುರಾಣಿಕ; ಪ್ರಕಾಶಕರು ಕೆ. ಟಿ. ಪುರಾಣಿಕ. ಸಾಹಿತ್ಯ ಸೇವಾ ಮಂದಿರ ಗೋಕಾಕ; ಮಾರಾಟಗಾರರು— ಸಮಾಜ ಪುಸ್ತಕಾಲಯ ಧಾರವಾಡ, ಪುಟಗಳು ೬೬ ಬೆಲೆ ಒಂದು ರೂಪಾಯಿ.

ದೇಶದಲ್ಲಿಯ ಪ್ರಚಲಿತ ಸಮಸ್ಯೆಯೊಂದನ್ನು ಕುರಿತು ಈ ಕಾವ್ಯ ನಾಟಕವನ್ನು ಬರೆದಿರುವದಾಗಿ ಶ್ರೀಕೃಷ್ಣಮೂರ್ತಿ ಪುರಾಣಿಕರು ಹೇಳಿದ್ದಾರೆ. "ಯಾವದೇ ಒಂದು" ಸಂಸ್ಥಾನದ ಸ್ವಾತಂತ್ರ್ಯ ಹೋರಾಟವನ್ನು ಚಿತ್ರಿಸಲು ಅವರು ಹೊರಟಿರದೆ ಸಂಸ್ಥಾನಿ ಪ್ರಜೆಗಳ ಸ್ವಾತಂತ್ರ್ಯಕಾಂಕ್ಷೆಯನ್ನೇ ವಸ್ತುವನ್ನಾಗಿಟ್ಟುಕೊಂಡು ಈ ನಾಟಕ ಬರೆದಿದ್ದಾರೆ. ಆ ಪ್ರಜೆಗಳಿಗೆ ನಾಯಕನಾಗಿ ರಾಜಕವಿಯಾದ ಕವಿರಾಜನೇ ದೊರೆಯುತ್ತಾನೆ. ದೊರೆಗೆ ರಾಜ್ಯ ತನ್ನದೇ ಎಂಬ ಅಹಂಕಾರ; ಜೊತೆಗೆ ದಬ್ಬಾಳಿಕೆಗೆ ಮನಸ್ಸಿತ್ತ ಮಂತ್ರಿಯ ಕುಟಿಲ ಉಪದೇಶ. ಆದರೆ ಪಲ್ಲಟಿಸಿದ ಕಾಲ ಪರಿಸ್ಥಿತಿಯನ್ನು ಅರಿತುಕೊಂಡ ದೊರೆಸಾನಿಯು ಕವಿಯ ನಾಯಕತ್ವವನ್ನು ಒಪ್ಪಿಕೊಳ್ಳುತ್ತಾಳೆ. ನಾಟಕದ ಪ್ರಾರಂಭದ ದೃಶ್ಯದಲ್ಲಿಯೆ ತನ್ನ ಉದ್ರೇಕಜನಕ ಹಾಡುಗಳಿಗಾಗಿ ಬಂಧನಕ್ಕೊಳಗಾದ ಕವಿರಾಜನ ಸಂದೇಶವನ್ನು ಜನತೆಗೆ ಮುಟ್ಟಿಸಲು ಮುಂದಾಗುತ್ತಾಳೆ. ಇವಳ ವಿಮೋಚನಾಕಾರ್ಯವನ್ನು ಅರಿಯಲಾರದ ಕವಿರಾಜನ ಶ್ರೀಮತಿ ದೇಮತಿ ದೊರೆಸಾನಿಗೆ ಮುಚ್ಚುಮಾತು ಆಡುತ್ತಾಳೆ. ಕವಿಯ ಬಂಧನದನಂತರ ದಬ್ಬಾಳಿಕೆಯ ಸತ್ರ ಪ್ರಾರಂಭವಾಗುತ್ತದೆ. ಮುಂದೆ ಕವಿರಾಜನು ತಪ್ಪಿಸಿಕೊಳ್ಳುತ್ತಾನೆ. ದೊರೆಸಾನಿಯು ಏಳು ದಿನಗಳ ವರೆಗೆ ಪ್ರಯತ್ನಿಸಿ ದೊರೆಯ ಹೃದಯ ಪರಿವರ್ತನೆ ಸಾಧಿಸಿ ಜನರಿಗೆ ನಾಡ ಹೊಣೆಗಾರಿಕೆಯನ್ನು ಒಪ್ಪಿಸಲು ಆಣಿಗೊಳಿಸುತ್ತಾಳೆ. ತನ್ನ ತಂತ್ರ ನಿಫಲವಾದ್ದರಿಂದ ಮಂತ್ರಿಯು ಕವಿಯನ್ನು ರಾತ್ರಿ ಇರಿದು ಬಿಡುತ್ತಾನೆ. ಮರುದಿನವೇ ದೊರೆಯು ಆಸ್ಥಾನದಲ್ಲಿ ಸ್ವಾತಂತ್ರ್ಯದ ಘೋಷಣೆ ಮಾಡುತ್ತಿರುತ್ತಾನೆ. ಕವಿಯು ಸಭಾಸ್ಥಾನಕ್ಕೆ ಬಂದಿರುವದಿಲ್ಲವಾದ್ದರಿಂದ ಜನರು ಹೊಣೆಗಾರಿಕೆ ಒಪ್ಪಿಕೊಳ್ಳುವದಿಲ್ಲ. ಅಷ್ಟರಲ್ಲಿ ಪುರಗಾಸನ್ನಾತ ಕವಿಯನ್ನು ಆ ಸ್ಥಾನಕ್ಕೆ ಹೊತ್ತುಕೊಂಡು ಬರುತ್ತಾರೆ; ಬೆನ್ನ ಹಿಂದಿಂದ ದೇವಮತಿಯೂ ಮಂತ್ರಿಯ ಕೊಲೆಗೈದು ಸತ್ತಿರುವ ಸಿರಿಯುಕ್ತರುವ ಹೋರಿ ಹಿಡಿದುಕೊಂಡೇ ಅಲ್ಲಿಗೆ ಬಂದು ತನ್ನ ಪ್ರಿಯತಮನನ್ನು ಕೂಡಿಕೊಳ್ಳಲು ಪರಲೋಕಕ್ಕೆ ತೆರಳುತ್ತಾಳೆ.

ಏಳು ದೃಶ್ಯಗಳಲ್ಲಿ ಚಿತ್ರಿತವಾದ ದುಃಖಾಂತವಾದ ಈ ನಾಟಕವು ಸಾಕಷ್ಟು ಪರಿಣಾಮಕಾರಿಯಾಗಿದೆಯೆಂದೇ ಹೇಳಬಹುದು. ನಾಟಕವನ್ನು ದುಃಖಾಂತವಾಗಿಸುವದರಿಂದಲೇ ಹೆಚ್ಚು ಪರಿಣಾಮಕಾರಿಯಾಗಿಸಬಹುದೆಂಬ ಕಲ್ಪನೆಯಿಂದ ಗ್ರಂಥಕರ್ತರು ಆ ಹವ್ಯಾಸಕ್ಕೆ ಬಿದ್ದಂತೆ ತೋರುತ್ತದೆ. ನಾಟಕದ ಕೊನೆಯಲ್ಲಿ ನಾಟಕೀಯತೆ ತುಂಬಿದೆ, ಆದರೆ ವಾಸ್ತವಿಕತೆಯನ್ನು ಹುಡುಕಬೇಕಾಗುತ್ತದೆ.

ಈ ನಾಟ್ಯಕದಲ್ಲಿ ಬಳಸಿದ ಸರಳ ರಗಳೆಯು ತೀರ ಸರಳವಾಗಿದೆ; ಬಿಗುವನ್ನು ಕಳೆದುಕೊಂಡಿದೆ. ಸರಳ ರಗಳೆಯು ನಾಟಕ ರಚಿಸುವ ಈ ಮೂರನೆಯ ಪ್ರಯತ್ನಕ್ಕಿಂತಲೂ ಅವರ ಪ್ರಥಮ ಪ್ರಯತ್ನದ ನಾಟಕದಲ್ಲಿಯ ಸರಳ ರಗಳೆ ಹೃದಯಂಗಮವಾಗಿದೆ. ತಮ್ಮ ಭಾಷಾ ಪ್ರೌಢಿಯನ್ನು ಮೆರೆಸಲು ಸಾಹಿತಿಗಳು ಗದ್ಯವನ್ನು ಬಿಟ್ಟು ಸರಳ ರಗಳೆಗೆ ಗಂಟುಬೀಳುವದು ರೂಢಿ. ಹೀಗೆಂದ ಮೇಲೆ ಈ 'ದೊರೆಸಾನಿ' ಪುಸ್ತಕದಲ್ಲಿಯ ರಸರುಷಿ, ನಿಷ್ಕ್ರಿತಿ, ಕೃಪಾದೃಷ್ಟಿ, ಪರಿವ್ರತ, ಉನ್ಮಾದಿ ಮುಂತಾದ ಶಬ್ದ ಪ್ರಯೋಗಗಳು ಗ್ರಂಥಕರ್ತರು ಭಾಷೆಯನ್ನು ದುರ್ಲಕ್ಷಿಸಿರುವರೆಂದು ಹೇಳಲು ಸಾಕ್ಷಿಯಾಗಿ ನಿಂತಿವೆ. ತಪ್ಪು-ಒಪ್ಪೋಲೆ ಎಲ್ಲಿಯೂ ಇಲ್ಲದಿರುವದರಿಂದ ಈ ಶಬ್ದಗಳು ಮುದ್ರಣದೋಷಗಳೆಂದು ಹೇಳಲು ಮನಸ್ಸಾಗದು. ದೊರೆಯ ದಂಡಾಧಿಕಾರಿಗಳು ಎಂದು ಹೇಳಬೇಕಾದಲ್ಲಿ "ಸತ್ತಾಧಿಕಾರಿಗಳು" ಎಂಬ ಶಬ್ದವನ್ನು ಪ್ರಯೋಗಿಸಿರುವದೂ ಸಾಧುವಾಗಿಲ್ಲ. ಇನ್ನೊಂದು ಆಶ್ಚರ್ಯವೆಂದರೆ ದೊರೆಯ ಆಸ್ಥಾನದಲ್ಲಿಯ ಕವಿರಾಜನೂ ದೊರೆಯ ಸೇವಕನೂ ದೊರೆಸಾನಿಯನ್ನು ಏಕವಚನದಿಂದ ಸಂಬೋಧಿಸುವದು. ಈ ರೀತಿ ಎಂದಿಗೂ ನೋಡಸಿಗುವದಿಲ್ಲ. ಛಂದಸ್ಸಿಗೆ ಯಾವ ತೊಂದರೆಯಿಲ್ಲದೆ ಅಲ್ಲಿ ಬಹು ವಚನವನ್ನು ಸುಲಭವಾಗಿ ಉಪಯೋಗಿಸಬಹುದಾಗಿತ್ತು. ಆದರೆ ಹಾಗೆ ಏಕೆ ಉಪಯೋಗಿಸಿಲ್ಲವೊ ತಿಳಿಯದು.

ಈ ನಾಟಕದಲ್ಲಿ ಬಂದಿರುವ ೩-೪ ಕವನಗಳು ಸುಂದರವಾಗಿವೆ. ಪುಸ್ತಕದ ಮುದ್ರಣ ಅಚ್ಚುಕಟ್ಟಾಗಿದೆ. ಇದನ್ನು ಓದಿ ಆನಂದಿಸಬಹುದಾದರೂ ರಂಗಭೂಮಿಯ ಮೇಲೆ ತರಲು ಸ್ವಲ್ಪ ಎದೆಗಾರಿಕೆಯೇ ಬೇಕು.

ಅರ್ಘ್ಯ

ಕರ್ನಾಟಕ ಕಾಲೇಜಿನ ಸಂಸ್ಕೃತ ಸಂಘದ ಕೈಬರಹದ ಪತ್ರಿಕೆ. ಪುಟ ೭೪. ಸಂಪಾದಕರು ಡಾ. ರಾ. ನಾ. ವಳೆ ಇತ್ಯಾದಿ.

ಇದು ಬಹಳ ಮುದ್ದಾಗಿ ಬರೆಯಲ್ಪಟ್ಟಿದೆ. ಇದರಲ್ಲಿ ಸಂಸ್ಕೃತ ಮತ್ತು ಇಂಗ್ಲೀಷು ಭಾಷೆಗಳಲ್ಲಿ ಬರೆದ ಲೇಖನಗಳಿವೆ; ಅವುಗಳಲ್ಲಿ ಹಲವು ಸಂಸ್ಕೃತಸಾಹಿತ್ಯಕ್ಕೆ ಸಂಬಂಧಿಸಿದವು; ಮತ್ತೆ ಕೆಲವು ಸ್ವತಂತ್ರ ಮತ್ತು ಅನುವಾದಗಳಾಗಿವೆ. ರವೀಂದ್ರರ ಒಂದು ಗೀತವನ್ನು ಅನುವಾದಿಸಿದ ಶ್ರೀಪಾಂಡುರಂಗಿ ಶಾಸ್ತ್ರಿಗಳು, ಉತ್ತರರಾಮಚರಿತವನ್ನು ಕುರಿತು ಲೇಖ ಬರೆದ ಶ್ರೀ ರಿತ್ತಿ ಶ್ರೀನಿವಾಸರು, ಕರ್ಮಯೋಗದ ಬಗ್ಗೆ ಬರೆದ ಶ್ರೀ ಮೋಡಕ ಭಾಲಚಂದ್ರರು ಮತ್ತು ಸಂಸ್ಕೃತ ಭಾಷೆಯ ಮೇಲೆ ಬರೆದ ಶ್ರೀ ಮಹಾದೇವಶಾಸ್ತ್ರೀ ದೇವನೀಮಠರು ಗಳಿಸಿದ ಸಂಸ್ಕೃತ ಭಾಷಾಪ್ರಭುತ್ವವು ಕಾಲೇಜುಗಳಲ್ಲಿ ಸಂಸ್ಕೃತಕ್ಕೆ ದೊರೆಯುವ ಸಮಯ ಮತ್ತು ಮಹತ್ವ ಇವುಗಳೊಡನೆ ಹೋಲಿಸಿದರೆ ತುಂಬ ಪ್ರಶಂಸಾರ್ಹವೇ. ಕು. ತಿ. ಶಾ. ಕುಲಕರ್ಣಿಯವರು ಅನುಷ್ಟುಪ್ ಶ್ಲೋಕಗಳಲ್ಲಿ ಅನುವಾದಿಸಿದ ಕವಿತೆಗಳ ಬಂಧ, ಮತ್ತು ಶೈಲಿ ಏನೂ ಪರಿಪಕ್ವವಾಗಿಲ್ಲ. ಇಂಗ್ಲೀಷಿನಲ್ಲಿ ಬರೆದ ಶ್ರೀ ಎಂ. ಎ. ಭಟ್ಟರ, Imageries of Kalidasa ಎಂಬ ಲೇಖ ತಕ್ಕಮಟ್ಟಿನ ಸ್ವತಂತ್ರ ವಿಮರ್ಶ ಶಕ್ತಿಯನ್ನು ಪ್ರದರ್ಶಿಸುತ್ತದೆ. ಸಂಸ್ಕೃತದ ಅಭಿಮಾನದಿಂದ ಈ ಕಾರ್ಯದಲ್ಲಿ ಪ್ರಸಕ್ತರಾದ ಸಂಸ್ಕೃತ ಅಧ್ಯಾಪಕ ಮತ್ತು ವಿದ್ಯಾರ್ಥಿಗಳು ಅಭಿನಂದನಾರ್ಹರು.

ಕನ್ನಡ ಕನ್ನಡಿ

ಧಾರವಾಡದ ಬಾಸೆಲ್ ಮಿಶನ್ ಹೈಸ್ಕೂಲಿನ ಸಂಯುಕ್ತ ಕರ್ನಾಟಕ ಸಂಘದ ಕೈಬರಹದ ಪತ್ರಿಕೆ. ಸಂಪಾದಕರು ಶ್ರೀ ಸುಬ್ಬಣ್ಣ ಮತ್ತು ಪಾಟೀಲ ಕುಲಕರ್ಣಿ. ಪುಟ ೫೬.

ಇದರಲ್ಲಿ ೧೯ ಲೇಖನಗಳಿವೆ. ವಿವಿಧ ವಿಷಯಗಳ ಮೇಲೆ ವಿವಿಧ ಶೈಲಿಯಲ್ಲಿ ಅವು ಬರೆಯಲ್ಪಟ್ಟಿವೆ. ಅವಳು ಯಾರು? ಎಂಬುದೊಂದು ಉತ್ತಮ ವಿಡಂಬನಪ್ರಬಂಧ. ಸೌಂದರ್ಯದ ಪ್ರಯೋಜನವನ್ನು ಕ್ಷುದ್ರವಾಗಿಯಾದರೂ ಸತ್ಯವಾಗಿ ತಿಳಿಸುತ್ತದೆ. 'ಅಲ್ಪಸಂಖ್ಯಾಕರ ಸಮಸ್ಯೆ' ಯಲ್ಲಿ ಪ್ರಾಚೀನ ಆಚಾರ ವಿಚಾರಗಳ ವಿಡಂಬನವಿದೆ. ಅದು ಆರೋಗ್ಯಕರವಾಗುವ ರೀತಿಯಲ್ಲಿಲ್ಲ. ಪ್ರಾಚೀನ ಆಚಾರ ವಿಚಾರಗಳ ಸರ್ವತ್ಯಾಗದ ಉಪದೇಶ ಅಹಿತಕರ, ಅದರಲ್ಲಿಯ ಗ್ರಾಹ್ಯಾಂಶಗಳ ಪುರಸ್ಕಾರ ಜಗದುದ್ಧಾರಕ್ಕೆ ಅಗತ್ಯ. ಅಗ್ರಾಹ್ಯಾಂಶಗಳಷ್ಟೇ ವಿಡಂಬನಾರ್ಹ. ಅಗ್ರಾಹ್ಯಾಂಶ ಆಧುನಿಕ ಆಚಾರ ವಿಚಾರಗಳಲ್ಲಿಯೂ ಇವೆ. ಅವೂ ವಿಡಂಬನಕ್ಕೆ ವಸ್ತುಗಳಾಗುವುವು. "ನಮ್ಮ ಬಾಪು" ವಿನಲ್ಲಿ ಬರಹಗಾರರ ಅವ್ಯಕ್ತಪ್ರಸನ್ನತೆ ಚೆನ್ನಾಗಿ ವ್ಯಕ್ತವಾಗುತ್ತದೆ. ಅದನ್ನು ಸುಧಾರಿಸಿಕೊಳ್ಳಬೇಕು; ಏಕೆ "ಕೋರ್ಟೋವೆಂಡಿನ ಜಾಲಗಾರರು" ಮುಂತಾದ ಕವನಗಳಾದರೂ ನೂರಕ್ಕೆ ೩೫ ಕ್ಕಿಂತಲೂ ಕಡಿಮೆ ಗುಣಗಳಿಗೆ ಅರ್ಹವೆನಿಸುವುವು. ದಾರಿದ್ರ್ಯದ ಕಾಠಿನ್ಯಕ್ಕೆ ಸಮಾಜದ ಧನಿಕ ಸ್ತ್ರೀ ಪುರುಷರ ಅಧರ್ಮಬುದ್ಧಿಯೇ ಕಾರಣವೆಂಬುದನ್ನು "ಇದು ಯಾರ ಅನ್ಯಾಯ" ಎಂಬ ಚಿಕ್ಕಕತೆ ಚೆನ್ನಾಗಿ ತೋರಿಸಿಕೊಟ್ಟಿದೆ. "ತಪ್ಪು ಯಾರದು" ಎಂಬುದು ಅವಾಸ್ತವವೆನಿಸದಿದ್ದರೂ ಗಂಡಿನ ಬಗೆಗೆ ಹೆಣ್ಣಿಗೆ ಅನಾದರ ಹುಟ್ಟುವಂತೆಯೂ ತನ್ನಲ್ಲಿ ಆತ್ಮೋತ್ಕರ್ಷದ ಭಾವವನ್ನು ಪ್ರಜ್ವಲಗೊಳಿಸುವಂತೆಯೂ ಬರೆಯಲ್ಪಟ್ಟಿದೆ. ಇಂಥ ಕತೆಗಳೇ ಇಂದಿನ "ಫ್ಯಾಶನ್" ಆಗಿವೆ. ಇವುಗಳಿಂದ ಸ್ತ್ರೀ ಪುರುಷರಿಬ್ಬರಲ್ಲೂ ಪರಸ್ಪರವಾಗಿ ದುರ್ನಿವಾರ್ಯವಾದ ಕುಕಲ್ಪನೆಗಳು ಹುಟ್ಟಲು ಅವಕಾಶವಿದೆ, ಜಾಗ್ರತೆ! ಏಕೆ ಬರಹಗಳು ಸರ್ವಸಾಧಾರಣವಾಗಿವೆ. ಉಪಾಧ್ಯಾಯರೊಡನೆ ವಿಷಯ ಮತ್ತು ಭಾಷೆ, ಶೈಲಿಗಳ ಬಗ್ಗೆ ಸಾಕಷ್ಟು ಚರ್ಚೆ ಮಾಡಿ ತಿಳಿದುಕೊಂಡರೆ ಸಾಹಿತ್ಯಕ್ಕೆ ಅತ್ಯವಶ್ಯಕವಾದ ಮನೋವಿಜ್ಞಾನ, ಭಾಷಾಗಾಂಭೀರ್ಯಗಳು ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಹಸ್ತಗತವಾಗದಿರವು. ಈ ದೃಷ್ಟಿಯಲ್ಲಿ ಸಂಯುಕ್ತಕರ್ನಾಟಕ ಸಂಘ ಅವರನ್ನು ಮುನ್ನಡೆಸಿಕೊಂಡು ಹೋದುದನ್ನು "ಕನ್ನಡ ಕನ್ನಡಿ" ಯ ಮುಂದಿನ ಸಂಚಿಕೆಯಲ್ಲಿ ಕಾಣಬಹುದೆಂದು ಹಾರೈಕೆ.

ಸಂಪುಟ ೨೧ ಸಂಚಿಕೆ ೨೪

ಕರ್ಮವೀರ

ಸೋಮವಾರ ಆಶ್ವಿನ ಶು. ೪

ತಾರೀಖು ೨೬—೯—೧೯೪೯

ಮುಖಪತ್ರದಲ್ಲಿ

ಇದೀಗ ನವರಾತ್ರಿ ಅಥವಾ ದಸರಾ ಉತ್ಸವ ನಾನಾ ಪ್ರಕಾರವಾಗಿ ಆಚರಿಸಲ್ಪಡುತ್ತದೆ. ಆದರೆ ಎಲ್ಲ ಕಡೆಗಳಲ್ಲಿಯೂ ಇರುವ ಇದರ ಒಂದು ಸಾಮಾನ್ಯಾಂಶವೆಂದರೆ ದೇವೀಪೂಜೆ. ತಾಮಸ ದೇವತೆಯಾದ ಚಂಡಿಯನ್ನು ಪ್ರಾಣಿಬಲಿಯಿಂದ ಆರಾಧಿಸುವ ರೂಢಿ ಸರ್ವತ್ರ ಪ್ರಚ.ರವಾಗಿದೆ. ಚಂಡಿ, ಚಾಮುಂಡಿ, ಮಹಿಷಾಸುರ ಮರ್ದಿನಿಯೇ ಮೊದಲಾದ ಶಕ್ತಿ ದೇವತೆಯ ರೂಪಗಳನ್ನು ಭಕ್ತರು ಆರಾಧಿಸುವರು. ದಸರೆಯ ಹಬ್ಬ. (ಅದರಲ್ಲಿ ಈಗ ಎಷ್ಟೋ ಸಾತ್ವಿಕಾಂಶಗಳೂ ಬಂದಿವೆ. ಸರಸ್ವತೀ ಪೂಜೆ ಇದರಲ್ಲೊಂದು). ಚಾಮುಂಡಿ ಅಥವಾ ಮಹಿಷಾಸುರ ಮರ್ದಿನಿ ಶಿಲ್ಪಿಗಳಿಗೆ ತುಂಬ ಪ್ರಿಯಳಾದ ದೇವಿ. ಮಹಿಷರೂಪನಾದ ಲೋಕಕಂಟಕ ರಾಕ್ಷಸನನ್ನು ಶಕ್ತಿ ದೇವತೆ ಉಗ್ರಾವತಾರ ಧರಿಸಿ ಸಂಹರಿಸಿದ ಕತೆ ಪುರಾಣಗಳಲ್ಲಿ ಲಭ್ಯವಾಗುತ್ತವೆ. ಈ ವಾರದ ಮುಖಪತ್ರದಲ್ಲಿ ಮಹಿಷಾಸುರ ಮರ್ದಿನಿಯ ಬಗ್ಗೆ ಹಳೇಬೀಡು ದೇಗುಲದ ಶಿಲ್ಪಿಯ ಕಲ್ಪನೆ ಕಾಣಿಸುವುದು. —ಚಿತ್ರ: ಶ್ರೀ ಕೊನೇರಿ

ಕರ್ಮವೀರ

ಪ್ರತಿ ಸೋಮವಾರ ಹುಬ್ಬಳ್ಳಿಯಿಂದ ಹೊರಡುವ ವಾರಪತ್ರಿಕೆ

ಸಂಸ್ಥಾಪಕರು :
ಶ್ರೀ. ರಂ. ರಾ. ದಿವಾಕರ

ಸಂಪಾದಕರು :
ಶ್ರೀ. ಹ. ರಾ. ಪುರೋಹಿತ

ಹೊಸ ವರ್ಗಣಿ ವಿವರಗಳು :

೧ ವರ್ಷಕ್ಕೆ	ರೂ. ೬—೧೨—೦
೬ ತಿಂಗಳಿಗೆ	ರೂ. ೩—೮—೦
೩ ,,	ರೂ. ೨—೦—೦

ಬಿಡಿಸಂಚಿಕೆ : ೨ ಆಣೆ

ವ್ಹಿ. ಪಿ. ದ್ವಾರಾ ಕಳಿಸಿದರೆ ೦—೬—೦ ಹೆಚ್ಚು ಬೀಳುವದು.

ಚಂದಾದಾರರು : ತಮ್ಮ ವರ್ಗಣಿ, ಸಂಚಿಕೆಗಳ ತಲುಪುವಿಕೆಯ ಸಂಬಂಧದ ದೂರು ಮೊದಲಾದವುಗಳ ಬಗ್ಗೆ ಪತ್ರವ್ಯವಹಾರವನ್ನು ಮಾಡುವಾಗ ವಿಳಾಸದ ಚೀಟಿಯ ಮೇಲಿರುವ ಚಂದಾ ನಂಬರುಗಳನ್ನು ಉಲ್ಲೇಖಿಸಬೇಕು. ಇಲ್ಲದಿದ್ದರೆ ಸಾವಿರಗಟ್ಟಳೆ ಚಂದಾದಾರರಲ್ಲಿ ನಿಮ್ಮ ಹೆಸರನ್ನು ಕಂಡು ಹಿಡಿಯುವದು ಸಾಧ್ಯವಾಗದು.

ಒಮ್ಮೆ ಚಂದಾದಾರರಾದವರಿಗೆ ಅವರ ಅವಧಿ ಮುಗಿಯುವ ೧೫ ದಿನ ಮುಂಚಿತವೇ ವ್ಹಿ. ಪಿ. ಮಾಡಲಾಗುವದು. ಬೇಡಾದವರು ಮೊದಲೇ ತಿಳಿಸಬೇಕು. ಚಂದಾ ಹಣ ಮುಂಗಡ.

ಲೇಖಕರು: "ಕರ್ಮವೀರ" ದಲ್ಲಿ ಪ್ರಕಟನೆಗಾಗಿ ಕಳಿಸುವ ಲೇಖ, ಕತೆ, ಕವಿತೆ ಮೊದಲಾದವುಗಳು ಅಸ್ವೀಕೃತವಾದಲ್ಲಿ ತಿರುಗಿ ಪಡೆಯಲಪೇಕ್ಷಿಸುತ್ತಿದ್ದರೆ ಲೇಖದ ಸಂಗಡಲೇ ಅವಶ್ಯವಿದ್ದಷ್ಟು ಅಂಚೆ ತಿಕೀಟುಗಳನ್ನು ಕಳಿಸಿರಬೇಕು. ಹಾಗೆ ಮಾಡದೆ ಮುಂದೆ ಆ ಲೇಖಗಳ ಬಗ್ಗೆ ಪತ್ರವ್ಯವಹಾರ ಮಾಡಿದರೆ ಅಥವಾ ತಿರುಗಿ ಕಳಿಸಬೇಕೆಂದರೆ ಅದು ಸಾಧ್ಯವಾಗದು. ಸ್ವೀಕೃತವಾದ ಕತೆಗಳಿಗೂ ಪೂರ್ಣ್ಮಾಕಾರದ, ಅಂದರೆ "ಕರ್ಮವೀರ"ದ ಎರಡು ಕಾಲಂ ಮೀರಿದ ಲೇಖಗಳಿಗೂ ನಿರ್ದಿಷ್ಟ ಪ್ರತಿಫಲ ಕೊಡಲಾಗುವದು.

ಸೂಚನೆ : ಈ ವರೆಗೆ ವರ್ಷಕ್ಕೆ ೮ ವಾರ ರಜೆ ತೆಗೆದುಕೊಳ್ಳುವ ಪರಿಪಾಠವಿತ್ತು. ಓದುಗರಿಗೆ ಇದರಿಂದ ತೊಂದರೆಯಾಗುವದಕ್ಕಾಗಿ ಇನ್ನು ಮುಂದೆ ರಜೆಗಳನ್ನು ರದ್ದುಗೊಳಿಸಿ ವರ್ಷದಲ್ಲಿ ೫೨ ಸಂಚಿಕೆಗಳನ್ನು ತೆಗೆಯಲಾಗುವದು. ವಿಶೇಷ ಸಂಚಿಕೆಗಳನ್ನು ಹೊರಡಿಸಿದರೆ ಅದರ ಬಗ್ಗೆ ಪ್ರತ್ಯೇಕ ಬೆಲೆಯನ್ನು ಕೊಡಬೇಕಾಗುವದು.

— ವ್ಯವಸ್ಥಾಪಕ,
"ಕರ್ಮವೀರ" ಹುಬ್ಬಳ್ಳಿ

ರೂಪಾಯಿಯ ಇಳಿದ ಬೆಲೆ

ರೂಪಾಯಿಯ ಬೆಲೆ ಇಳಿಸಲ್ಪಟ್ಟಿತೆಂದು ಸರಕಾರ ಸಾರಿದೆ. ಯಾವುದಾದರೊಂದು ನಾಣ್ಯದ ಬೆಲೆ ಇಳಿಸುವುದೆಂದರೇನೆಂಬು ಇದೇ ಸಂಚಿಕೆಯ ಬೇರೊಂದು ಕಡೆ ಸಾಧ್ಯವಿದ್ದಷ್ಟು ತಿಳಿಯಾದ ಮಾತುಗಳಿಂದ ವಿವರಿಸಲಾಗಿದೆ. ಬ್ರಿಟನ್ನು ಏಕೆ ತನ್ನ ಪೌಂಡಿನ ಬೆಲೆ ಇಳಿಸಿತೆಂದೂ ಅದರಲ್ಲಿ ತಿಳಿಸಲ್ಪಟ್ಟಿದೆ. ಇಲ್ಲಿ ರೂಪಾಯಿಯ ಬೆಲೆ ಇಳಿಸಿದ್ದರಿಂದ ನಮ್ಮ ಆರ್ಥಿಕ ಪದ್ಧತಿಯ ಮೇಲೆ ಏನು ಪರಿಣಾಮವಾದೀತೆಂದು ವಿಚಾರಿಸಲು ಪ್ರಯತ್ನ ಮಾಡಲಾಗುವದು.

ಇದರಿಂದ ಒಳಿತಾಗಬಹುದೋ ಕೆಡುಕೋ ಎಂಬುದು ದೊಡ್ಡ ದೊಡ್ಡ ಅರ್ಥ ಶಾಸ್ತ್ರಜ್ಞರಲ್ಲಿ ಕೂಡ ವಾದಗ್ರಸ್ತ ವಿಷಯವೇ ಆಗಿದೆಯೆಂದು ಮೊದಲೇ ಹೇಳಬೇಕಾಗಿದೆ. ಇದರ ಪರಿಣಾಮಗಳು ಕೆಲಮಟ್ಟಿಗೆ ನಮ್ಮ ಸರಕಾರ ಕೈಕೊಳ್ಳಬಹುದಾದ ಕ್ರಮಗಳನ್ನೂ ಅವಲಂಬಿಸಿದೆ. ಒಂದು ವಿಷಯದಲ್ಲಿ ಮಾತ್ರ ಸಾಮಾನ್ಯ ಏಕಮತ್ಯವುಂಟು. ಬ್ರಿಟನ್ನಿನ ಸ್ಟರ್ಲಿಂಗಿನೊಡನೆ ಸಂಬಂಧವುಳಿಸಿಕೊಂಡು ಕಾಮನ್‌ವೆಲ್ತಿನೊಳಗೇ ನಾವು ಉಳಿದುದರಿಂದ ಬ್ರಿಟನ್ನಿನ ಬೆನ್ನು ಹತ್ತಿ ನಾವೂ ನಮ್ಮ ನಾಣ್ಯದ ಬೆಲೆಯನ್ನು ಇಳಿಸದೆ ಹಾದಿಯೆ ಇರಲಿಲ್ಲ. ಸಾಮ್ರಾಜ್ಯದಲ್ಲಿರದ ಅನೇಕ ಯುರೋಪಿಯನ್ ರಾಷ್ಟ್ರಗಳಲ್ಲದೆ ಅರ್ಗೆಂಟಿನದಂಥದ. ಅಮೇರಿಕೆಯ ರಾಷ್ಟ್ರ ಕೂಡ ತನ್ನ ನಾಣ್ಯದ ಬೆಲೆಯನ್ನು ಬ್ರಿಟನ್ನು ಕುಗ್ಗಿಸಿದ ಪ್ರಮಾಣಕ್ಕೆ ಕುಗ್ಗಿಸಿರುವದರಿಂದ ಇದರಲ್ಲಿ ನಮಗೆ ಸ್ವಾತಂತ್ರ್ಯವನ್ನು ತೋರ್ಪಡಿಸುವ ಅವಕಾಶ ಕಿಂಚಿತ್ತೂ ಇರಲಿಲ್ಲವೆಂದು ವೇದ್ಯವಾಗುತ್ತದೆ. ಪಾಕಿಸ್ತಾನವೊಂದೇ ತನ್ನ ನಾಣ್ಯದ ಬೆಲೆ ಇಳಿಸದೆ ಕುಳಿತಿದೆ. ಇದು ಸದ್ಯಕ್ಕೇನೋ ಅದಕ್ಕೆ ಅನುಕೂಲವೂ ಭಾರತವನ್ನು ತೊಂದರೆಗೊಳಪಡಿಸಲುಸಾಧಕವೂಆಗಬಹುದಾದರೂ ಕೆಲವೇ ತಿಂಗಳುಗಳಲ್ಲಿ ಅದೂ ಉಳಿದವರ ದಾರಿಯನ್ನೇ ಹಿಡಿಯಬೇಕಾದೀತೆಂದು ಬಲ್ಲವರು ಹೇಳುತ್ತಾರೆ.

ಡಾಲರ-ರೂಪಾಯಿ ವಿನಿಮಯ ದರ ಬದಲಾದುದರ ಮೊದಲನೆ ಪರಿಣಾಮವೆಂದರೆ—ಈಗಾಗಲೆ ಪೇಟೆಯಲ್ಲಿ ತೋರಿ ಬಂದಿರುವಂತೆ-ಅಮೇರಿಕೆಯ ಸಾಮಗ್ರಿಗಳು ಹಿಂದುಸ್ತಾನದಲ್ಲಿ ತುಟ್ಟಿಯಾಗುವದು. ಡಾಲರು ಕ್ಷೇತ್ರದಿಂದ ನಾವು ತರಿಸುವ ಸಾಮಗ್ರಿಗಳಿಗೆ ನಾವು ನೂರಕ್ಕೆ ೩೦ ರಷ್ಟು ಹೆಚ್ಚು ಬೆಲೆ ಕೊಡಬೇಕಾಗುವದು. ಹೀಗಿರುವಾಗ ಲಾಭದೃಷ್ಟಿಗಳಾದ ವ್ಯಾಪಾರಿಗಳು ಮುಖ್ಯಮಂತ್ರಿ ಜವಾಹರಲಾಲರ ಬಿನ್ನಹಕ್ಕೆ ಮನ್ನಣೆಯಿತ್ತು, ಈಗಾಗಲೇ ತಮ್ಮ ವಶದಲ್ಲಿರುವ ಅಮೇರಿಕನ್ ಸಾಮಾನುಗಳ ಬೆಲೆ ಏರಿಸದೆ ಕೂಡ್ರಲಾರರು. ಇನ್ನು ಮುಂದೆ ಬರುವವಂತೂ ತುಟ್ಟಿಯಾಗಿಯೇಆಗುವವು. ಇದರಿಂದ, ಶ್ರೀ ಅಶೋಕ ಮೆಹತಾ ಅವರು ಹೇಳಿದಂತೆ, ನಮ್ಮ ಜೀವನದ ವೆಚ್ಚ ಅಷ್ಟು ಮಟ್ಟಿಗೆ ಹೆಚ್ಚಿ ತೊಂದರೆಯುಂಟಾದೀತು. ಡಾಲರ ಪ್ರದೇಶದಿಂದ ನಮಗೆ ಬರುವ ಸಾಮಗ್ರಿಗಳಲ್ಲಿ ಆಹಾರ ಸಾಮಗ್ರಿಗಳೇ ಹೆಚ್ಚು. ಕಳೆದ ವರ್ಷ ನಾವು ೧೧೦ ಕೋಟಿ ರೂಪಾಯಿಗೂ ಮಿಕ್ಕಿ ಇದಕ್ಕಾಗಿ ತೆತ್ತಿದ್ದೆವು. ಇನ್ನು ಇದಕ್ಕೂ ಹೆಚ್ಚು ತೆರಬೇಕಾದೀತು. ಆದರೆ ಈ ವರ್ಷ ಇನ್ನು ಮುಂದೆ ಆ ಕ್ಷೇತ್ರದಿಂದ ಆಹಾರ ತರಿಸುವದನ್ನೇ ನಿಲ್ಲಿಸುವದಾಗಿ ಸರಕಾರ ಸಾರಿದೆ. ಶ್ರೀ ಆರ್. ಕೆ. ಸಿಧ್ವಾರೇ ಮೊದಲಾದ ಕೆಲ ಶಾಸ್ತ್ರಜ್ಞರು ಹೇಳುವಂತೆ ಭಾರತದಲ್ಲಿ ಒಂದು ವೇಳೆ ಆಹಾರದ ಕೊರತೆ ನಿಜವಾಗಿ ಇಲ್ಲದಿದ್ದರೆ ಸರಿ. ಒಂದು ವೇಳೆ ಕೊರತೆ ನಿಜವಾಗಿಯೂ ಇರುವದಾದರೆ ನಮ್ಮ ಹೆಚ್ಚು ಆಹಾರ ಬೆಳೆಯುವ ಗುರಿ ಸಿದ್ಧಿಸುವ ವರೆಗೆ ನಾವು ಕಡಿಮೆ ತಿನ್ನಲಾದರೂ ಸಿದ್ಧರಾಗಬೇಕು, ತುಟ್ಟಿ ಆಹಾರ ಕೊಳ್ಳಲಾದರೂ ಸಿದ್ಧರಾಗಬೇಕು. ಎರಡೂ ಹೆಚ್ಚುಕಡಿಮೆ ಒಂದೇ. ಆಹಾರ ಧಾನ್ಯಗಳೂ ಇತರ ಅಮೇರಿಕನ್ ಸಾಮಗ್ರಿಗಳೂ ತುಟ್ಟಿಯಾದರೆ ಅದರ ಪರಿಣಾಮ ಇತರ ಬೆಲೆಗಳ ಮೇಲೂ ಆಗಿ ಅತಿಪ್ರಸಂಗ ಬೆಳೆದೀತು. ಇಲ್ಲವೆ ಅದನ್ನು ಹಿಡಿತದಲ್ಲಿಡಲು ನಿಯಂತ್ರಣಗಳ ವ್ಯಾಪ್ತಿ ಹೆಚ್ಚಬಹುದು.

ಬೆಲೆಗಳನ್ನು ಹೆಚ್ಚಿಸಬಹುದಾದ ಇನ್ನೊಂದು ಪರಿಣಾಮವೆಂದರೆ ನಮ್ಮ ನಿರ್ಯಾತ ವ್ಯಾಪಾರ. ಡಾಲರ ಕ್ಷೇತ್ರದಲ್ಲಿ ನಮ್ಮ ಸಾಮಗ್ರಿಗಳು ಹೆಚ್ಚು ಅಗ್ಗವಾಗುವದರಿಂದ ನಿರ್ಯಾತಕ್ಕೆ ಹೆಚ್ಚು ತೇಜಿ ಬರುವದು. ನಮ್ಮ ನಿರ್ಯಾತದ ಮುಖ್ಯ ಸರಕುಗಳೆಂದರೆ ಸಣಬು, ಚಹ, ಮೆಂಗನೀಜ, ಬಟ್ಟೆ, ಅಭ್ರಕ, ಮತ್ತು ಎಣ್ಣೆಗಳು. ಇವುಗಳ ನಿರ್ಯಾತ ಹೆಚ್ಚಾದರೆ ಈ ಸಾಮಗ್ರಿಗಳು ದೇಶದಲ್ಲಿ ಕಡಿಮೆಯಾಗಿ ಬೆಲೆ ಹೆಚ್ಚಾಗಬಹುದು. ಬಟ್ಟೆಗೆ ಗಿರಾಕಿಯಿಲ್ಲದಿರುವದರಿಂದ ಅದು ನಿರ್ಯಾತವಾದರೇ ಕ್ಷೇಮವೆಂದು ನಮಗೆನಿಸಬಹುದು. ಮುಖ್ಯವಾಗಿ ಡಾಲರ ಕ್ಷೇತ್ರದಲ್ಲಿರುವ ಜಪಾನದ ಅಗ್ಗ ಬಟ್ಟೆಗಳ ಸಂಗಡ ನಾವು ಇನ್ನು ಯಶಸ್ವಿಯಾಗಿ ಸ್ಪರ್ಧಿಸಬಹುದು. ಆದರೆ ನಾವು ಅರಳೆಯಲ್ಲಿ ಸ್ವಯಂಪೂರ್ಣರಿಲ್ಲದೆ ಪಾಕಿಸ್ತಾನದಿಂದ ತರಿಸುತ್ತಿದ್ದು ಪಾಕಿಸ್ತಾನದ ರೂಪಾಯಿಯ ಬೆಲೆ ತಗ್ಗದಿರುವ ಕಾರಣ ಅದಕ್ಕೆ ನಾವು ಹೆಚ್ಚು ಬೆಲೆ ಕೊಟ್ಟು ಅಗ್ಗವಾಗಿ ಬಟ್ಟೆ ಮಾರುವದು ಲಾಭಕರವೆ? ಅಲ್ಲದೆ ನಮ್ಮಲ್ಲಿ ಈಗಿರುವ ಬಟ್ಟೆಯ ಸಮೃದ್ಧಿ ಅಷ್ಟು ಸ್ವಾಭಾವಿಕವಲ್ಲ. ಮಿತಿಮೀರಿದ ಬೆಲೆಯ ಪರಿಣಾಮವದು. ಹೀಗಿರುವಾಗ ನಿರ್ಯಾತ ಹೆಚ್ಚಿದರೆ ಬೆಲೆ ಇಳಿಯುವ ಆಶೆಯಿಲ್ಲ. ಬಡವನಿಗೆ ಬಟ್ಟೆ ಎಂದಿನಷ್ಟೆ ತುಟ್ಟಿಯಾದೀತು. ಕಚ್ಚಾ ಸಣಬನ್ನು ಪಾಕಿಸ್ತಾನದಿಂದ ತುಟ್ಟಿಯಾಗಿ ತರಿಸಿ ಪಕ್ಕಾ ಸಣಬನ್ನು ಅಗ್ಗವಾಗಿ ಮಾರುವ ಪ್ರಸಂಗ ಬರುವದರಿಂದ ಬಂಗಾಲದ ಸಣಬಿನ ಉದ್ಯಮಕ್ಕೆ ಘೋರ ಗಂಡಾಂತರವುಂಟಾಗಬಹುದು. ಮೇಲಾಗಿ ಬಟ್ಟೆಯೊಂದನ್ನು ಬಿಟ್ಟರೆ ಉಳಿದೆಲ್ಲ ಸಾಮಗ್ರಿಗಳನ್ನು ಭಾರತವಲ್ಲದೆ ಬೇರಾವ ರಾಷ್ಟ್ರವೂ ಕಳಿಸಲು ಸಮರ್ಥವಿಲ್ಲದಿರುವಾಗ ಅವುಗಳನ್ನು ಅಗ್ಗವಾಗಿ ಮಾರುವದು ಜಾಣತನವಲ್ಲ. ಇದೇ ದೃಷ್ಟಿಯಿಂದ ಇರಬೇಕು, ಭಾರತ ಸರಕಾರವೀಗ ವಿದೇಶಗಳಿಗಾಗುವ ನಿರ್ಯಾತಗಳ ಮೇಲೆ ಭಾರವಾದ ಕರ ಹೇರಿರುವದರಿಂದ ಇದರಿಂದಾಗಬಹುದಾದ ಹಾನಿ ಕಡಿಮೆಯಾದೀತೆಂದು ಹಾರೈಸೋಣ.

ನಮಗೆ ಬ್ರಿಟನ್ನಿನಿಂದ ಬರಬೇಕಾದ ಸ್ಟರ್ಲಿಂಗ್ ಶಿಲ್ಕಿನ ಬೆಲೆಯೂ ಈ ಕ್ರಮದಿಂದ ಇಳಿದುಹೋಗಿದೆ. ಮೊದಲು ೧೫೫ ಕೋಟಿ ಸ್ಟರ್ಲಿಂಗಿಗೆ ೬೦ ಕೋಟಿ ಡಾಲರು ಬರುತ್ತಿದ್ದರೆ ಈಗ ಅಷ್ಟೇ ಡಾಲರುಗಳಿಗೆ ೨೦ ಕೋಟಿ ಸ್ಟರ್ಲಿಂಗ್ ಕೊಡಬೇಕಾಗುವದು. ಹೀಗೆ ನಮಗಾದ ನಷ್ಟವನ್ನು ತುಂಬಿಕೊಡಲು ಬ್ರಿಟನ್ನು ಏನು ಮಾಡುವುದೋ ಗೊತ್ತಿಲ್ಲ. ಇದರಿಂದ ನಮ್ಮ ಡಾಲರ ಕೊರತೆ ಇನ್ನಷ್ಟು ಹೆಚ್ಚಿ ಅಮೇರಿಕೆಯಿಂದಲೂ ಕೆನಡಾದಿಂದಲೂ ನಮಗೆ ಅವಶ್ಯವಾಗಿ ಬೇಕಾದ ಯಂತ್ರಾದಿ ಸಾಮಗ್ರಿಗಳನ್ನು ತರಿಸುವುದು [illegible] ನಮ್ಮ ಆರ್ಥಿಕ [illegible] ಸ್ಟರ್ಲಿಂಗ್ ಪ್ರದೇಶದಿಂದಲೇ [illegible] ಸಾಮಗ್ರಿಗಳನ್ನು ಹೆಚ್ಚಾಗಿ ತರಬೇಕೆಂದು ಸರಕಾರದವರು [illegible] ಆದರೆ ಅದನ್ನು [illegible] ಇದೆ.

ಪಾಕಿಸ್ತಾನದವರು ತಮ್ಮ [illegible] ನಿರಾಕರಿಸಿದ್ದರಿಂದ [illegible] ನಾವು ತರಿಸುವ ಅರಳೆ, ಸಣಬು [illegible] ತುಟ್ಟಿಯಾಗುವ ಕಾರಣ [illegible] ನಿರ್ಯಾತ [illegible] ಸ್ಟರ್ಲಿಂಗ್ ಕ್ಷೇತ್ರಗಳಿಗೆ [illegible]

ಇದೆಲ್ಲ ಸಾಧ್ಯ [illegible] ಆದರೆ ನಾವು ಈ ಕ್ರಮವನ್ನು ಸ್ವೀಕರಿಸದೆ [illegible] ನಮ್ಮ ನಿರ್ಯಾತ (೧೯೪೮-೪೯) ಸ್ಟರ್ಲಿಂಗ್ ಮತ್ತು ಇತರ [illegible] ರಾಷ್ಟ್ರಗಳಿಗೆ [illegible] ಡಾಲರ ಪ್ರದೇಶಗಳಿಗೆ ಕೇವಲ [illegible] ನಾವು ಬ್ರಿಟನ್ನಿನ [illegible] ಸ್ಟರ್ಲಿಂಗ್ ಪ್ರದೇಶದಲ್ಲಿ ನಮಗೆ [illegible] ಧಕ್ಕೆಯುಂಟಾಗುತ್ತಿತ್ತು. [illegible] ಡಾಲರ ಪ್ರದೇಶದಲ್ಲಾಗುವ ಲಾಭಕ್ಕಿಂತ ಹೆಚ್ಚಾಗುತ್ತಿತ್ತು. ಇದಲ್ಲದೆ ಸಾಂಪ್ರದಾಯಿಕವಾಗಿ ಬಂದ ಆರ್ಥಿಕ ಸಂಬಂಧಗಳನ್ನು ಕಡಿದುಕೊಂಡು ಹೊಸವನ್ನು ನೇರ್ಪಡಿಸಿಕೊಳ್ಳುವ ವರೆಗೆ ನಮ್ಮ ಆರ್ಥಿಕ ಪದ್ಧತಿಯಲ್ಲಿ ಸಮತೋಲವನ್ನು ಕಾಯ್ದುಕೊಳ್ಳುವ ಬಗೆಯೆಂತು? [illegible] ನಮ್ಮ ವ್ಯಾಪಾರ [illegible] ವುದು.

ಅಮೇರಿಕೆಯ ಯಂತ್ರಾದಿ ಸಾಮಗ್ರಿಗಳು ತುಟ್ಟಿಯಾಗಿ ತೊಂದರೆಯಾಗಬಹುದಾದರೂ ರೂಪಾಯಿಗಳು ಅಗ್ಗವಾಗುವ ಕಾರಣ ಅಮೇರಿಕನ್ ಬಂಡವಲಗಾರರು ಭಾರತದಲ್ಲಿ ತಮ್ಮ ಹಣವನ್ನು ವಿನಿಯೋಗಿಸಲು ಮುಂದೆ ಬರಬಹುದೆಂಬ ಆಶೆಯುಂಟು. [illegible] ಸರಕಾರಿ ವಚನಗಳೂ ಇದಕ್ಕೆ ಅನುಕೂಲವಾಗಿವೆ.

ಇದರಿಂದ ಒಂದು ಪರಿಣಾಮವಂತೂ ನಿಶ್ಚಿತವೆಂದು ತೋರುತ್ತದೆ: ಕಾಮನ್‌ವೆಲ್ತ ರಾಷ್ಟ್ರಗಳೊಡನೆ ನಮ್ಮ ಆರ್ಥಿಕ ಸಂಬಂಧ ಇನ್ನಷ್ಟು ಬಿಗಿಯಾಗುವದು. ಬ್ರಿಟನ್ನಿನ ಸಂಕಟ ಕಾಲದಲ್ಲಿ ಈ ಕ್ರಮದಿಂದ ನಾವು ನೆರವಾದಂತಾಗಿದೆ. ಬ್ರಿಟನ ಆರ್ಥಿಕ ಸ್ಥಿತಿ ಸುಧಾರಿಸಿದರೆ ನಮಗೂ ಒಳಿತು. ಆದರೆ ಅದೇ ಈಗ ಸಂಶಯ. ಬ್ರಿಟಿಶ ಸಾಮಗ್ರಿಗಳ ಸ್ಪರ್ಧೆಯನ್ನೆದುರಿಸಲು ಅಮೇರಿಕನ್ ವ್ಯಾಪಾರಿಗಳು ತಮ್ಮ ಸಾಮಾನುಗಳ ಬೆಲೆಯಿಳಿಸಿದರೆ ಮತ್ತೆ ಬ್ರಿಟನ್ನು [illegible] ಇಳಿಯಬಹುದು. ಇದರಿಂದ [illegible] ಬೆಲೆಗಳು ಇಳಿಯಲು [illegible] ಬ್ರಿಟನ್ನಿಗೆ [illegible] ವಾಗದು. [illegible] ನಮ್ಮ ಆರ್ಥಿಕ ಸ್ಥಿತಿ [illegible] ಬ್ರಿಟನ್ನು [illegible] ಪೌಂಡಿನ ಬೆಲೆ [illegible] ಬೇಕಾದೀತು.

[illegible]

ಭಾರತಕ್ಕೆ ಯುದ್ಧ ಬೇಕಾಗಿಲ್ಲ: ಆದರೆ ಪಾಕಿಸ್ತಾನದ ಯುದ್ಧಾಹ್ವಾನವನ್ನು ಸ್ವೀಕರಿಸಲೂ ಅದು ಸಿದ್ಧವಿದೆ— ಪಂಡಿತ ಜವಾಹರಲಾಲರ ಗುಡುಗು—ಘಟನಾ ಸಮಿತಿಯ ಮುಕ್ತಾಯ

ನಮಗೆ ಯುದ್ಧವೆಂದಿಗೂ ಬೇಕಿಲ್ಲ

ಲುಧಿಯಾನಾದಲ್ಲಿಯ ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣ ಮಾಡುತ್ತ ಪಂಡಿತ ಜವಾಹರಲಾಲರು ಪಾಕಿಸ್ತಾನದ ಬಗ್ಗೆ ಭಾರತದ ಧೋರಣವನ್ನು ಸ್ಪಷ್ಟಪಡಿಸಿದರು. ಭಾರತ ಮತ್ತು ಪಾಕಿಸ್ತಾನದಲ್ಲಿಯ ಮತಭೇದಗಳನ್ನು ಶಸ್ತ್ರಗಳ ಸಹಾಯದಿಂದ ಬಗೆಹರಿಸಿಕೊಳ್ಳದೆ ವಿಚಾರ ವಿನಿಮಯದಿಂದಲೇ ನಿರ್ಣಯಿಸಿಕೊಳ್ಳಬೇಕೆಂದು ಭಾರತವು ಘೋಷಿಸಲು ಸಿದ್ಧವಿದೆ. ಪಾಕಿಸ್ತಾನದೊಡನೆ ಯುದ್ಧ ಸಂಭವಿಸುವದು ಎಂಬ ಸುದ್ದಿಗಳನ್ನು ನಾನು ಪಾಕಿಸ್ತಾನದ ಪತ್ರಿಕೆಗಳಲ್ಲಿ ಹೆಚ್ಚಾಗಿ ನೋಡುತ್ತೇನೆ. ಪಾಕಿಸ್ತಾನಿಗಳ ಮನಸ್ಸಿನೊಳಗಿಂದ ಈ ಹೆದರಿಕೆಯನ್ನು ಹೇಗೆ ತೆಗೆದುಹಾಕಬೇಕೆಂಬುದು ನನಗೆ ತಿಳಿಯದಾಗಿದೆ. ಆದರೂ ನೀವು ಕಂಗೆಡುವ ಕಾರಣವಿಲ್ಲ. ನೀವು ನಿಮ್ಮ ದೈನಂದಿನ ಕಾರ್ಯವನ್ನು ಶಾಂತಚಿತ್ತದಿಂದ ಸಾಗಿಸಬೇಕು. ಅನಿವಾರ್ಯ ಪರಿಸ್ಥಿತಿ ಬಂದೊದಗಿದ ಹೊರತು ಪಾಕಿಸ್ತಾನದ ಕೂಡ ಯುದ್ಧ ಸಂಭವಿಸುವದಿಲ್ಲ. ಪಾಕಿಸ್ತಾನವು ನಮ್ಮ ಮೇಲೆ ದಾಳಿ ಮಾಡಿದರೆ ಮಾತ್ರ ನಾವು ಯುದ್ಧ ಮಾಡುವೆವು. ಇನ್ನೊಂದು ಜಾಗತಿಕಯುದ್ಧ ಪ್ರಾರಂಭವಾದರೆ ಜಗತ್ತೇ ಹಾಳಾಗುವದೆಂದು ನಾವು ನಂಬಿರುವದರಿಂದ ಇನ್ನೊಂದು ಯುದ್ಧವನ್ನು ಪ್ರಾರಂಭಿಸಬಾರದೆಂದು ನಾವು ದೃಢನಿರ್ಧಾರದಿಂದಿದ್ದೇವೆ ಎಂದು ಜವಾಹರಲಾಲರು ಹೇಳಿದರು. ಜವಾಹರಲಾಲರು ಮುಂದೆ ಸಾಗುತ್ತ "ಹಿಂದುಸ್ತಾನವು ಯಾವುದೊಂದು ಗುಂಪನ್ನು ಸೇರದೆ ಎಲ್ಲರೊಡನೆಯೂ ಸ್ನೇಹದಿಂದಿರಬೇಕೆಂದು ಬಯಸುತ್ತದೆ. ಅಂದಬಳಿಕ ಪಾಕಿಸ್ತಾನದ ಬಗ್ಗೆ ನಾವು ಬೇರೆ ಧೋರಣವನ್ನು ಹೇಗೆ ಸ್ವೀಕರಿಸುವೆವು? ಕಾಶ್ಮೀರಿಗಳು ನಮ್ಮ ನೆರವನ್ನು ಕೇಳಿಕೊಂಡಿದ್ದರಿಂದಲೆ ನಾವು ಪಾಕಿಸ್ತಾನದೊಡನೆ ಯುದ್ಧಮಾಡಬೇಕಾಯಿತು. ನಾವು ಪಾಕಿಸ್ತಾನದ ಮೇಲೆ ದಾಳಿ ಮಾಡುವದಿಲ್ಲೆಂದು ಖಂಡಿತವಾಗಿ ನಂಬಿರಿ. ಆದರೆ ಅವರು ದಾಳಿಮಾಡಿದರೆ ಮಾತ್ರ ಸರ್ವಸಾಮರ್ಥ್ಯದಿಂದ ನಾವದನ್ನು ಎದುರಿಸುವೆವು.

ಪಂಡಿತ ಜವಾಹರಲಾಲರು ಫಿರೋಜಪುರದ ಸಭೆಯಲ್ಲಿಯೂ ಹಿಂದ-ಪಾಕ ಸಂಬಂಧವನ್ನು ವಿವರಿಸುತ್ತ ಮಹತ್ವದ ಮಾತುಗಳನ್ನು ಹೇಳಿದರು. ಹಿಂದುಸ್ತಾನದ ರಕ್ಷಣೆಗೆ ಕಾಶ್ಮೀರು ಅತ್ಯಗತ್ಯವಾಗಿರುವದರಿಂದ ಈ ವಿಷಯದಲ್ಲಿ ನಾವು ನಮ್ಮ ಧೋರಣವನ್ನು ಸ್ವಲ್ಪವೂ ಬದಲಿಸಲಾರೆವು. ನಮ್ಮ ಸರಕಾರವು ಪೂರ್ಣ ವಿಚಾರ ಮಾಡಿದ ನಂತರ ಕಾಶ್ಮೀರ ಸಮಿತಿಯ ಅಧ್ಯಕ್ಷ ಟ್ರೂಮನ್ ಆಟ್ಲಿಯವರು ಬೆಂಬಲಿಸಿದ ಮಧ್ಯಸ್ಥಿಯ ಸೂಚನೆಯನ್ನು ನಿರಾಕರಿಸಿತು ಎಂದು ಪಂಡಿತರು ಸ್ಪಷ್ಟಪಡಿಸಿದರು. ಮೊದಲು ಕಾಶ್ಮೀರನ್ನು ಆಕ್ರಮಿಸಬೇಕು ಅನಂತರ ಪಟಿಯಾಲಾ ದಿಲ್ಲಿ ಚಲೋ ಇದು ಪಾಕಿಸ್ತಾನದ ಒಳಗುಟ್ಟಾಗಿದೆ. ಆದರೆ ಇದೆಂದಿಗೂ ಸಂಭವಿಸಲಾರದು. ಅದರ ಕುತ್ಸಿತ ಯೋಜನೆಯನ್ನು ಮಣ್ಣುಗೂಡಿಸಲು ನಾವು ಸಮರ್ಥರಿದ್ದೇವೆಂದು ಹೇಳಿದರು. ಈ ಸಭೆಯಲ್ಲಿ ಕೆಲವರು ಗುಂಡು ಹಾರಿಸಿದರು. ಇದನ್ನು ಉಲ್ಲೇಖಿಸುತ್ತ ಪಂಡಿತರು "ಇಲ್ಲಿ ಗುಂಡುಹಾರಿಸಿ ಗಲಿಬಿಲಿ ಮಾಡಿದಿರಿ. ಕಲಕತ್ತೆಯ ಸಭೆಯಲ್ಲಿ ಬಾಂಬಿನ ಸ್ಫೋಟವಾಗಿ ಕೆಲವರು ಗಾಯಗೊಂಡರೂ ಜನರು ಕದಲಲಿಲ್ಲ" ಎಂದು ಹೇಳಿದರು. "ಶಾಂತಿಯೇ ನಮ್ಮ ಧ್ಯೇಯ. ಆದುದರಿಂದ ಪೂರ್ವ ಪಂಜಾಬಿನ ಜನರು ಪಶ್ಚಿಮದ ಗಡಿಗಳಲ್ಲಿರುವವರು ಹಾರಿಕೆಯ ಸುದ್ದಿಗಳಿಗೆ ಬೆದರಬಾರದೆಂದು ಹೇಳಿದರು. ಸೈನಿಕರ ಸಭೆಯಲ್ಲಿ ಭಾಷಣ ಮಾಡುತ್ತ ಜವಾಹರಲಾಲರು ಹಿಂದೀ ಸೈನಿಕರ ಶೌರ್ಯ ಸಾಹಸಗಳನ್ನು ಬಣ್ಣಿಸಿ ಹಿಂದುಸ್ತಾನ ಸರಕಾರದ ಧೋರಣವನ್ನು ಸ್ಪಷ್ಟೀಕರಿಸಿದರು.

ಕಾಶ್ಮೀರ ಮತ್ತು ಭಾರತ

ಭಾರತದ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲ ನೆಹರು ಇವರು ಅಂಬಾಲಾದಲ್ಲಿ ಸೈನ್ಯಗಾರರ ಸಭೆಯಲ್ಲಿ ಮಾತಾಡುತ್ತ, ಕಾಶ್ಮೀರ ಸಮಸ್ಯೆಯ ಸಂಬಂಧದಲ್ಲಿ ಭಾರತದ ನಿಲುವು ಯೋಗ್ಯವಾಗಿದೆಯೆಂದು ಅಭಿಪ್ರಾಯಪಟ್ಟರು. ಭಾರತ ಮತ್ತು ಪಾಕಿಸ್ತಾನಗಳ ನಡುವೆ ಬಗೆಹರಿಸಿಕೊಳ್ಳಬೇಕಾದ ಚಿಕ್ಕಪುಟ್ಟ ವಿಷಯಗಳಲ್ಲದೆ ಕಾಶ್ಮೀರ ಸಮಸ್ಯೆ ನಿರಾಶ್ರಿತರ ಆಸ್ತಿಯ ವಿಚಾರ, ಕಾಲುವೆಗಳು ನೀರಿನ ಪ್ರಶ್ನೆ ಮುಂತಾದ ಗಹನ ಸಮಸ್ಯೆಗಳು ಉಳಿದುಕೊಂಡಿವೆ. ಕಾಶ್ಮೀರದ ಬಗ್ಗೆ ನಮ್ಮ ನಿಲುವು ಯೋಗ್ಯವಿದೆ. ಕಾಶ್ಮೀರಿಗಳಿಗೆ, ಹಿಂದೀಯರಿಗೆ ನಾವು ಅನೇಕ ಆಶ್ವಾಸನ ಕೊಟ್ಟಿದ್ದೇವೆ. ನಮಗೆ ಅನುಕೂಲವಾಗುವಂಥ ನಿರ್ಣಯವನ್ನು ಕಾಶ್ಮೀರಿಗಳ ಮೇಲೆ ನಾವು ಹೇರಬಯಸುವದಿಲ್ಲ. ಅನೇಕ ಕಾರಣಗಳಿಗಾಗಿ ಕಾಶ್ಮೀರು ಭಾರತದಲ್ಲಿ ಉಳಿಯಬೇಕೆಂದು ನಾವು ಹೇಳಿದ್ದರೂ ಕಾಶ್ಮೀರಿಗಳ ನಿರ್ಣಯವೇ ಕೊನೆಯದಾಗಬಲ್ಲುದು. ಪಾಕಿಸ್ತಾನವನ್ನು ಸಂತೋಷಿಸಲು ಹಾಗೆಲ್ಲ ಹೇಳಿಲ್ಲ; ಆದರೆ ಇಡೀ ಜಗತ್ತೇ ಅರಿತುಕೊಳ್ಳಲೆಂದು ನಾವು ಹಾಗೆ ಹೇಳಿದ್ದು ಎಂದು ಸ್ಪಷ್ಟಪಡಿಸಿದರು. ಆಜಾದ ಸೈನ್ಯದ ವಿಸರ್ಜನೆಯ ಬಗ್ಗೆ ನಾವು ಆಗ್ರಹ ತಾಳುತಿರುವದೇಕೆ? ಹಾಗೆ ಆಗದಿದ್ದರೆ ಕಾಶ್ಮೀರಿಗೆ ದಾಳಿಯ ಅಂಜಿಕೆ ತಪ್ಪದು. ಆಜಾದ ಸೈನ್ಯದ ವಿಸರ್ಜನೆಯ ಬಗ್ಗೆ ಕಾಶ್ಮೀರ ಸಮಿತಿಯು ನಮಗೆ ಆಶ್ವಾಸನ ಕೊಟ್ಟಿತ್ತು. ಹೀಗೆ ಈ ಮೊದಲೇ ಬಗೆಹರಿದ ವಿಷಯವನ್ನು ಈಗ ಮಧ್ಯಸ್ತಿಗೊಪ್ಪಿಸುವದು ಸಾಧ್ಯವಿಲ್ಲ. ಅದರಿಂದ ನಮ್ಮ ವಚನಕ್ಕೆ ಭಂಗ ಬರುತ್ತದೆ. ನಮ್ಮ ಗೌರವಕ್ಕೆ ಭಂಗ ತರುವಂತಹ ವಿಷಯಗಳಲ್ಲಿ ಮಾತ್ರ ಮಧ್ಯಸ್ತಿ ಸಾಧ್ಯವಿಲ್ಲ ಎಂದು ಹೇಳಿದರು. ನಿರಾಶ್ರಿತರ ಸಂಬಂಧದಲ್ಲಿಯೂ ಪಾಕಿಸ್ತಾನವು ಒಡಂಬಡಿಕೆಗೆ ಸಿದ್ಧವಿಲ್ಲ. ಇಂಥ ಎಲ್ಲ ವಿಚಾರಗಳನ್ನು ಯುದ್ಧ ಮೂಲಕ ಬಗೆಹರಿಸಿಕೊಳ್ಳಬಾರದು. ವಿಚಾರವಿನಿಮಯದ ಮೂಲಕ ಬಗೆಹರಿಸಿಕೊಳ್ಳಬೇಕೆಂದು ನಮ್ಮ ಸರಕಾರ ಬಯಸುತ್ತದೆ ಎಂದು ನಾನು ಹೇಳಬಲ್ಲೆ ಎಂದು ಮುಂತಾಗಿ ಜವಾಹರರು ಸ್ಪಷ್ಟೀಕರಿಸಿದರು.

ಘಟನಾಸಮಿತಿಯ ಮುಕ್ತಾಯ

ಹಿಂದುಸ್ತಾನದ ಘಟನಾ ಸಮಿತಿಯ ಏಳು ವಾರಗಳ ಮಹತ್ವದ ಅಧಿವೇಶನವು ೧೮ ನೇ ತಾರೀಕಿನ ದಿನ ಭಾರತ ಮಾತಾಕೀ ಜೈ ಎಂಬ ಜಯಘೋಷದೊಡನೆ ಮುಕ್ತಾಯವಾಯಿತು. ಹಿಂದುಸ್ತಾನವನ್ನು ಭಾರತವೆಂದು ಕರೆಯಬೇಕು. ಅಂತಾರಾಷ್ಟ್ರೀಯ ವ್ಯವಹಾರದಲ್ಲಿ ಅದಕ್ಕೆ ಇಂಡಿಯಾ ಎಂದು ಕರೆಯತಕ್ಕದ್ದು ಎಂಬ ನಿರ್ಣಯವೂ ಸ್ವೀಕೃತವಾಯಿತು. ಘಟನೆಯ ಪ್ರತಿಯನ್ನು ಹಿಂದಿಯಲ್ಲಿ ಭಾಷಾಂತರಿಸಿ ಜನವರಿ ೨೬ ರೊಳಗಾಗಿ ಅದನ್ನು ಪ್ರಕಟಿಸುವ ಬಗ್ಗೆ ಕ್ರಮಗಳನ್ನು ಕೈಗೊಳ್ಳಬೇಕೆಂಬ ಶ್ರೀ ಮುನಶಿಯವರು ಮಂಡಿಸಿದ ಗೊತ್ತುವಳಿಯು ಸ್ವೀಕೃತವಾಯಿತು. ತನಗೆ ಸರಿಕಂಡ ಭಾರತದ ಇತರ ದೊಡ್ಡ ಭಾಷೆಗಳಲ್ಲಿಯೂ ಘಟನೆಯ ಭಾಷಾಂತರವನ್ನು ಪ್ರಸಿದ್ಧಿಸುವ ಏರ್ಪಾಡನ್ನು ಮಾಡುವ ಅಧಿಕಾರವನ್ನು ಅಧ್ಯಕ್ಷರಿಗೆ ಕೊಡಲಾಯಿತು. ಪಾರಿಭಾಷಿಕ ಶಬ್ದಗಳಿಗೆ ಉಚಿತವಾದ ಶಬ್ದಗಳನ್ನು ಆಯಾ ಭಾಷೆಗಳ ತಜ್ಞರು ಸೂಚಿಸಬೇಕೆಂದು ಅಧ್ಯಕ್ಷರು ಬಿನ್ನವಿಸಿಕೊಂಡರು. ಕಳೆದ ೧೬೫ ವರ್ಷಗಳ ವರೆಗೆ ಸಂಬಂಧವಿದ್ದ ಲಂಡನದ ಪ್ರಿವಿ ಕೌನ್ಸಿಲಿನ ಹಿಂದೀ ಅಪೀಲುಗಳನ್ನು ಕೇಳುವ ಅಧಿಕಾರ ಮುಕ್ತಾಯಗೊಳಿಸಿ ಅದರ ಮುಂದೆ ಈಗಿರುವ ಅಪೀಲುಗಳನ್ನು ಹಿಂದುಸ್ತಾನದ ಫೆಡರಲ್ ಕೋರ್ಟಿಗೆ ವರ್ಗಾಯಿಸುವ ಮಸೂದೆಯನ್ನು ಡಾ. ಅಂಬೇಡಕರರು ಮಂಡಿಸಿದರು. ಸಭೆಯು ಅದಕ್ಕೆ ಒಪ್ಪಿಗೆ ಕೊಟ್ಟಿತು. ಪ್ರಿವಿ ಕೌನ್ಸಿಲಿನ ಅಧಿಕಾರವು ಇಂತು ಆಕ್ಟೋಬರ ೧೦ ಕ್ಕೆ ಮುಕ್ತಾಯಗೊಳ್ಳುವದು. ಆ ಬಳಿಕ ಘಟನೆಯಲ್ಲಿ ಮೂಲಭೂತವಾದ ತಿದ್ದುಪಡಿ ಕ್ರಮಗಳ ಬಗ್ಗೆ ಇರುವ ಕಲಮುಗಳು ಸ್ವೀಕೃತವಾದವು. ಧನ ಸಹಾಯ ನೀಡಲೊಪ್ಪಿಗೆ ಹಣಕಾಸಿನ ವ್ಯವಸ್ಥೆ, ಹೊಸ ಪ್ರಾಂತಗಳ ರಚನೆ ಅಥವಾ ಈಗಿರುವ ಪ್ರಾಂತಗಳ ಪುನಾರಚನೆ ಪ್ರಾಂತಗಳಲ್ಲಿ ಮೇಲ್ಮನೆಗಳನ್ನು ಸ್ಥಾಪಿಸುವದು ಅಥವಾ ರದ್ದುಪಡಿಸುವದು ಕೇಂದ್ರ ಆಡಳಿತಕ್ಕೊಳಪಟ್ಟ ಪ್ರದೇಶಗಳ ಆಡಳಿತ, ಪರಿಶಿಷ್ಟ ಪ್ರದೇಶ ಮತ್ತು ವರ್ಗಗಳು ಈ ವಿಷಯದಲ್ಲಿ ಘಟನೆಯನ್ನು ಪಾರ್ಲಮೆಂಟು ಸಾಮಾನ್ಯ ಬಹುಮತದಿಂದ ತಿದ್ದಬಹುದು. ಇವು ಮೊದಲನೆಯ ವರ್ಗದ ವಿಷಯಗಳು. ಎರಡನೆಯ ವರ್ಗದ ವಿಷಯಗಳನ್ನು ಪ್ರತಿಯೊಂದು ಸಭೆಯ ಒಟ್ಟು ಸದಸ್ಯರ ಬಹುಮತದಿಂದ ಇಲ್ಲವೆ ಸಭೆಯಲ್ಲಿ ಹಾಜರಿದ್ದ ಸದಸ್ಯರ ಎರಡು ಮೂರಾಂಶ ಬಹುಮತದಿಂದ ತಿದ್ದಬಹುದು. ಮೂರನೆಯ ವರ್ಗದ ವಿಷಯಗಳನ್ನು ಮಾತ್ರ ಅರ್ಧಕ್ಕಿಂತ ಹೆಚ್ಚು ಪ್ರಾಂತಗಳ ಮತ್ತು ಸಂಸ್ಥಾನಗಳ ಒಪ್ಪಿಗೆಯಿಂದ ತಿದ್ದಬೇಕಾಗುವದು.

ಅಧ್ಯಕ್ಷರ ಆಯ್ಕೆ ಕೇಂದ್ರ ಮತ್ತು ಪ್ರಾಂತಗಳ ಕಾರ್ಯನಿರ್ವಾಹಕ ಅಧಿಕಾರ ಪರಿಧಿ, ನ್ಯಾಯಾಲಯ ಮತ್ತು ಹೈಕೋರ್ಟುಗಳು ಶಾಸನಿಕ ಅಧಿಕಾರದ ಹಂಚುವಿಕೆ ಪ್ರಾಂತಗಳ ಪ್ರಾತಿನಿಧ್ಯ ಮೊದಲಾದವು ಈ ವರ್ಗದಲ್ಲಿ ಬರುತ್ತವೆ. ಪಾರ್ಲಿಮೆಂಟಿನ ವ್ಯವಹಾರ ಹಿಂದೀ ಅಥವಾ ಇಂಗ್ಲೀಷಿನಲ್ಲಿ ನಡೆಯಬೇಕು. ೧೫ ವರ್ಷಗಳ ನಂತರ ಇಂಗ್ಲಿಶನ್ನು ಉಳಿಸಿಕೊಳ್ಳದಿದ್ದರೆ ಅದು ಹೋಗುವದೆಂದು ಹೇಳಲಾಗಿದೆ. ಈ ಎರಡೂ ಭಾಷೆಗಳು ಸಾಕಷ್ಟು ಬಾರದಿದ್ದವರಿಗೆ ಅವರ ಮಾತೃಭಾಷೆಯಲ್ಲಿ ಮಾತಾಡಲು ಅಧ್ಯಕ್ಷರು ಅಪ್ಪಣೆಕೊಡಬಹುದೆಂದೂ ಸ್ವೀಕೃತ ಕಲಮಿನಲ್ಲಿ ಹೇಳಲಾಗಿದೆ. ಪ್ರಾಂತದ ಶಾಸನ ಸಭೆಗಳ ಕಾರ್ಯವು ಪ್ರಾಂತದ ಅಧಿಕೃತ ಭಾಷೆ ಅಥವಾ ಭಾಷೆಗಳಲ್ಲಿ ಹಿಂದೀ ಅಥವಾ ಇಂಗ್ಲಿಶಿನಲ್ಲಿ ನಡೆಯಬೇಕು. ೧೫ ವರುಷಗಳ ನಂತರ ಮೇಲಿನಂತೆ ಅಲ್ಲಿಯೂ ಇಂಗ್ಲಿಶ ಮಾಯವಾಗುವದು. ಇಂತು ನಿರ್ಣಯ ಸ್ವೀಕರಿಸಿ ಘಟನಾ ಸಮಿತಿಯ ಅಧಿವೇಶನವು ೧೮ ಕ್ಕೆ ಮುಕ್ತಾಯ ಗೊಂಡಿತು. ಅದು ಆಕ್ಟೋಬರ ಮೊದಲನೇ ವಾರದಲ್ಲಿ ಮತ್ತೆ ಸೇರಲಿದ್ದು ಆಗ ಸಂಸ್ಥಾನಗಳಿಗೆ ಸಂಬಂಧಿಸಿದ ಕಲಮುಗಳ ಮತ್ತು ಅಲ್ಪ ಸಂಖ್ಯರಿಗೆ ಸಂಬಂಧಿಸಿದ ಕಲಮುಗಳ ಚರ್ಚೆ ನಡೆಯುವದು.

ಮುಂಬಯಿ ಶಾಸನ ಸಭೆ

ಮುಂಬಯಿ ಶಾಸನ ಸಭೆಯಲ್ಲಿ ೧೯ ನೇ ತಾರೀಕಿನ ದಿನ ಸ್ಥಾನಿಕ ಸ್ವರಾಜ್ಯಮಂತ್ರಿಗಳಾದ ಶ್ರೀ ಜಿ. ಡಿ. ವರ್ತಕರು ೪೯೩ ಕಲಮುಗಳುಳ್ಳ ಅಹಮದಾಬಾದ, ಪುಣೆ ಕಾರಪರೇಶನಗಳ ರಚನೆಯ ಮಸೂದೆಯನ್ನು ಮಂಡಿಸಿದರು. ಮುಂಬಯಿ ಮುನಸಿಪಾಲಟಿ ಕಾಯದೆಯನ್ನು ಮಾದರಿಯಾಗಿಟ್ಟುಕೊಂಡು ಈ ಮಸೂದೆಯನ್ನು ರಚಿಸಲಾಗಿದೆ. ಪುಣೆ ಅಹಮದಾಬಾದಗಳಲ್ಲಿಯ ನಾಗರಿಕರು ಹೆಚ್ಚುಹೆಚ್ಚು ಹೊಣೆ ನಿರ್ವಹಿಸಲು ಆತುರತೆಯನ್ನು ತೋರಿಸಹತ್ತಿದ್ದರಿಂದ ಸರಕಾರದವರು ಈ ಮಸೂದೆಯನ್ನು ಮಂಡಿಸಿರುವರೆಂದು ಮುಂತಾಗಿ ಮಂತ್ರಿಗಳಾದ ವರ್ತಕರು ತಮ್ಮ ಭಾಷಣದಲ್ಲಿ ಹೇಳಿದರು. ಈ ಮಸೂದೆಯ ರಚನೆ ಮುಂಬಯಿ ಕಾರಪರೇಶನ ಮಸೂದೆಯಂತಿದ್ದರೂ ಪ್ರಾಥಮಿಕ ಶಿಕ್ಷಣದ ವಿಷಯದಲ್ಲಿ ಕಾರ್ಯಾಧಿಕಾರವು ಸ್ಕೂಲಬೋರ್ಡಿಗೆ ಸೇರುವದು. ಈ ಮಸೂದೆಯ ಪರಿಶೀಲಕ ಸಮಿತಿಯವರು ಸಪ್ಟಂಬರ ೨೧ ಕ್ಕೆ ತಮ್ಮ ವರದಿಯನ್ನು ಒಪ್ಪಿಸುವರು.

ಮುಂಬಯಿ ಪ್ರಾಂತದಲ್ಲಿ ಸಾರ್ವಜನಿಕ ಧಾರ್ಮಿಕ ಮತ್ತು ಧರ್ಮಾರ್ಥ ಟ್ರಸ್ಟುಗಳ ಆಡಳಿತೆಯನ್ನು ನಿಯಮನಗೊಳಿಸುವ ಮಸೂದೆಯನ್ನು ಕಾಯದೆ ಮಂತ್ರಿಗಳಾದ ಶ್ರೀ ದಿನಕರರಾವ ದೇಸಾಯರು ೨೦ ಕ್ಕೆ ಶಾಸನ ಸಭೆಯಲ್ಲಿ ಮಂಡಿಸಿದರು. ೧೯೪೭ ರಲ್ಲಿ ಶಾಸನ ಸಭೆಯು ಗೊತ್ತುವಳಿಯನ್ನು ಸ್ವೀಕರಿಸಿ ಈ ಬಗ್ಗೆ ಒಂದು ಸಮಿತಿಯನ್ನು ನೇಮಿಸಲು ಶಿಫಾರಸಮಾಡಿತ್ತು. ನ್ಯಾಯಮೂರ್ತಿ ಟೆಂಡುಲಕರರ ಅಧ್ಯಕ್ಷತೆಯಲ್ಲಿ ನೇಮಿಸಿದ್ದ ಈ ಸಮಿತಿಗೆ ಹಿಂದೂ ಜೈನ ಟ್ರಸ್ಟುಗಳ ಬಗ್ಗೆ ಮಾತ್ರ ವರದಿ ಮಾಡಲು ಕೇಳಿಕೊಳ್ಳಲಾಗಿತ್ತು. ಸಮಿತಿಯು ಕೆಲ ಶಿಫಾರಸುಗಳನ್ನು ಮಾಡಿದೆ. ಆದರೆ ಸರಕಾರದವರು ಈಗ ಹಿಂದೂ, ಮುಸಲ್ಮಾನ, ಜೈನ, ಪಾರ್ಸಿ ಎಲ್ಲ ಧರ್ಮದವರ ಟ್ರಸ್ಟುಗಳ ಬಗ್ಗೆ ಕಾಯದೆಮಾಡಬೇಕೆಂದು ನಿರ್ಧರಿಸಿದೆ. ಈ ಕಾಯದೆಯನ್ನು ಎಲ್ಲ ಟ್ರಸ್ಟುಗಳಿಗೆ ಅನ್ವಯಿಸಲು ಸರಕಾರಕ್ಕೆ ಇದರಿಂದ ಅಧಿಕಾರ ಪ್ರಾಪ್ತವಾಗುವದು. ಈ ಕ್ರಮ ಕೈಕೊಳ್ಳುವ ಮೊದಲು ಆಯಾ ಧರ್ಮದವರ ಆಕ್ಷೇಪಗಳನ್ನು ಕೇಳಿಕೊಳ್ಳಲಾಗುವದು. ಜನತಾ ರಾಜ್ಯವು ಅಧಿಕಾರದಲ್ಲಿ ಇರುವದರಿಂದ ಯಾವದೇ ಧರ್ಮದವರ ಹಕ್ಕುಗಳನ್ನು ಸಂರಕ್ಷಿಸಲು ಮತ್ತು ಅವರ ತೊಂದರೆಗಳನ್ನು ದೂರ ಮಾಡಲು ಸಾಧ್ಯವಿದೆ. ದೇವಾಲಯ, ಮಠ, ಧಾರ್ಮಿಕ, ಧರ್ಮಾರ್ಥ ಉಂಬಳಿಗಳು ಮತ್ತು ಧಾರ್ಮಿಕ ಧರ್ಮಾರ್ಥ ಉದ್ದೇಶಗಳಿಗಾಗಿ ರಚಿತವಾದ ಸಂಘಗಳೂ ವಿಶ್ವಾಸ ನಿಧಿಗಳಾಗುವವು. ಬಡವರಿಗೆ ಪರಿಹಾರ ಕೊಡುವ ಶಿಕ್ಷಣಕ್ಕಾಗಿ ಸಹಾಯ ನೀಡುವ, ವೈದ್ಯಕೀಯ ಸಹಾಯ ನೀಡುವ ಮತ್ತಿತರ ಜನಹಿತೋಪಯೋಗೀ ಉದ್ದೇಶಗಳಿಂದ ಕೂಡಿದ ಸಂಸ್ಥೆಗಳು ಧರ್ಮಾರ್ಥ ವಿಶ್ವಸ್ತನಿಧಿಗಳಾಗುವವು. ಆದರೆ ಕೇವಲ ಸಂಧ್ಯಾ, ಧಾರ್ಮಿಕ ಶಿಕ್ಷಣ, ಪೂಜೆಗಳಿಗೆ ಸಂಬಂಧಿಸಿದ ಉದ್ದೇಶವುಳ್ಳ ಸಂಸ್ಥೆಗಳನ್ನು ವಿಶ್ವಸ್ತನಿಧಿಯ ಉದ್ದೇಶದಿಂದ ಹೊರತು ಪಡಿಸಲಾಗಿದೆ. ಈ ಕಾಯದೆಯ ಪರಿಪಾಲನಕ್ಕಾಗಿ ಓರ್ವ ಕಮೀಶನರ ಮತ್ತು ಪ್ರತಿಯೊಂದು ಪ್ರದೇಶಕ್ಕಾಗಿ ಅಸಿಸ್ಟಂಟ ಕಮೀಶನರನನ್ನು ಮತ್ತು ಇತರ ಅಧಿಕಾರಿಗಳನ್ನು ನೇಮಿಸಲಾಗುವದು. ಈ ವಿಶ್ವಸ್ತ ನಿಧಿಗಳೆಲ್ಲ ರಜಿಸ್ಟರ ಆಗಬೇಕು ಇಲ್ಲದಿದ್ದರೆ ದಂಡಕ್ಕೊಳಗಾಗುವವು. ನಿಯಮಿತ ಲೆಕ್ಕಪತ್ರಗಳನ್ನು ಇಡಬೇಕಾಗುವದು— ಘಟನಾ ಸಮಿತಿಯ ಕರಡಿನ ೨೦ ನೇ ಕಲಮಿಗೆ ಇದು ವಿರೋಧಕವಾಗಿದೆಯೆಂದು ಕೆಲವರು ಸಂಶಯ ತಾಳುತಿರುವರು. ಆದರೆ ತಮ್ಮ ಅಭಿಪ್ರಾಯವು ಹಾಗಿರುವದಿಲ್ಲೆಂದು ಮಂತ್ರಿವರ್ಯ ದಿನಕರರಾಯರು ಹೇಳಿದರು. ಕಮೀಶನರರು ಈ ವಿಶ್ವಸ್ತನಿಧಿಯ ದುರುಪಯೋಗ ಮಾಡಬಹುದೆಂದು ಕೆಲವರ ಆಕ್ಷೇಪ. ಆದರೆ ಹೀಗೆ ಮಾಡುವ ಮೊದಲು ಅವರು ನ್ಯಾಯಾಲಯದ ಅಪ್ಪಣೆ ಪಡೆಯಬೇಕಾಗುವದಾದ್ದರಿಂದ ಸಂಶಯಕ್ಕೆ ಎಡೆಯಿಲ್ಲ. ಅಲ್ಲದೆ ಇದರಿಂದ ಅತೃಪ್ತರಾದರೆ ಹೈಕೋರ್ಟಿಗೆ ಹೋಗಬಹುದು ಎಂದೂ ಮಂತ್ರಿಗಳು ಹೇಳಿದರು. ಮುಖ್ಯ ಮಂತ್ರಿಗಳಾದ ಶ್ರೀ ಬಾಳಾಸಾಹೇಬ ಖೇರರೂ ಭಾಷಣಮಾಡುತ್ತ ಈ ಮಸೂದೆಯು ಯಾವದೇ ಬಗೆಯಿಂದ ಕ್ರಾಂತಿಕಾರಕವಿಲ್ಲೆಂದು ಮುಂತಾಗಿ ಅದನ್ನು ಸಮರ್ಥಿಸಿದರು.

ಭಾರತದಲ್ಲಿ ಗುಪ್ತ ಸಂಪತ್ತು

ಉತ್ಪನ್ನಕರದ ಆದಾಯವು ೧೦ ಕೋಟಿ ರೂಪಾಯಿಗಳಷ್ಟು ಹೆಚ್ಚಾಗುವದು ಸಾಧ್ಯವಿದೆಯೆಂದು ಉತ್ಪನ್ನ ಕರ ವಿಚಾರಣಾ ಸಮಿತಿಯು ತನ್ನ ವರದಿಯಲ್ಲಿ ಅಭಿವ್ಯಕ್ತಮಾಡಿದೆಯೆಂದು ತಿಳಿಯುತ್ತದೆ. ಶ್ರೀ ಎಸ್. ವರದಾಚಾರಿಯವರ ಅಧ್ಯಕ್ಷತೆಯಲ್ಲಿ ನೇಮಕ ಹೊಂದಿದ್ದ ಈ ಸಮಿತಿಯು ಕಳೆದವಾರ ಮುಂಬಯಿಯಲ್ಲಿ ಕೂಡಿ ಈ ವಿಷಯದ ಚರ್ಚೆ ಮಾಡಿತು. ಕರವನ್ನು ತಪ್ಪಿಸಿ ಬಚ್ಚಿಟ್ಟುಕೊಂಡಿರುವ ನಮ್ಮ ದೇಶದಲ್ಲಿ ಸುಮಾರು ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಸಂಪತ್ತು ಇದೆ. ಮುಂಬಯಿ ಪ್ರಾಂತದಲ್ಲಿಯೇ ಸುಮಾರು ೩೦೦ ಕೋಟಿ ರೂಪಾಯಿ ಇದೆ. ಯುದ್ಧ ಸಮಯದಲ್ಲಿ ಮತ್ತು ಅನಂತರ ಹಿಂದುಸ್ತಾನದಲ್ಲಿ ಪ್ರತಿವರ್ಷವೂ ಸುಮಾರು ೮೦ ಕೋಟಿ ರೂಪಾಯಿಗಳ ಸಂಪತ್ತನ್ನು ಕರ ತಪ್ಪಿಸಿ ಬಚ್ಚಿಡುತ್ತ ಬರಲಾಗಿದೆ ಎಂದು ಮುಂತಾಗಿ ಸಮಿತಿಯ ಅಂದಾಜು. ಮುಂಬಯಿಯಲ್ಲಿ ಕರತಪ್ಪಿಸಿದ ಅನೇಕ ಪ್ರಕರಣಗಳನ್ನು ಸಮಿತಿಯು ಈಗಾಗಲೆ ಶೋಧಿಸಿದೆಯೆಂದು ತಿಳಿದು ಬರುತ್ತದೆ. ಇದರ ಬಹ್ವಂಶವನ್ನು ತಿಜೋರಿಗಳಲ್ಲಿ ನಗದು ಹಣವಾಗಿ ಇಟ್ಟಿರುವದರಿಂದ ಇದನ್ನು ಹೊರಗೆಳೆಯುವ ಬಗೆ ಹೇಗೆ ಎಂಬುದು ಸಮಿತಿಯವರ ತಲೆ ತಿನ್ನುತಿದೆಯಂತೆ. ಈ ಸಂಪತ್ತಿಯಲ್ಲಿ ಎಷ್ಟೋ ಭಾಗವನ್ನು ಬೆಳ್ಳಿ ಬಂಗಾರ ವಜ್ರ ವೈಡೂರ್ಯ ಶೇರು ಮತ್ತು ಸೆಕ್ಯೂರಿಟಿ ಪತ್ರಗಳು ಮೊದಲಾದ ರೂಪದಲ್ಲಿ ಪರಿವರ್ತಿಸಿರುವದರಿಂದ ಇದನ್ನು ಶೋಧಿಸುವ ಬಗ್ಗೆ ಈ ಸಮಿತಿಯವರು ಕೇಂದ್ರ ಸರಕಾರಕ್ಕೆ ಸಲಹೆ ಸೂಚನೆಗಳನ್ನೂ ಮಾಡಿದೆಯೆಂದು ತಿಳಿಯುತ್ತದೆ. ರಾಷ್ಟ್ರೀಯ ಸರಕಾರದ ಸ್ಥಾಪನೆಯಾದ ಬಳಿಕವಾದರೂ ಕರತಪ್ಪಿಸುವ ಈ ಪ್ರವೃತ್ತಿ ಮಾಯವಾಗುವದೆಂದು ನಂಬಬಹುದೋ?

ಪಾಕಿಸ್ತಾನದ ವಶದಲ್ಲಿರುವ ಪೂಂಚ ಪ್ರದೇಶದಿಂದ ಕಳೆದೆಂಟು ತಿಂಗಳಲ್ಲಿ ಸುಮಾರು ೧೨ ಲಕ್ಷ ಜನರು ಕಾಶ್ಮೀರ ಸರಕಾರದ ವಶದಲ್ಲಿರುವ ಪೂಂಚ ಪ್ರದೇಶಕ್ಕೆ ಗುಳೇ ಬಂದಿರುವರು.

ಮೂಷಿಕ ಸಮರ

ಬರೆದವ:—ಗಣನಾಯಕ

ಸಾವಿರಗಟ್ಟಲೆ ವರ್ಷಗಳಿಂದ ಮನುಷ್ಯನೊಡನೆ ಸ್ಪರ್ಧಿಸಿ ಅವನ ಪ್ರಯತ್ನದಿಂದ ಹುಟ್ಟಿದ ಆಹಾರವನ್ನು "ಯಶಸ್ವಿ" ಕದ್ದು ಬದುಕಿದ ಪ್ರಾಣಿಯೆಂದರೆ ಇಲಿ, ಅನ್ನ ದರಿದ್ರ ಭಾರತದಲ್ಲಿ ವರ್ಷಕ್ಕೆ ಲಕ್ಷಾಂತರ ಟನ್ ಆಹಾರವನ್ನು ಅದು ತಿನ್ನುತ್ತದೆ, ಕೆಡಿಸುತ್ತದೆ. ಮುಂಬಯಿ ನಗರದಲ್ಲಿ ೩೦ ಲಕ್ಷ ಅಂದರೆ ಮನುಷ್ಯರ ವಸತಿಗಿಂತಲೂ ಹೆಚ್ಚು—ಇಲಿಗಳಿವೆಯೆಂದು ಹೇಳಲಾಗಿದೆ. ಪ್ರತಿಯೊಂದು ಇಲಿ ದಿನಕ್ಕೆ ೧೦ ರೂಪಾಯಿಯಷ್ಟು ಹಾನಿಯನ್ನುಂಟುಮಾಡುತ್ತದಂತೆ! ಬಡ ಭಾರತೀಯನ ಜೀವನಮಟ್ಟಕ್ಕಿಂತಲೂ ಈ ಮೂಷಕಾಸುರನ "ಜೀವನ ಮಟ್ಟ" ಏರಿಕೆಯಲ್ಲಿದೆ! ಮೂಷಕನಹಿಮೆ ಮತ್ತು ಆ ಪಿಡುಗಿನ ನಿವಾರಣೋಪಾಯವನ್ನು ಇಲ್ಲಿ ಓದಿರಿ.

ಇಲ್ಲಿ ಪಂಜರ ಎಷ್ಟು ಕಡೆ ಇಲ್ಲ? ಪ್ರತಿ ಕುಟುಂಬವೂ ಮೂಷಕ ನಾಶನಕ್ಕೆ ಸರ್ವ ವಿಧದ ಪ್ರಯತ್ನವನ್ನೂ ಮಾಡುತ್ತಿದೆ. ಆದರೆ ಪರಿಣಾಮ? ಎಲ್ಲೋ ೧೫ ದಿನಗಳಿಗೊಮ್ಮೆ ಒಂದೋ ಎರಡೋ ಪಂಜರದಲ್ಲಿ ಬೀಳುತ್ತವೆ. ಆದರೆ ಇಲಿಯ ಶಕ್ತಿಯೇನೂ ಕಡಿಮೆಯದಲ್ಲವಲ್ಲ- ಮುಖ್ಯ ಮಾತೆಂದರೆ ಅದು ಬಲೆ, ವಿಷ ಮುಂತಾದವುಗಳ ಬಲೆಗೆ ಸಾಮಾನ್ಯಕ್ಕೇನೂ ಬೀಳುವದಿಲ್ಲ. ಅಷ್ಟು ಜಾಣತನ ಅದಕ್ಕಿದೆ. ಅಲ್ಲದೆ, ಅವುಗಳ ಸಂತಾನ ಶಕ್ತಿಯೂ ತೀರ ಹೆಚ್ಚಿನದು. ಆಹಾರ, ವಿಹಾರಕ್ಕೆ ಸಾಮಾನ್ಯ ಅವಕಾಶವಿದೆಯೆಂದಾದರೆ ಸಾಕು; ಒಂದೇ ಒಂದು ಮೂಷಿಕದಂಪತಿ, ಕೆಲವೇ ತಿಂಗಳಲ್ಲಿ ಸಾವಿರಾರು ಮಕ್ಕಳನ್ನು ಪಡೆಯುವವು. ಈ ಇಲಿಗಳನ್ನು ಕೊಲ್ಲಲು ವರ್ಷಕ್ಕೆ ಒಂದೆರಡು ಬಾರಿ ಅಂಗಡಿಕಾರರು ಅಂಗಡಿಯಲ್ಲಿಯ ಸಾಮಗ್ರಿಯನ್ನೆಲ್ಲ ಹೊರಕ್ಕಿಟ್ಟುಕೊಂಡು, ಹೊಗೆ, ವಿಷ, ಮುಂತಾದವುಗಳ ಪ್ರಯೋಗ ಮಾಡುತ್ತಾರೆ. ಆದರೆ ಪರಿಣಾಮ ಮಾತ್ರ ಯಥಾರೂಪವೇ. ಒಂದೇ ಬಾರಿ ಸಾವಿರಾರು ಇಲಿಗಳನ್ನು ಕೊಂದ ಪ್ರಯೋಗಗಳೂ ಪರಿಣಾಮವನ್ನೇನೂ ಕೊಡದಿದ್ದ ಉದಾಹರಣೆ ಬಹಳ. ಇಲಿ ನೋಡಲು ಎಂಥ ಬಡಪ್ರಾಣಿ; ಆದರೆ ಮಾನವನಿಗೆ ಎಂಥ ಪ್ರಬಲ ವೈರಿ!

ಪ್ಲೇಗಿಗೆ ಆಶ್ರಯ

ಮಧ್ಯಯುಗದಲ್ಲಿ ಪ್ರಸಾರದಲ್ಲಿದ್ದ "ಕರಾಳ ಮರಣ" (Black Death) ದ ಸಂಗತಿ ಜಗತ್ತಿನ ಇತಿಹಾಸದ ವಿದ್ಯಾರ್ಥಿಗಳಿಗೆಲ್ಲ ಗೊತ್ತು. ಪ್ರತಿ ಕೆಲವು ವರ್ಷಗಳಿಗೊಮ್ಮೆ ಒಂದೊಂದು ನಗರದಲ್ಲಿಯೇ ಸಾವಿರಾರು ಜೀವಗಳನ್ನಾಹುತಿ ತೆಗೆದುಕೊಂಡ ಈ "ಮರಣ" ಆ ಕಾಲದ (ಈ ಕಾಲದಲ್ಲಿಯೂ) ಎಲ್ಲ ದೊಡ್ಡ ಪಟ್ಟಣದಲ್ಲಿಯೂ ಇತ್ತು. ಅನಂತರ ಎಷ್ಟೋ ವರ್ಷಗಳ ಮೇಲೆ ಪಾಸ್ಚರ ಎಂಬ ಫ್ರೆಂಚ್ ವಿಜ್ಞಾನಿಯು ಈ ರೋಗ, ಕ್ರಿಮಿಗಳಿಂದ ಬರುವದೆಂದೂ ಮನುಷ್ಯರಿಗಿಂತಲೂ ಮೊದಲು ಇಲಿಯು ಈ ರೋಗಕ್ಕೆ ಬಲಿಯಾಗುತ್ತಿದ್ದು ಅದೇ ಪ್ರಸಾರ-ಸಾಧನವೆಂದೂ ಶೋಧ ಮಾಡಿದನು. ಈಗ ಈ ರೋಗಕ್ಕೆ "ಪ್ಲೇಗ್" ಎನ್ನುತ್ತಿದ್ದು ಅದು ಎಲ್ಲರಿಗೂ ತಿಳಿದ ಭೀಕರ ರೋಗವಾಗಿದೆ. ಈ ರೋಗಗಳು ಹಲವು ವರ್ಷಗಳ ವರೆಗೂ ಇಲಿಯಲ್ಲೇ ಬದುಕಬಲ್ಲವು. ನೋಡಲು ಪ್ಲೇಗ ಇಲ್ಲದಂತೆ ಕಂಡರೂ ರೋಗಾಣುಗಳು ಇಲಿಯಲ್ಲೇ ಇರಬಲ್ಲವಾದ್ದರಿಂದ ಯಾವಾಗ ಗಂಡಾಂತರ ಬಂದೀತೆಂದು ಹೇಳಲು ಬರುವಂತಿಲ್ಲ. ಈ ರೋಗವೊಂದೇ ಅಲ್ಲ; ಟೈಫಸ್ (ಟೈಫಾಯಿಡ್ ಅಲ್ಲ) ಎಂಬ ಜ್ವರದ ಅಣುಗಳೂ ಇಲಿಯನ್ನೇ ಆಶ್ರಯಿಸುತ್ತವೆ. ಇಲಿಯಿಂದ ತಗಣಿ ಮುಂತಾದವಕ್ಕೆ ಹತ್ತಿ, ಮಾನವನ ದೇಹ ಪ್ರವೇಶ ಮಾಡುತ್ತದೆ ಈ ರೋಗ. ಹಿಂದೆ ಈ ರೋಗಕ್ಕೆ "ಹಡಗದ ಜ್ವರ" ಮುಂತಾಗಿ ಹೆಸರಿತ್ತು. ಇನ್ನೂ ಹಲವಾರು ರೋಗಗಳ ತವರುಮನೆ ಇಲ್ಲಿಯೇ ಇರಬೇಕೆಂದು ತಜ್ಞರ ಅಭಿಪ್ರಾಯ.

ಸಿಕ್ಕಿದ್ದು ತಿನ್ನುವುವು

ರೋಗ ಪ್ರಸಾರಕವೆಂಬ ಒಂದೇ ಕಾರಣವೇ ಸಾಕು. ಮೂಷಿಕ ಸಂಹಾರವನ್ನು ಕೈಕೊಳ್ಳಲು. ಆದರೆ ಇಲಿಗಳ ಕರಾಮತಿಯಾರಿಗೆ ತಿಳಿದಿಲ್ಲ? ಅದರ ಹಸಿವೂ, ಬಕಾಸುರನದು. ಅರಿವೆ, ಕಾಗದ, ಆಹಾರಧಾನ್ಯ, ಹಣ್ಣು-ಹಂಪಲ, ಪಕ್ಷಿಗಳ ತತ್ತಿ, ಚಿಕ್ಕ ಚಿಕ್ಕ ಕೋಳಿಮರಿ, ಎಲ್ಲವೂ ಸ್ವಾಹಾ! ತಿನ್ನುವದಕ್ಕಿಂತ ಹೆಚ್ಚು ಹಾಳುಮಾಡುವ ಗುಣ ಬೇರೆ. ಮನೆ, ಮಾಳಿಗೆ, ಧಾನ್ಯದ ಕಣಜ, ನೆಲ, ಗೋಡೆ [illegible] ಇಲಿಗಳ ಹಕ್ಕಿನ [illegible]. ಪ್ರತಿ ಮನೆಯ [illegible] ಕಾಂಕ್ರೀಟು, ಕಬ್ಬಿಣದ ಸಳಿ ಮುಂತಾದವುಗಳಿಂದ ಕಟ್ಟಿದರೆ ಮಾತ್ರ, ಅದೂ ೨||-೩ ಫೂಟು ಆಳವಾದ ಭದ್ರನೆಲೆಗಟ್ಟಿದ್ದರೆ ಏನಾದರೂ ಆ ಗೋಡೆ ಬದುಕಬೇಕು. ಸಾಕಷ್ಟು ಆಳವಾದ ಗೋಡೆ ಇರದಿದ್ದರೆ ಸರಿಯಾಗಿ ಆಳ ತೆಗೆದು ಗೋಡೆ ಮುಗಿದ ಮೇಲೆ ಅಷ್ಟ ಹೋಗಿ ತಿರುಗಿ ಮೇಲೆ ಹೋಗುತ್ತವೆ. ಆಹಾರವನ್ನು ಇವುಗಳ ಕಣ್ಣುತಪ್ಪಿಸಿ ಇಡುವದೇನೂ ಸುಲಭವಲ್ಲ; ಏರಿ, ಹಾರಿ, ಈಜಾಡಿ, ತಗ್ಗುತಗೆದು ಏನಾದರೂ ಪ್ರಯತ್ನಪಟ್ಟು ತಮ್ಮ ಗುರಿ ಮುಟ್ಟಬಲ್ಲವು ಇವು. ಇನ್ನು ಮೊದಲೇ ಹೇಳಿದಂತೆ ಏನನ್ನೂ ಎಲ್ಲವನ್ನೂ ತಿನ್ನಬಲ್ಲವಾದ್ದರಿಂದ ವಿಶಿಷ್ಟಪದಾರ್ಥಗಳ ಬಗ್ಗೆ ಬಹು ಸಂಶಯ ಇವಕ್ಕೆ. ಹಾಗಾಗಿ ವಿಷಪ್ರಯೋಗ ಸಾಕಷ್ಟು ಯಶಸ್ವಿಯಾಗುವದಿಲ್ಲ. ಸೂಕ್ಷ್ಮ ಚತುರತೆಯ ಮೂಲಕ ಇವುಗಳೊಡನೆ ಹೋರಾಡುವದೇ ಕಠಿಣ.

ನಾನಾ ಜಾತಿ

ಇಲಿಗಳಲ್ಲಿ ಹಲವಾರು ಜಾತಿ. ಅದರೂ ಎರಡು ಮೂರು ಜಾತಿಯವು ಮಾತ್ರ ವಿಶೇಷವಾಗಿ ಊರುಕೇರಿ, ಹಡಗ ಟ್ರೇನು ಮುಂತಾದವುಗಳಲ್ಲಿ ಕಾಣುತ್ತವೆ. ಕರೇ ಸಣ್ಣಜಾತಿಯದೊಂದು; ಕರಿಯ ದೊಡ್ಡಜಾತಿಯದು (ಹೆಗ್ಗಣ) ಇನ್ನೊಂದು ಪಾಶ್ಚಿಮಾತ್ಯರಲ್ಲಿ (ಇಲ್ಲೂ ಕೆಲವೆಡೆ) ಕಾಣುವ ನಾರ್ವೇಜಿಯನ್ ಇಲಿ ಒಂದು ಕೊನೆಯವೆರಡು ಭಯಂಕರ ಪ್ರಾಣಿಗಳು. ಅವು ಈ ಉಳಿದ ಸಣ್ಣ ಇಲಿಗಳನ್ನು ದೂರಗೊಳಿಸುತ್ತವೆ. ಆದರೆ ಸಣ್ಣದೇನೂ ದೊಡ್ಡವಿರುವಲ್ಲಿಂದ ಓಡಿ ಹೋಗುವದೆಂದಲ್ಲ. ಯಾಕಂದರೆ ಸಣ್ಣ ಇಲಿಗೆ ಚಾತುರ್ಯ ಹೆಚ್ಚು. ಟೆಲಿಗ್ರಾಫ್ ತಂತಿಗಳಂಥ ತೀರ ಸಣ್ಣ ಎಳೆಗಳ ಮೇಲೂ ತೊಂದರೆಯಿಲ್ಲದೆ ಓಡಬಲ್ಲವು. ಹಾರಾಟದಲ್ಲಿ ಚುರುಕು ಹೆಚ್ಚು. ದೊಡ್ಡದಕ್ಕೆ ಇಷ್ಟು ಹಾರಾಟ, ಓಡಾಟಗಳ ಚುರುಕುತನವಿಲ್ಲದಿದ್ದರೂ ನೆಲ ತೋಡುವ ಶಕ್ತಿ ಅಗಾಧ. ನಾರ್ವೇಜಿಯನ್ ಇಲಿ ನೋಡಲು ಸ್ವಲ್ಪ ಬೂದು ಬಣ್ಣ, ಸಣ್ಣ ಬಾಲ. ಇದು ಹೆಚ್ಚಾಗಿ ನೆಲದಡಿಗೆ, ಕೊಟ್ಟಿಗೆಯಲ್ಲಿ ಮುಂತಾದ ಕಡೆ ಇರುತ್ತದೆ. ಅವಶ್ಯಕತೆ ಬಿದ್ದಾಗ ಈಸಬಲ್ಲದಾದರೂ ನೆಲದ ಮೇಲಿರುವ ಆಸೆ ಹೆಚ್ಚು. ಇದರ ಸುರಂಗದಂಥ ಮನೆಗಳಿಗೆಲ್ಲ ಸಪ್ತದ್ವಾರಗಳು. ಒಂದೆರಡಾರುವದೇ ಇಲ್ಲ. ಈ ಪ್ರಾಣಿ ತೀರ ಅಸಹ್ಯ. ಗೊಬ್ಬರ ಕುಣಿ, ಪಾಯಖಾನೆ ಮುಂತಾದ ಸ್ಥಳಗಳಲ್ಲಿದ್ದು ಮನೆಯೊಳಗೆ ಸೇರಿದರೆ, ಇದು ತಿನ್ನದೇ ಉಳಿದ ಧಾನ್ಯದ ರಾಶಿಯನ್ನು ಸಹ ಅಸಹ್ಯದಿಂದಾಗಿ ಚೆಲ್ಲಿಬಿಡಬೇಕಾದ ಸಂಭವ ಬರುತ್ತದೆ. ಉಳಿದವೆರಡೂ ಜಾತಿಯವು ಕಪ್ಪಗಿದ್ದು, ಬಾಲ ಸ್ವಲ್ಪ ಉದ್ದವಾಗಿರುತ್ತದೆ. ಸಣ್ಣಇಲಿಗಂತೂ ಬಹಳ ಉದ್ದವಾದ ಬಾಲ. ಈ ವಾಮನ ಮೂರ್ತಿಯ ಕೀರ್ತಿ ಮಾತ್ರ ಹೆಚ್ಚಿನದು. ಕಟ್ಟಿಗೆ ಮುಂತಾದವು ಅಷ್ಟು ಬಂದರೆ ಒಂದು ಘನಘೂಟನತನಕವೂ ತೊಂದರೆಯಿಲ್ಲದೆ ಕತ್ತರಿಸಿಬಿಡುತ್ತದೆ. ಕಲೆ ಮೇಲಾಗಿ ಇಲ್ಲವೆ ಕೆಳಗಾಗಿ ಏರಿಳಿಯಬಲ್ಲದು; ತೀರ ನುಣ್ಣಗಿನ ಗೋಡೆಯ ಮಧ್ಯದಲ್ಲಿಯೂ ಅಷ್ಟನ್ನೇ ಆಧಾರವಾಗಿಟ್ಟುಕೊಂಡು ಒಂದೇ ಕಡೆ ನಿಲ್ಲಬಲ್ಲದು.

ಮಹಾ ಶತ್ರು

ಈ ಗಂಡಾಂತರಜನಕ ಪ್ರಾಣಿಯ ಧ್ವಂಸ ತೀರ ಅವಶ್ಯದ ಪ್ರಶ್ನೆಯಾಗಿದೆ. ಮಾನವನು ತನಗೆ ಮಾಡಿಕೊಂಡ [illegible] ವನ್ನೆಲ್ಲ ಈ ಪ್ರಾಣಿಯೂ ಉಪಯೋಗಿಸುತ್ತದೆ. ಈ ಪ್ರಾಣಿ ಪ್ರಯಾಣದಲ್ಲಿ ಯಾರಿಗೂ ಕಡಿಮೆಯಿಲ್ಲ. ಹಡಗು, ಟ್ರೇನು, [illegible], ವಿಮಾನ ಸಹ ಇವರ ಪ್ರಯಾಣಕ್ಕೆ [illegible]. ಹೀಗಾದುದರಿಂದ ಜಗತ್ತಿನಲ್ಲಿ ಎಲ್ಲಿ ರೋಗ ಬಂದರೂ ಇದು ಬೇರೆ ದೇಶಗಳಿಗೆಲ್ಲ ಹಬ್ಬುವ ಭಯ ಹೆಚ್ಚು. [illegible] ಸ್ಥಾನದ ಪಟ್ಟಿಗೆ, [illegible] ಅಂತಾರಾಷ್ಟ್ರೀಯವಾಗಿ ಸಂಘಟಿತ ಹುಟ್ಟು ಅಲ್ಲ ರಾಷ್ಟ್ರಗಳ ಇವೆ.

ಇಲಿಗಳ ನಾಶಕ್ಕೆ ಹಲವಾರು ಉಪಾಯಗಳನ್ನು [illegible]

ನಿವಾರಣೋಪಾಯ

ಇಲಿಗಳು ಹೆಚ್ಚು [illegible] (Rat Proof) [illegible] ಕೈಕೊಳ್ಳಲಾಗಿದೆ.

ಎರಡನೇ ಕ್ರಮವೆಂದರೆ ಇವಕ್ಕೆ ಮರಿ ಹಾಕಲು ಸ್ಥಳಕೊಡದಿರುವದು. ಭದ್ರವಾದ ನೆಲೆಗಟ್ಟಿನ ಮನೆ, ಗೋಡೆಗಳನ್ನು ಕಟ್ಟುವದರಿಂದ ಈ ಕೆಲಸ ಮಾಡಬಹುದು. ಛಳಿ, ಶೀತ, ಬೆಕ್ಕು, ಹಾವು ಮುಂತಾದವುಗಳಿಂದ ರಕ್ಷಣೆ ಹೊಂದಲು ಅವು ಗೋಡೆಯಲ್ಲಿ ಅಥವಾ ನೆಲದಡಿಗೆ ಮಾಡಿಕೊಂಡ ಬಿಲಗಳಲ್ಲಿ ಮರಿಯಿಡುತ್ತವೆ. ಈ ರೀತಿ ಬಿಲಗಳಾಗದಂತೆ ದಕ್ಷತೆ ವಹಿಸಬೇಕಾದರೆ ಭದ್ರತೆ ಅವಶ್ಯ.

ಫಿಲಿಪ್ಪಾಯಿನದಲ್ಲಿ ಇಲಿಗಳನ್ನು ಹಿಡಿಯಲೆಂದೇ ಒಂದೆರಡು ಇಲಿಹಿಡಿಯುವ ಹಾವುಗಳನ್ನು ಸಾಕಿರುತ್ತಾರೆ. ಈ ಹಾವುಗಳು ಮಾಡದ ಜಂತಿ, ಪಟ್ಟಿಗಳಲ್ಲಿದ್ದು ಬೇಟೆಯಾಡುತ್ತವೆ. ಫಿಲಿಪ್ಪಾಯಿನನಲ್ಲಿ ಜನ ಈ ಹಾವುಗಳ ರಕ್ಷಣೆಗೆ ಸರ್ವ ವಿಧದಿಂದಲೂ ಪ್ರಯತ್ನಿಸುತ್ತಾರೆ. ಅವುಗಳಿಗೆ ಬಹು ಬೆಲೆ ಅಲ್ಲಿ.

ನಮ್ಮಲ್ಲಿ ವಿಷ ಮತ್ತು ಪಂಜರಗಳ ಉಪಯೋಗ ಬಹಳ. ಇಲಿಬಲೆಗಳಲ್ಲಿ ಪೆಟ್ಟಿಗೆ ಮತ್ತು ಸ್ಪ್ರಿಂಗ್ ಎರಡೂ ನಮೂನೆಯದನ್ನು ಉಪಯೋಗಿಸುತ್ತಿದ್ದರೂ ಸ್ಪ್ರಿಂಗಿನದು ಹೆಚ್ಚು ಪರಿಣಾಮಕಾರಿ. ಅವುಗಳಲ್ಲಿಡಬೇಕಾದ ತಿನ್ನುವ ಪದಾರ್ಥಗಳಲ್ಲಿ ಮೀನ, ಮತ್ತು ಸವಿಯಾದ ಪದಾರ್ಥಗಳು ಹೆಚ್ಚು ಪರಿಣಾಮವಿತ್ತಿವೆ.

ವಿಷವೇ ಉತ್ತಮ

ಹೆಚ್ಚಿನ ಸಂಖ್ಯೆಯಲ್ಲಿ ಇಲಿಗಳನ್ನು ಕೊಲ್ಲಲು ವಿಷವೇ ಒಳಿತು. ಆದರೆ ವಿಷವನ್ನು ಉಪಯೋಗಿಸಬೇಕಾದರೆ, ಇತರ ಪ್ರಾಣಿಗಳೂ ಮನುಷ್ಯರೂ ಇಲಿಗಳ ಬದಲು ಪ್ರಯೋಗಕ್ಕೊಳಗಾಗದಂತೆ ಲಕ್ಷ್ಯವಹಿಸಬೇಕಾಗುವದು.

ಆದರೆ ವಿಷ ಮಿಶ್ರಿತ ಆಹಾರವನ್ನು ಅದು ತಿಂದೇ ತಿನ್ನುವದೆಂಬ ಭರವಸೆ ಎಲ್ಲಿ? ಅದೂ ಸಾಕಷ್ಟು ಜಾಣತನದ್ದೇ ಇದೆ. ಈ ದೃಷ್ಟಿಯಿಂದ ಒಂದು ಪದ್ಧತಿ ಮಾತ್ರ ಹೆಚ್ಚು ಯಶಸ್ವಿಯಾಗಿದ್ದು ಕಂಡುಬಂದಿದೆ. ಹಾಯ್ವಾತುವ ಹಾದಿಯಲ್ಲಿ ಮೊದಲು ಸವಿ [illegible]

[illegible] (Redsquill) [illegible]

[illegible] (Barium Carbonate) [illegible] (Calcium Cyanide) [illegible]

[illegible]

(Colonel G. A. Skinner M. D., F. A. C. S. ರವರ ಲೇಖನವೊಂದರ ಆಧಾರದಿಂದ)

ವಿಚಾರದ್ವಂದ್ವ

ಮಲೆನಾಡು ಮತ್ತು ಅಧಿಕ ಆಹಾರ ಉತ್ಪಾದನೆ

ಮುಖ್ಯ ಮಂತ್ರಿಗಳು ಆಹಾರ ವಿಷಯದಲ್ಲಿ ನಮ್ಮ ದೇಶವು ಸ್ವಾವಲಂಬಿಯಾಗಬೇಕೆಂದು ಹೇಳಿದುದೇನೋ ಸರಿ. ಆದರೆ ನಮ್ಮ ದೇಶದಲ್ಲಿ ಒಕ್ಕಲಿಗನ ಪರಿಸ್ಥಿತಿ ಬಿಗಿಯಾಗಿರುವುದರಿಂದ ಅವನು ಸರಕಾರದ ಸಹಾಯಕ್ಕೆ ಕೈಯೊಡ್ಡದೆ ಉಪಾಯವಿಲ್ಲ.

ಮಲೆನಾಡಿನ ವಿಷಯವಾಗಿ ಹೇಳಬೇಕೆಂದರೆ, ಸರಕಾರಿ ನೌಕರರೂ ರೈತರೂ ಸಹಕಾರದಿಂದ ನಡೆದುಕೊಂಡು ಮುಖ್ಯ ಧ್ಯೇಯದ ಕಡೆಗೆ ಲಕ್ಷ್ಯವಿತ್ತು ಪ್ರಯತ್ನಿಸಿದರೆ ಆಹಾರ ಬೆಳೆಯನ್ನು ಹೆಚ್ಚಿಸುವುದು ಅಷ್ಟೇನೂ ಕಠಿನವೆನಿಸಲಿಕ್ಕಿಲ್ಲ. ಮಲೆನಾಡಿನಲ್ಲಿ ಭತ್ತವೇ ಮುಖ್ಯ ಪೀಕು. ಇದಕ್ಕೆ ನೀರಿನ ಪೂರೈಕೆ ಮುಖ್ಯವಾಗಿದೆ. ನಮ್ಮ ಪೂರ್ವಜರು ನೀರಿನ ಪೂರೈಕೆಯ ಅನುಕೂಲವನ್ನು ನೋಡಿಕೊಂಡೇ ಗದ್ದೆಗಳನ್ನು ರಚಿಸಿದ್ದಾರೆ. ಈಗ ನಾವು ಹೊಸ ಗದ್ದೆಗಳನ್ನು ನಿರ್ಮಿಸುವುದಕ್ಕೆ ಮಹತ್ವ ಕೊಡದೆ ಇದ್ದ ಗದ್ದೆಗಳನ್ನೇ ಸರಿಯಾಗಿ ಸಾಗು ಮಾಡಿ ಬೆಳೆಯನ್ನು ಇಮ್ಮಡಿಸಬಹುದೆಂಬುದು ನನ್ನ ಅಭಿಪ್ರಾಯವು.

ನಮ್ಮ ಪೂರ್ವಜರು ನೀರಿನ ಪೂರೈಕೆಯ ಬಗ್ಗೆ ನದಿ ಹಳ್ಳಗಳಿಗೆ ಒಡ್ಡು ಹಾಕಿ ಕೆರೆಗಳಿಗೆ ಹರಿಸುವದು, ಅಥವಾ ಗುಡ್ಡದ ನೀರನ್ನು ಕೆರೆ ಕುಂಟೆಗಳಿಗೆ ಹರಿಸುವುದು, ಇಲ್ಲವೆ ಕೇವಲ ಮಳೆ ನೀರನ್ನೇ ಅವಲಂಬಿಸುವದು, ಹೀಗೆ ಮೂರು ಬಗೆಯ ಆಶ್ರಯಗಳನ್ನು ಉಪಯೋಗಿಸುತ್ತಿದ್ದರು. ಇಂಥ ಒಂದಲ್ಲ ಒಂದು ಅನುಕೂಲತೆಯುಳ್ಳಲ್ಲಿಯೇ ಅವರು ಗದ್ದೆಗಳನ್ನು ನಿರ್ಮಿಸಿದ್ದಾರೆ. ಕೆಲವೆಡೆ ಕೃಷಿಯ ಜಮೀನು ವಿಸ್ತಾರವಾಗಿದ್ದರೂ ಅದರಲ್ಲಿ ನೀರಿನ ಪೂರೈಕೆ ಎಷ್ಟು ಅಂಶಕ್ಕೆ ದೊರೆಯಬಹುದೋ ಅಷ್ಟಕ್ಕೆ ಮಾತ್ರ ಭತ್ತವನ್ನು ಬಿತ್ತಿ ಉಳಿದ ಭಾಗದಲ್ಲಿ ಕಡಿಮೆ ನೀರು ಸಾಲುವ ಬೇರೆ ಬೆಳೆಗಳನ್ನೋ ಅಥವಾ ಕಡಿಮೆ ನೀರು ಸಾಲುವ ಜಾತಿಯ ಭತ್ತವನ್ನೋ ಬಿತ್ತುತ್ತಿದ್ದರು. ಈಗ ನಾವು ಹೆಚ್ಚು ಪ್ರದೇಶವನ್ನು ಕೃಷಿ ಮಾಡಹೋಗಿ ಹೊಸ ಹೊಸ ಹೊಲಗಳನ್ನು ರಚಿಸಿದರೆ ಹೊಸ ಹೊಲ ಹಳೆ ಹೊಲ ಎರಡಕ್ಕೂ ನೀರು ಸಾಲದೆ ಎರಡೂ ಕೆಡುವ ಸಂಭವವುಂಟಲ್ಲದೆ ರೈತನು ಎಕರೆಗೆ ರೂ. ೪-೮-೦ ದರದಲ್ಲಿ ಹಾನಿಗೊಳಗಾಗಬೇಕಾದೀತು. ಇದಕ್ಕಾಗಿ ಸರಕಾರದವರು ಜುನಾತರಿ ಮತ್ತು ನವಾತರಿಗಳ ಸರಿಯಾದ ಲೆಕ್ಕವನ್ನು ತೆಗೆದು ಪ್ರಕಟಿಸುವುದವಶ್ಯವೆಂದು ಹೇಳಬೇಕಾಗಿದೆ.

ಮಲೆನಾಡಿನಲ್ಲಿ ಅಧಿಕ ಆಹಾರೋತ್ಪಾದನೆಗಾಗಿ ಎಷ್ಟೋ ಹಣ ಅಪವ್ಯಯವಾಗುತ್ತಿದೆ. ಹೊಸ ಹೊಲಗಳನ್ನು ಮಾಡುವದತ್ತ ಲಕ್ಷ್ಯ ಹೊರಳಿಸಿ, ನಮ್ಮ ಪೂರ್ವಜರು ಹೊಲಗಳಿಗೆ ನೀರು ಪೂರೈಕೆ ಮಾಡಿಕೊಳ್ಳುತ್ತಿದ್ದ ಕೆರೆ ಕಾಲುವೆಗಳ ಕಡೆ ಸರಕಾರವಾಗಲಿ ರೈತರಾಗಲಿ ಗಮನ ಕೊಡದಿರುವುದು ವಿಷಾದಕರ. ಗುಡ್ಡಗಳಿಂದಬರುವ ಕೆರೆ ನೀರಿನಕಾಲುವೆ ಹೊಲದ ಪಕ್ಕೆಯಲ್ಲಿ ಕಾಣುವವೇ ಹೊರತು ನಿಜವಾಗಿ ಅವು ಅಲಕ್ಷ್ಯದಿಂದ ಹೂತು ಹೋಗಿವೆ. ಸಣ್ಣ ಪುಟ್ಟ ಕೆರೆ ಕುಂಟೆಗಳ ದುರಸ್ತಿಯಂತೂ ಇಲ್ಲವೇ ಇಲ್ಲ. ಅವುಗಳಲ್ಲಿ ಒಂದು ಗದ್ದೆಯ ಹಾಳೆಯಲ್ಲಿ ನಿಲ್ಲುವಷ್ಟು ನೀರು ನಿಲ್ಲುವುದಿಲ್ಲ. ಹೀಗಾದರೆ ಅಧಿಕ ಆಹಾರೋತ್ಪಾದನೆ ಬರಿ ಕಾಗದದಲ್ಲಿ ಉಳಿದೀತು.

ಗೊಬ್ಬರದ ಕೊರತೆಗಳಿಗಾಗಿ ಸರಕಾರದವರು ಮಾಡುವ ವೆಚ್ಚ ಮಲೆನಾಡಿನಲ್ಲಿ ನಿಷ್ಪ್ರಯೋಜಕವೆಂದು ಹೇಳಬೇಕಾಗುತ್ತದೆ. ಅಲ್ಲಿ ಬೇಕಾಗಿರುವುದು ನೀರಾವರಿಯ ದುರಸ್ತಿ. ಮಲೆನಾಡಿನಲ್ಲಿ ದನಗಳ ಹಟ್ಟಿಯ ಗೊಬ್ಬರವನ್ನೇ ಎಷ್ಟೋ ಜನರು ಉಪಯೋಗಿಸಿಕೊಳ್ಳಲು ಸಮರ್ಥರಾಗಿರುವುದಿಲ್ಲ. ಅಲ್ಲಿ ದನಗಳ ಹಟ್ಟಿ ಗೊಬ್ಬರ, ಅದು ಸಾಲದಿದ್ದರೆ ಕೆರೆ ಕಟ್ಟೆಗಳ ಕೆಳಪಟ್ಟಿಯ ರೇವೆಯ ಮಣ್ಣಿನ ಗೊಬ್ಬರ, ಹೊಲ್ಲ ಹೊಲಗಳ ಬದಿಯಲ್ಲಿ ಎಲೆಗಳು ಕೊಳೆತು ಆದ ಗೊಬ್ಬರ, ಅದೂ ಸಾಲದಿದ್ದರೆ ಗಟಾರ ಗಳಲ್ಲಿ ಬಿದ್ದ ಗೊಬ್ಬರ ಹೀಗೆ ನಾನಾ ಗೊಬ್ಬರ ಸಿಗುತ್ತದೆ. ಹೂತು ಹೋಗಿರುವ ಕೆರೆ ಕುಂಟೆಗಳನ್ನು ದುರಸ್ತಿ ಮಾಡಿದರೆ ಅವು ಆಳವಾದಂತೆಯೂ ಆಯಿತು, ಉತ್ತಮ ಗೊಬ್ಬರವೂ ದೊರೆತಂತಾಯಿತು. ಹೀಗಿರುವುದರಿಂದ ಅವುಗಳ ದುರಸ್ತಿಗಾಗಿ ಮೊದಲು ಹಣ ವೆಚ್ಚ ಮಾಡಬೇಕಾಗಿದೆ.

ಇನ್ನು ಅಧಿಕ ಆಹಾರ ಬೆಳೆ ಯೋಜನೆಯನ್ನು ಎಲ್ಲ ಕಡೆಗೂ ಒಂದೇ ರೀತಿ ರಚಿಸದೆ ಆಯಾ ಹಳ್ಳಿಯ ಅನುಭವಸ್ಥ ರೈತರ ಸಲಹೆಯನ್ನು ವಿಚಾರಿಸಿದರೆ ಎಷ್ಟೋ ಒಳ್ಳೆತಾದೀತು.

ಮಲೆನಾಡಿನಲ್ಲಿ ಅಧಿಕ ಆಹಾರೋತ್ಪಾದನೆ ಯಶಸ್ವಿಯಾಗಬೇಕಾದರೆ, ಕಾಯದೆಯಲ್ಲಿ ಕೆಲ ಬದಲಾವಣೆಗಳು ಅವಶ್ಯ. ಹಳೆಯ ಜಮೀನುಗಳಿಗೆ ಬಹಳಾದರೆ ರೂ. ೨-೮-೦ ಅಥವಾ ೩-೦-೦ ನೀರಿನ ಸಾರಿಗೆಯ ಆಕರಣೆ ಕೊಡಬೇಕಾದರೆ ಹೊಸದಕ್ಕೆ ರೂ೪-೮-೦ ಮಾಡಿರುವುದು ತುಂಬ ಅನ್ಯಾಯ. ಇದಲ್ಲದೆ ಲೋಕಲ್ ಫಂಡ್ ತೆರಿಗೆ, ಮತ್ತು ರೈತನು ಮೊದಲು ಹೇಳಿದ್ದಕ್ಕಿಂತ ಹೆಚ್ಚು ಕ್ಷೇತ್ರಕ್ಕೆ ಬಿತ್ತಿದರೆ ಇಮ್ಮಡಿ (ರೂ. ೯) ನೀರಿನ ಸೆಸ್ ವಸೂಲು ಮಾಡುವರು. ಈ ಅನ್ಯಾಯ ದೂರವಾಗಬೇಕು.

ಬ್ರಿಟಿಶ ಸರಕಾರದ ಕಾಲದಲ್ಲಿ ಕುಲಕರ್ಣಿಯರು ಮಾಡುತ್ತಿದ್ದ ಪೀಕಪಹಣಿ (ಬೆಳೆ ಅಂದಾಜು) ಪದ್ಧತಿ ಪೂರ್ಣ ಬದಲಾಗಬೇಕು. ಗ್ರಾಮದ ಪ್ರತಿಯೊಂದು ಸರ್ವೇ ನಂಬರಿನ ಕಡೆಗೂ ಸರಕಾರದ ಲಕ್ಷ್ಯ ಬೀಳಬೇಕಲ್ಲದೆ, ಬೆಳೆ ಅಂದಾಜಿನ ಕಾಲಕ್ಕೆ ಸುಳ್ಳು ಅಂಕೆಗಳನ್ನು ಕಳಿಸುವದು ನಿಲ್ಲಬೇಕು. ಈ ಅಂಕೆ ಸಂಖ್ಯೆಗಳಿಂದ ಸರಕಾರಕ್ಕೇನೂ ಪ್ರಯೋಜನವಿಲ್ಲ. ಜಮೀನಿನ ಸ್ಥಿತಿಗತಿಯ ಪಹಣಿಯಾಗಬೇಕು. ಆಗ ಸುಧಾರಣೆಗೆ ತಕ್ಕ ಸಲಹೆಗಳು ಮುಂದೆ ಬರಲು ಅವಕಾಶವಾಗುವದು.

ಸರಕಾರದ ಮೇಲಧಿಕಾರಿಗಳ ಗ್ರಾಮ ಪರೀಕ್ಷೆಗೆ ಬಂದಾಗ ಬೀಳು ಬಿತ್ತಲುಗಳ ಕಡೆ ಕಣ್ಣು ಹೊರಳಿಸಿ ಅಲ್ಲಿ ಪಲ್ಲೆಕಾಯಿ ಅಥವಾ ಗೋವಿನ ಜೋಳವನ್ನು ಬಿತ್ತಲು ಉಪದೇಶಿಸಬೇಕು. ಇದರಿಂದ ಎಷ್ಟೋ ಹಿತವಿದೆ.

ಬಾಳಂಬೀಡು
೨೮-೯-೪೯ —ಶಿವಾಜಿ ಲಿಂಗೋ ಪಾಟೀಲ

ನಾಳಿನ ಅರಿವೆ—ಅಂಚಡಿಗಳು

ಮಾನವ ಕುಲದ ಇತಿಹಾಸವನ್ನು ನೋಡಿದರೆ ಅದರ ವಸ್ತ್ರಭೂಷಣ ಸಂಪ್ರದಾಯದಲ್ಲಿ ಪ್ರಗತಿಯಾಗುತ್ತ ಹೋಗಿರುವುದು ಕಾಣಬರುತ್ತದೆ. ಆದಿಮಾನವನು ದಿಗಂಬರನಾಗಿಯೆ ತಿರುಗುತ್ತಿದ್ದನು. ಆದರೆ ಬರಬರುತ್ತ ದೇಹವನ್ನು ಶೀತೋಷ್ಣಗಳ ಬಾಧೆಯಿಂದ ರಕ್ಷಿಸಿಕೊಳ್ಳಲು ಅವನಿಗೊಂದು ಸಾಧನ ಬೇಕೆನಿಸಿದಾಗ ಗಿಡಮರಗಳ ತೊಗಟೆಯನ್ನೂ ಪ್ರಾಣಿಗಳ ಚರ್ಮವನ್ನೂ ಮೈಗೆ ಮುಚ್ಚಿಕೊಳ್ಳುತ್ತಿದ್ದನು. ಮಾನವ ನಾಗರಿಕತೆಯ ಪ್ರಾರಂಭ ದಶೆಯಲ್ಲಿ, ವಸ್ತ್ರ ಮೊದಲು, ನಿಸರ್ಗದತ್ತವಸ್ತುಗಳಿಂದ ಹೆಣೆದು ಮಾಡಿದ ಅರಿವೆಗಳನ್ನು ಧರಿಸಲು ಈಗ ಆರು ಸಾವಿರ ವರ್ಷಗಳ ಹಿಂದೆಯೇ ಪ್ರಾರಂಭವಾಯಿತು. ನಾರು, ಹತ್ತಿ, ರೇಶ್ಮೆ ಮತ್ತು ಉಣ್ಣೆಗಳನ್ನು ನೂತು ಹೆಣೆದು ಹೊಚ್ಚಿಕೊಳ್ಳುವದನ್ನು ಆಗಮಾನವನು ಕಲಿತ. ೫೦೦೦ ವರ್ಷಕ್ಕಿಂತಲೂ ಹಳೆಯವೆಂದು ಗ್ರಹಿಸಲ್ಪಟ್ಟ ಮೊಹೆಂಜೋದಾರೋ ಅವಶೇಷಗಳಲ್ಲಿ ನೂತು-ನೇಯ್ದ ಅರಿವೆಗಳು ದೊರಕಿವೆ. ಆದರೆ ಈ ೬೦೦೦ ವರ್ಷಗಳಲ್ಲಿ ಮನುಷ್ಯನ ಅರಿವೆ ಅಂಚಡಿಗಳ ಮೋಡಿಯೆಷ್ಟೋ ಬಾರಿ ಬದಲಾಯಿಸಿದ್ದರೂ ಬೇರೆ ಬೇರೆ ದೇಶಗಳಲ್ಲಿ ಅದು ವಾಯುಗುಣ ದೇಶಸ್ಥಿತಿಗಳನ್ನನುಸರಿಸಿ ಬೇರೆ ಬೇರೆ ಸ್ವರೂಪವನ್ನು ತಳೆದಿದ್ದರೂ ಅರಿವೆಯ ಕಚ್ಚಾ ವಸ್ತುಗಳಲ್ಲಿ ಏನೂ ಬದಲಾವಣೆಯಾಗಿಲ್ಲ.

ನೇಯ್ಗೆಯಿಂದ ಅರಿವೆಗಳನ್ನು ಮಾಡುವ ಬದಲು ನೇರವಾಗಿ ಹತ್ತಿಯನ್ನೇ ಒತ್ತಿ ಒಂದು ತರಹದ ಅಂಟಿನ ಬಲದಿಂದ ನೂಲಿಲ್ಲದೆ ಅರಿವೆಯನ್ನು ಸಿದ್ಧಗೊಳಿಸುವ ಪ್ರಯೋಗಗಳು ಈಚೆಗೆ ನಡೆಯುತ್ತಿವೆಯಂತೆ. ಇದು ವಸ್ತ್ರನಿರ್ಮಾಣದ ತಂತ್ರದ ಪರಿವರ್ತನೆಯ ಪ್ರಥಮ ಪ್ರಯತ್ನವೆನ್ನಬಹುದು. ಆದರೆ ಕಳೆದ ಶತಕದಲ್ಲಿ ಹತ್ತಿ-ನಾರು-ರೇಶ್ಮೆ-ಉಣ್ಣೆಗಳಲ್ಲದೆ ಬೇರೆಯ ಕಚ್ಚಾ ಸರಕುಗಳನ್ನುಪಯೋಗಿಸುವ ಪ್ರಯತ್ನಗಳು ಫಲಕಾರಿಯಾದವು. ಇದರಿಂದ ಹತ್ತಿಯೇ ಮೊದಲಾದ ಮೂಲ ವಸ್ತುಗಳ ಕೊರತೆಯ ಬಾಧೆಯಿಂದ ಮುಕ್ತವಾಗಲು ಮಾನವ ಕುಲಕ್ಕೆ ಸಂಧಿ ದೊರೆತಿದೆ. ಅನ್ಯಥಾ ನಿರುಪಯುಕ್ತವಾದ ದ್ರವ್ಯಗಳಿಂದಲೇ ಈ ಹೊಸ ಎಳೆಗಳನ್ನು ನಿರ್ಮಿಸುತ್ತಿರುವುದರಿಂದ ಭೂಮಿಯ ಮಿತವಾದ ಸಂಪತ್ತಿಯನ್ನು ಹೆಚ್ಚು ಪೂರ್ತಿಯಾಗಿ ಉಪಯೋಗಿಸುವಂತಾಗಿದೆ. ಇತರ ಅವಶ್ಯಕ ಕಾರ್ಯಗಳಿಗೆ ಉಪಯೋಗ ಬೀಳದ ವಸ್ತುಗಳಿಂದ ನಿರ್ಮಿತವಾಗುವ ಹೊಸ ತರದ ಅರಿವೆಗಳನ್ನಷ್ಟೆ ಇಲ್ಲಿ ಸಂಕ್ಷಿಪ್ತವಾಗಿ ಪರಿಚಯ ಮಾಡಿ ಕೊಡಲಾಗುವುದು.

ಕಲ್ಲಿದ್ದಲಿನಿಂದ ವಸ್ತ್ರ

ಕೃತಕ ವಸ್ತ್ರಗಳ ಸಾಲಿನಲ್ಲಿ ಮೊದಲನೆಯದೆಂದರೆ ಈಗ ಕೃತಕ ರೇಶ್ಮೆಯೆಂದು ಪ್ರಸಿದ್ಧವಾಗಿ ಪೇಟೆಯಲ್ಲಿ ಕಾಣ ಸಿಗುತ್ತಿರುವ ರೇಯಾನ್. ಇದು ಕಳೆದ ಶತಕದ ಅಂತ್ಯದಲ್ಲಿ ಕಂಡುಹಿಡಿಯಲ್ಪಟ್ಟಿತು. ಈಚೆಗೆ ೧೯೪೫ನೆ ಇಸವಿಯಿಂದ ಅಮೇರಿಕೆಯಲ್ಲಿ ವಿಪುಲವಾಗಿ ವರ್ಷಕ್ಕೆ (೨,೪೦,೦೦೦೦೦ ಪೌಂಡು) ತಯಾರಾಗುತ್ತಿರುವ ನೈಲನ್ನೆಂಬ ಇನ್ನೊಂದು ಎಳೆಯಿಂದ ಬನೀನು (ಗಂಜಿಫ್ರಾಕು), ಕಾಲುಚೀಲ, ನೆಕ್‌ಟೈ; ಒಳಚಡ್ಡಿಯೇ ಮೊದಲಾದ ಹೆಣದ ವಸ್ತು, ನೇಯ್ದ ಬಟ್ಟೆ ಬರೆಗಳು ಪ್ರಸಾರಕ್ಕೆ ಬಂದಿವೆ. ಯುದ್ಧಕಾಲದಲ್ಲಿ ಯುದ್ಧ ಹತ್ತುವ ಹಗ್ಗಗಳೇ ಮೊದಲಾದ ಸಾಧನಗಳನ್ನೂ ಉಷ್ಣವಲಯದಲ್ಲಿಯೂ ಕೆಡದಂಥ ಸೈನಿಕರ ಬೂಟಿನ ದಾರಗಳನ್ನೂ ನೈಲನ್ನಿನಿಂದ ಸಿದ್ಧಗೊಳಿಸುತ್ತಿದ್ದರು. ಹಲ್ಲಿನ ಬ್ರಶ್ಶಿಗೆ ಬೇಕಾದ ಕೇಶರವನ್ನು ಕೂಡ ಇದರಿಂದಲೇ ಸಿದ್ಧಗೊಳಿಸತೊಡಗಿದ್ದಾರೆ. ಎಲ್ಲ ಬಗೆಯ ಸ್ತ್ರೀ ಪುರುಷರ ಪೋಷಾಕಿಗೂ ಇದನ್ನುಪಯೋಗಿಸುವದು ಲಾಭಕರವೆಂದು ಹೇಳಲಾಗಿದೆ. ಇಷ್ಟು ಮಹತ್ವದ ನೈಲನ್ ಎಳೆಗಳನ್ನು ಮೂಲತಃ ಕಲ್ಲಿದ್ದಲ್ಲು, ನೀರು, ಗಾಳಿಗಳ ಸಂನಿಪಾತದಿಂದ ರಚಿಸಲಾಗುತ್ತಿದೆಯೆಂದು ಹೇಳಿದರೆ ನಂಬುವುದು ಕಠಿನ.

ಶೇಂಗಾ ಹಿಂಡಿಯಿಂದ ರಚಿಸುವ "ಅರ್ದಿಲ್" ಎಂಬ ಹೊಸ ಬಗೆಯ ಎಳೆಗಳನ್ನುರೂಪಿಸಿಕೊಂಡಿದ್ದಾರೆ. ಅದು ಉಣ್ಣೆಯ ಸ್ಥಾನದಲ್ಲಿ ಉಪಯೋಗಿಸಲಾಗುವುದು. ಇದರ ವಿಪುಲ ಉತ್ಪಾದನೆಗಾಗಿ ಇಂಪೀರಿಯಲ್ ಕೆಮಿಕಲ್ ಕಂಪನಿಯವರು (ಇಂಗ್ಲಂಡ್) ವ್ಯವಸ್ಥೆ ಮಾಡುತ್ತಿದ್ದಾರೆ.

ಸಮುದ್ರ ತೀರದಲ್ಲಿ, ಮುಖ್ಯವಾಗಿ ಆಸ್ಟ್ರೇಲಿಯ ಮತ್ತು ಅಮೇರಿಕೆಯಲ್ಲಿ, ಬೆಳೆಯುವ ಕಳೆಗಳಲ್ಲಿರುವ ಅಲ್ಜಿನಿಕ್ ದ್ರಾವಕದಿಂದ ನೂಲು ತಯಾರಿಸುವುದರಲ್ಲಿ ಅಮೇರಿಕನ್ ಶಿಲ್ಪಿಗಳಿಗೆ ಯಶ ದೊರೆತಿದೆ. ಈ ಕಳೆಗಳು ವರ್ಷಕ್ಕೆ ಅನೇಕ ಲಕ್ಷ ಟನ್‌ಗಳಷ್ಟು ದೊರೆಯುವ ಕಾರಣ ವಸ್ತ್ರ ನಿರ್ಮಾಣದಲ್ಲಿ ಕ್ರಾಂತಿಯಾಗುವ ಸಂಭವವಿದೆ.

ಕೋಳಿಮರಿಯ ರೆಕ್ಕೆಗಳ ತೂಳಿಕೆಯಿಂದಲೂ ಸುಂದರವಾದ ನೂಲು ತೆಗೆಯಲು ಬರುತ್ತದೆ. ಉಣ್ಣೆಯೊಡನೆ ಅರ್ಧಕ್ಕರ್ಧ ಬೆರೆಸಿದರೆ ಇದು ಇದು ಇನ್ನಷ್ಟು ಬೆಚ್ಚಗಾಗುವುದು.

ಹಾಲಿನಿಂದ ನೂಲು

ಲೆನಿತಾಲ ಎಂಬ ಇನ್ನೊಂದು ಹೊಸ ಎಳೆಯನ್ನು ಕಂಡುಹಿಡಿಯಲಾಗಿದೆ. ಇದನ್ನು ಹಾಲಲ್ಲಿರುವ ಕೇಸಿನ್ ಎಂಬ ದ್ರವ್ಯದಿಂದ ತೆಗೆಯುತ್ತಾರೆ. ಹೆಂಗಸರ ಹ್ಯಾಟು, ಮಕ್ಕಳ ಸ್ವೆಟರ್, ಮಂಜಿನಲ್ಲಿ ನಡೆವಾಗ ಹಾಕಿಕೊಳ್ಳುವ ಸೂಟು, ಕಾಲುಚೀಲ ಮೊದಲಾದವುಗಳನ್ನು ತಯಾರಿಸಲು ಇದು ಉಪಯೋಗಕ್ಕೆ ಬೀಳುತ್ತದೆ.

ಗಾಜಿನ ಉಣ್ಣೆಯ ಅರಿವೆಗಳು ಯುದ್ಧಕಾಲದಲ್ಲಿ ಉಪಯೋಗಿಸಲ್ಪಟ್ಟವು. ಇದಕ್ಕೆ ಬೆಂಕಿ ಹತ್ತದಿರುವುದೊಂದು ವೈಶಿಷ್ಟ್ಯ. ಅಲ್ಯುಮಿನಿಯಮಿನಿಂದಲೂ ಅಮೇರಿಕೆಯಲ್ಲಿ ಅರಿವೆ ತಯಾರಿಸುತ್ತಿದ್ದಾರೆ.

ನೈಲನ್ನನ್ನು ತಯಾರಿಸಿದ ಕಂಪನಿಯವರೇ ಈಚೆಗೆ "ಆರ್ಲನ್" ಎಂಬ ಹೊಸ ಎಳೆಯನ್ನು ಕಂಡುಹಿಡಿದಿದ್ದಾರೆ. ಇದು ಬಹಳ ಬೆಚ್ಚಗಾಗಿಯೂ ಸೂರ್ಯಪ್ರಕಾಶದ ಕಾವನ್ನು ತಡೆಯುವ ಶಕ್ತಿಯುಳ್ಳದ್ದಾಗಿಯೂ ಇದೆಯಂತೆ.

ಹೀಗೆ ಪ್ರಕೃತಿದತ್ತ ಎಳೆಗಳನ್ನು ತನ್ನ ವಸ್ತ್ರಕ್ಕಾಗಿ ಅವಲಂಬಿಸುವ "ಪರಾಧೀನತೆ"ಯಿಂದ ಮನುಷ್ಯ ಭರದಿಂದ ಪಾರಾಗುತ್ತಿದ್ದಾನೆನ್ನಬಹುದು.

(ಅಮೃತ ಬಝಾರ ಪತ್ರಿಕೆಯಿಂದ)

ಇಟಲೋ-ಅಮೇರಿಕನ್ ವೈಮಾನಿಕನಾದ ಜಾರ್ಜ್ ಬ್ರಾಂಚೆಲೋ ಎಂಬವನು ಅಟ್ಲಾಂಟಿಕ್ ಸಾಗರವನ್ನು ಹಾರಿ ದಾಟುವೆನೆಂದು ಒಂದೇ ಎಂಜಿನ್ನುಳ್ಳ ವಿಮಾನವೊಂದನ್ನು ಹತ್ತಿ, ಅಜೋರ್ಸ್‌ನಿಂದ ಹೊರಟನು. ಅಮೇರಿ… …ವನ ರಕ್ಷಣೆ…

ಮಧ್ಯಮ ವರ್ಗದವರಿಗೆ

(ಅಖಿಲ ಭಾರತದ ಚರಕಸಂಘದ ಅಧ್ಯಕ್ಷರಾದ ಶ್ರೀ ಧೀರೇಂದ್ರ ಮುಜುಮದಾರರು ಚರಖಜಯಂತಿ ಸಂಬಂಧದಲ್ಲಿ ಖಾದೀ ಕೆಲಸಗಾರರನ್ನುದ್ದೇಶಿಸಿ ಒಳ್ಳೆ ಮಹತ್ವದ ಪತ್ರವೊಂದನ್ನು ಬರೆದಿರುತ್ತಾರೆ. ಆ ಪತ್ರವು ಮುಖ್ಯವಾಗಿ ಖಾದೀ ಕೆಲಸಗಾರರನ್ನುದ್ದೇಶಿಸಿ ಬರೆಯಲ್ಪಟ್ಟಿದ್ದರೂ ಅನುಷಂಗಿಕವಾಗಿ ಮಧ್ಯವರ್ಗದವರ ಸಂಬಂಧದಲ್ಲಿಯೂ ಅದರ ವಿಚಾರ ಮಾಡಬಹುದಾಗಿದೆ. ಅದು ಸುದೀರ್ಘವಾದ್ದರಿಂದ ಅದರಲ್ಲಿಯ ಕೆಲ ಭಾಗಗಳನ್ನು ನಾನು ಬಿಟ್ಟುಕೊಡಬೇಕಾಯಿತು. ಅ. ಭಾ. ಚ. ಸಂಘದ ಕಾರ್ಯದರ್ಶಿ, ವರ್ಧಾ ಇವರಿಗೆ ಅರುಬಿಲ್ಲಿಯ ಅಂಚೆ ತಿಕೀಟು ಕಳಿಸಿ ಆ ಪತ್ರದ ಸಂಪೂರ್ಣ ಹಿಂದುಸ್ತಾನೀ ಪ್ರತಿಯನ್ನು ಬೇಕಾದವರು ಪಡೆಯಬಹುದು.

ಶಿ. ಘ. ಮ.)

ತಮ್ಮ ಧ್ಯೇಯಸಾಧನೆಗಾಗಿ ಗಾಂಧೀಜಿ ಸಂಸ್ಥಾಪಿಸಿದ ಸಂಘ ಸಂಸ್ಥೆಗಳಲ್ಲಿ ಚರಖಾ ಸಂಘವು ಮೊದಲನೆಯದು ಮತ್ತು ಬಹಳ ದೊಡ್ಡದು. ಆದುದರಿಂದ ಅವರ ಮರಣದ ತರುವಾಯ ಕುಟುಂಬದ ಹಿರಿಯರೆಂದು ಖಾದೀ ಕೆಲಸಗಾರರಾದ ನಿಮ್ಮ ಮೇಲೆ ಬಹಳ ದೊಡ್ಡ ಹೊಣೆ ಬಿದ್ದಿದೆ. ಹೀಗೆ ಮಾಡಿರೆಂದು ನೀವು ಜನತೆಗೆ ಬಿನ್ನವಿಸಿಕೊಳ್ಳುವ ಮೊದಲು, ನೀವು ನಿಮ್ಮ ಮೇಲಿನ ಹೊಣೆಗಾರಿಕೆಯನ್ನು ಆಳವಾಗಿ ವಿಚಾರಮಾಡಿ ತಿಳಿದುಕೊಂಡು ಅದನ್ನು ನಿರ್ವಹಿಸತಕ್ಕದ್ದು; ಇಲ್ಲದಿದ್ದರೆ ನಿಮ್ಮ ಮಾತಿಗೆ ಏನೂ ಬೆಲೆಯುಳಿಯದು ಮತ್ತು ಅದೆಲ್ಲ ಒಳ್ಳೆ ಘಾತಕವಾದ ಹಗರಣ ಮಾತ್ರ ಆಗಿ ಪರಿಣಮಿಸುವದು.

'ಮಾಡಿರಿ, ಮಡಿಯಿರಿ' ಇದರ ರಹಸ್ಯ

ದೇಶದಲ್ಲಿ ಸದ್ಯಕ್ಕಿರುವ ಮಹತ್ವದ ಸಮಸ್ಯೆಯೆಂದರೆ ಉತ್ಪಾದನೆ ಮತ್ತು ಉತ್ಪಾದಕರು. ನೂರಾರು ವರ್ಷಗಳಿಂದ ಬಂಡವಲುಗಾರಿಕೆಯ ಅಭಿವೃದ್ಧಿಯಾಗುತ್ತ ನಡೆದದ್ದರಿಂದ ಜನಸಾಮಾನ್ಯದ ಸಾರ್ವತ್ರಿಕ ಶೋಷಣೆಯು ಒಂದೇ ಸವನೆ ಹೆಚ್ಚುತ್ತ ನಡೆದಿದೆ ಮತ್ತು ಇಡೀ ಜಗತ್ತೇ ಇಂದು ಸಹಾಯದ ನಿರೀಕ್ಷೆಯಲ್ಲಿದೆ. ಆ ಬಗೆಯ ಕೂಗು ಎಲ್ಲೆಲ್ಲಿಯೂ ಕೇಳಬರುತ್ತದೆ. "ಬಂಡವಲುಗಾರಿಕೆಯನ್ನು ನಾಶಪಡಿಸಿರಿ ಮತ್ತು ಕಿಸಾನ ಮಜೂರ ರಾಜ್ಯವನ್ನು ಪ್ರಸ್ಥಾಪಿಸಿರಿ" ಎಂಬ ಘೋಷಣೆ ಜಗತ್ತಿನಲ್ಲೆಲ್ಲ ಕೇಳಬರುತ್ತದೆ. ಈ ಚಳವಳಿಯ ಅನಿವಾರ್ಯ ಪರಿಣಾಮವಾಗಿ ಎಲ್ಲ ಪಕ್ಷ ಸಂಗಡಗಳೂ ಒಂದೇ ಧ್ಯೇಯದತ್ತ, ಅಂದರೆ ಎಲ್ಲ ವರ್ಗಗಗಳನ್ನು ನಷ್ಟಪಡಿಸಿ ಒಂದೇ ಒಂದಾದ ಕೂಲಿಕಾರ ಸಮಾಜ ಸ್ಥಾಪನೆಯತ್ತ ಸಾಗಹತ್ತಿವೆ. ಕಮ್ಯುನಿಸ್ಟರು, ಸೋಶಾಲಿಸ್ಟರೂ ಕಾಂಗ್ರೆಸ್ಸಿಗರು ಕೂಡ ಇದೇ ಘೋಷಣೆಯನ್ನು ಮಾಡುತಿರುವರು. ಇವರೆಲ್ಲರ ಘೋಷಣೆ ಇದೊಂದೇ. ಆದರೆ ಇಷ್ಟೆಲ್ಲ ಪ್ರಚಾರಕಾರ್ಯ ನಡೆದರೂ ಜನತ್ತು ಆ ದೆಸೆಯಲ್ಲಿ ಒಂದು ಇಂಚು ಕೂಡ ಮುಂದುವರಿದದ್ದನ್ನು ನಾವು ಕಾಣುವುದಿಲ್ಲ. ಇದರ ಕಾರಣವೇನು? ದೇಶದಲ್ಲಿಯ ಸದ್ಯದ ಸಮಸ್ಯೆಗಳನ್ನು ಚರಖಾ ಸಂಘವು ಬಿಡಿಸಿ ತನ್ನ ಅಸ್ತಿತ್ವವನ್ನು ಸಾಧಿಸಿಕೊಳ್ಳಬೇಕಾಗಿದ್ದರೆ ಅದಕ್ಕೆ ಈ ಪ್ರಶ್ನೆಯನ್ನು ಮಾತ್ರ ಉತ್ತರಿಸಬೇಕಾಗಿದೆ. ಇಷ್ಟೇ ಅಲ್ಲ, ದೇಶದಲ್ಲಿಯ ಈ ಸಮಸ್ಯೆಗಳನ್ನು ಯಶಸ್ವಿಯಾಗಿ ಬಿಡಿಸಬೇಕಾಗಿದೆ; ಇಲ್ಲದಿದ್ದರೆ ಆ ಪ್ರಯತ್ನದಲ್ಲಿ ತಾನೇ ಅಳಿದು ಹೋಗಬೇಕು "ಮಾಡಿರಿ ಇಲ್ಲವೆ ಮಡಿಯಿರಿ" ಎಂಬ ಮಂತ್ರವೇ ಬಾಪೂಜಿ ತನ್ನ ವಿಧಾಯಕ ಸಂಸ್ಥೆಗಳಿಗೆ ಬಿಟ್ಟುಗೊಟ್ಟು ಹೋದ ಆಸ್ತಿ. ಊಟ ಮಾಡಿರಿ, ಕುಡಿಯಿರಿ ಮತ್ತು ಮಾನವ ಜೀವನದ ಇತರ ಕಾರ್ಯಗಳನ್ನು ಮಾಡಿರಿ ಮತ್ತು ಈ ಉದ್ದೇಶ ಸಾಧನೆಗಾಗಿ, ಹಣವನ್ನು ಗಳಿಸಿರಿ ಎಂಬುದೇ ಮಾಡಿರಿ ಎಂಬ ಹೇಳಿದ್ದರ ಅರ್ಥವೆಂದು ಸಾಮಾನ್ಯ ಜನ ತಿಳಿಯುತ್ತಾರೆ(?). ಆದರೆ "ಮಾಡಿರಿ" ಎಂಬುದಕ್ಕೆ ಬಾಪೂ ಬೇರೆ ಅರ್ಥ ಮಾಡಿಕೊಂಡಿದ್ದರೆಂಬದನ್ನು ನಾವೆಲ್ಲ ಬಲ್ಲೆವು. "ಸದ್ಯದ ಸಮಸ್ಯೆಗಳನ್ನು ಬಿಡಿಸಿರಿ ಇಲ್ಲವೆ ಆ ಪ್ರಯತ್ನದಲ್ಲಿ ಮಡಿಯಿರಿ" ಎಂಬುದೇ ಗಾಂಧೀಜಿ "ಮಾಡಿರಿ" ಎಂಬುದಕ್ಕೆ ಇಟ್ಟ [illegible] ಅರ್ಥ. ವರ್ಗರಹಿತ ಸಮಾಜವನ್ನು ಸಂಸ್ಥಾಪಿಸಬೇಕೆಂಬ ದೆಸೆಯಲ್ಲಿ ಏಕೆ ಪ್ರಗತಿಯಾಗಲಿಲ್ಲೆಂಬುದಕ್ಕೆ ಮುಖ್ಯ ಕಾರಣವಿಂತಿದೆ: ಸಮಾಜವು ಪ್ರಗತಿ [illegible] ಪ್ರತಿಯೊಬ್ಬನು [illegible] ತನ್ನ [illegible]

ತನ್ನ ವೈಯುಕ್ತಿಕ ಜೀವನ ಮತ್ತು ಸುಖಸೌಕರ್ಯಗಳಿಗೆ ಯಾವದೇ ಬಗೆಯ ಲೋಪ ಬರಬಾರದೆಂದು ಇಚ್ಛಿಸುತ್ತಾರೆ. ಖಾದಿ "ಬಜಾರು"ಗಳಲ್ಲಿಯೂ ಉಳಿಯಬೇಕು ಅವರ ಸ್ವಿಸ್ಸು ವಾಚು ಮುಸ್ಸದೆಯಬೇಕು ಎಂಬ [illegible] ಇಚ್ಛೆಯಂತೆ ಇದೆ ಈ ಇಚ್ಛೆ. ಗವರ್ನರ ಜನರಲ್‌ರ ಹಿಂದಿನ ವೈಭವ ಪ್ರದರ್ಶನಗಳೆಲ್ಲ ಹಿಂದಿನಂತೆಯೇ ಉಳಿಯಬೇಕು. ತಮ್ಮ ಗೌರವ ಪ್ರತಿಷ್ಠೆಗೆ ತಕ್ಕಂತೆ ಮಂತ್ರಿಗಳು ತಮ್ಮ ಜೀವನವನ್ನು ಸಾಗಿಸತಕ್ಕದ್ದು. ದೇಶದಲ್ಲಿಯ ಉದ್ಯೋಗ ಧಂದೆಗಳನ್ನು ಸಮರ್ಥ ರೀತಿಯಿಂದ ನಡೆಸಬೇಕಾದರೆ ಬಂಡವಲುಗಾರರು ವಿಲಾಸಭೋಗಗಳ ಮತ್ತು [illegible] ಜೀವನವನ್ನು ಸಾಗಿಸಲಿಕ್ಕೆಬೇಕು. ತಮ್ಮ ಭದ್ರತೆ ಮತ್ತು ಅಭಿವೃದ್ಧಿಗಾಗಿ ಬಂಡವಲುಗಾರರು ನಿರ್ಮಿಸಿದ ಮಧ್ಯವರ್ಗದ ಬಹುಜನರು ಸ್ವಲ್ಪವೂ ಕಲೆಯಿಲ್ಲದ ಶುಭ್ರ ಬಟ್ಟೆಯನ್ನು ಧರಿಸಿ ತಮ್ಮ ಒಡೆಯರ ಮತ್ತು ಮೇಲಧಿಕಾರಿಗಳ ನಯವಾದ ನಡೆನುಡಿಗಳನ್ನನುಸರಿಸಿ ಗೌರವದ ಥಾಟು ಇಡದಿದ್ದರೆ ಸಮಾಜದಲ್ಲಿ ಒಂದು ಬಗೆಯ ವರ್ಚಸ್ಸನ್ನು ಕೂಡ್ರಿಸಲಾರೆವೆಂದು ಭಾವಿಸುತ್ತಾರೆ. ಆದುದರಿಂದ ಪ್ರತಿಯೊಬ್ಬನ ಈ ವೇಷಭೂಷಣಗಳಲ್ಲಿ ಬದಲಾವಣೆಯಾಗಬಾರದು. ಇದ್ದಕ್ಕಿದ್ದಂತೆ ಇದೆಲ್ಲ ಇರತಕ್ಕದ್ದೆಂದು ಬಯಸುತ್ತಾನೆ. ಹೀಗಿದ್ದರೂ ಬುದ್ಧಿವಂತ ಜನರು, ಸಮಾಜವೆಲ್ಲ ಕೆಲಸಗಾರರ ವರ್ಗರಹಿತ ಸಮಾಜವಾಗಿ ಮಾರ್ಪಡಬೇಕೆಂದು ಬಯಸುವದು ಆಶ್ಚರ್ಯಕರವಲ್ಲವೇ?

ಮಧ್ಯವರ್ಗದ ಹೊಣೆ

ಮಧ್ಯವರ್ಗದವರಿಗೇ ಹೆಚ್ಚು ಕಷ್ಟನಿಷ್ಠುರಗಳು ಒದಗಿದ್ದರಿಂದ ಅವರೇ ದೊಡ್ಡ ಕೂಗನ್ನೆಬ್ಬಿಸಿರುವರು. ನವಿಲುಗರಿಗಳನ್ನು ಹಚ್ಚಿಕೊಂಡ ಕಾಗೆಯಂತಾಗಿದೆ ಅವರಸ್ಥಿತಿ. ಉಚ್ಚವರ್ಗದ ಸಮಾಜದಲ್ಲಿ ಅವರು ಸ್ಥಾನವನ್ನಪೇಕ್ಷಿಸುವರು ಆದರೆ ಅದಕ್ಕೆ ಬೇಕಾಗುವಷ್ಟು ಹಣಕಾಸು ಅವರಲ್ಲಿಲ್ಲ. ನಿಜವಾಗಿ ಹೇಳಬೇಕೆಂದರೆ, ಈ ಮಧ್ಯವರ್ಗದವರೆಂದರೆ, ಜನಸಾಮಾನ್ಯದಲ್ಲಿಯ ಒಂದು ಭಾಗವು; ಬಂಡವಲುಗಾರರು ಉಳಿದವರನ್ನು ಶೋಷಿಸುವದಕ್ಕಾಗಿ ನೇಮಿಸಿಕೊಂಡ ಏಜಂಟರು ಮತ್ತು ಸಹಕಾರಿಗಳು ಮಾತ್ರ; ಅದಕ್ಕೆ ಪ್ರತಿಫಲವೆಂದು ಈ ಮಧ್ಯವರ್ಗದವರಿಗೆ ಸ್ವಲ್ಪ ದಲ್ಲಾಲಿಯು ಮತ್ತು ಅವರ ವಿಲಾಸಭೋಗಸುಖಸೌಕರ್ಯಗಳಲ್ಲಿ ಕೆಲ ಅಂಶ ಮಾತ್ರ ದೊರೆಯುತ್ತದೆ. ಈ ಸುಖ ಸೌಕರ್ಯ ವಿಲಾಸಭೋಗಗಳ ಮೋಹಕ್ಕೊಳಗಾಗಿ ಲಕ್ಷಗಟ್ಟಲೆ ಜನರು ಈ ಪೂರಕ ಉದ್ಯೋಗಗಳಿಗೆ ಆಕರ್ಷಿಸಲ್ಪಡುತ್ತಾರೆ. ಇವುಗಳಲ್ಲಿ ತರಬೇತಿ ಹೊಂದುವದಕ್ಕಾಗಿ ತಮ್ಮ ಒಡೆಯರಂತೆ ನಟಿಸಲು ಪ್ರಯತ್ನಿಸುತ್ತಾರೆ. ಅವರ ಸಂಖ್ಯೆ ಬಹಳ ಹೆಚ್ಚಿದ್ದರಿಂದ ಇನ್ನು ಮುಂದೆ ನಿರುದ್ಯೋಗ ಮತ್ತು ಕೇವಲ "ಹಗರಣದ ಜೀವನವನ್ನು ಸಾಗಿಸುವದು ಅವರಿಗೆ ಅಶಕ್ಯವಾಗಹತ್ತಿದೆ. ಅಂತೆಯೇ ಅವರೀಗ ಅತ್ಯಂತ ನಿಕೃಷ್ಟಾವಸ್ಥೆಯಲ್ಲಿರುವರು. ಶೋಷಣೆಯ ಈ ದುಷ್ಟ ರೂಢಿಯನ್ನು ಕಡಹಿ ಅದನ್ನು ಬೆಳಸಿ ಪೋಷಿಸಿದ ಪಾಪವೆಲ್ಲ ಈ ವರ್ಗದವರಿಗೇ ಸೇರುವುದರಿಂದ ವರ್ಗರಹಿತ ಸಮಾಜ ಸ್ಥಾಪನೆಯ ಹೊಣೆಯೂ ಅವರ ಮೇಲೆಯೇ ಇದೆ. ನೀವಾದರೂ ಮಧ್ಯವರ್ಗದವರು ಆದುದರಿಂದ ಖಾದಿ ಕೆಲಸಗಾರರೆಂದು ನೀವು ಆ ದೆಸೆಯಲ್ಲಿ ಕಾರ್ಯ ಪ್ರಾರಂಭ ಮಾಡಬೇಕಾಗಿದೆ. ದೇಶದಲ್ಲಿ ಈ ಬಗೆಯ ಕ್ರಾಂತಿಯನ್ನುಂಟು ಮಾಡುವುದಕ್ಕಾಗಿಯೇ ನಿಜವಾಗಿ ಚರಖಾ ಸಂಘವು ಸ್ಥಾಪಿತವಾದದ್ದು.

ಎರಡು ಮಾರ್ಗಗಳು

ಇನ್ನು ಸಾಧಿಸುವ ಮಾರ್ಗಗಳು ದ್ವಿವಿಧ. ಮೊದಲನೆಯದೆಂದರೆ ಕಮ್ಯುನಿಸ್ಟರ ಹಿಂಸಾ ಮಾರ್ಗ ಎರಡನೆಯದು ಗಾಂಧೀಜಿಯ ಅಹಿಂಸಾ ಮಾರ್ಗ. ಮಧ್ಯವರ್ಗದವರನ್ನೆಲ್ಲ ಉತ್ಪಾದಕ ವರ್ಗವನ್ನಾಗಿ ಮಾರ್ಪಡಿಸಬೇಕೆಂಬುದು ಗಾಂಧೀಜಿಯ ಮಾರ್ಗವು. [illegible] ವರ್ಗವೆ ಉತ್ಪಾದನಕಾರ್ಯವನ್ನು ಕೈಕೊಂಡು ಉತ್ಪಾದಕವರ್ಗದಲ್ಲಿ ಸಮಾವೇಶವಾಗುವದು. [illegible] ಸಂಘವು [illegible] ಮಧ್ಯವರ್ಗದವರ ಮೇಲೆಯೆ ಇದೆ. ಆದುದರಿಂದ ಆ ದೆಸೆಯಲ್ಲಿ [illegible] ಬುದ್ಧಿವಂತಿಕೆಯು [illegible] ಬುದ್ಧಿ [illegible] ಬೇಕಾಗಿದೆ, ವರ್ಗವನ್ನು ಮಾರ್ಪಡಿಸುವ [illegible]

ಯುಕ್ತ ಅವರು ಕಷ್ಟದ ಕಾರ್ಯ [illegible] ದಿದ್ದರೆ, ಮತ್ತೊಂದು ಅಹಿಂಸಾತ್ಮಕ ಕ್ರಾಂತಿಯು ಅಂದರೆ ವರ್ಗಯುದ್ಧವು ದೇಶದಲ್ಲಿ ಪ್ರಾರಂಭವಾಗುವದು. [illegible] ದಲ್ಲಿ [illegible] ಮಧ್ಯವರ್ಗದವರ ಪರಿಸ್ಥಿತಿಯು [illegible] ವಾಗಿದೆ. (ಅಹಿಂಸಾತ್ಮಕ ಮಾರ್ಗದಲ್ಲಿ) ವರ್ಗರಹಿತ ಸಮಾಜದ ಸ್ಥಾಪನೆಗಾಗಿ ಮೊದಲನೆಯ ಮಾರ್ಗವೆಂದರೆ ಮಧ್ಯವರ್ಗದವರು ಉತ್ಪಾದಕ ವರ್ಗವನ್ನು ಸೇರುವದು ಅಂದರೆ ನೀವು ಉತ್ಪಾದಕ ಕಾರ್ಯಗಳಲ್ಲಿ [illegible] ತಕ್ಕದ್ದು. ನಿಮ್ಮ ಗಳಿಕೆಯು [illegible] ದಷ್ಟು [illegible] ತಕ್ಕದ್ದೆಂದು ನಾನು ಹೇಳುವದಿಲ್ಲ. [illegible] ಕೂಲಿಕಾರರ ಗಳಿಕೆಯಲ್ಲಿ [illegible] ಬೇರೆ [illegible] ಗಳಿಕೆಗಿಂತ ಹೆಚ್ಚು ಇರುವ ಸಂಭವವಿದೆ. [illegible] ೬೦-೧೦೦ ರೂಪಾಯಿ ಉತ್ಪನ್ನದಲ್ಲಿ ಮಧ್ಯವರ್ಗದವರು ಕುಟುಂಬದಲ್ಲಿಯ ೫-೬ ಜನರ ಉಪಜೀವನ ನಡೆಸಬೇಕಾಗುವದು. ಇದರಲ್ಲಿ ಅರ್ಧದಷ್ಟು ಬಾಹ್ಯ ಪ್ರದರ್ಶನಕ್ಕಾಗಿಯೇ ವೆಚ್ಚವಾಗುವದೆಂದು ಪ್ರತ್ಯೇಕ ಹೇಳಬೇಕಿಲ್ಲ. ಕಿಸಾನ ಮತ್ತು ಅವನ ಹೆಂಡತಿಯು ಇಡೀ ದಿನವೆಲ್ಲ ಹೊಲಗಳಲ್ಲಿ ಕೆಲಸ ಮಾಡುತ್ತಾರೆ; ಮನೆಗೆ ಮರಳಿದ ಬಳಿಕ ತಮ್ಮ ಎಲ್ಲ ಮಕ್ಕಳನ್ನು ಹಿಂದಿಕೊಂಡು ಒಳ್ಳೆ ಆರೋಗ್ಯಕರವಾದ ಊಟ ಮಾಡುವರು. ಆದರೆ ಕಾರಕೂನನು ಇಡೀ ದಿನವೆಲ್ಲ ಒಬ್ಬನೆ ಕೆಲಸ ಮಾಡಿ ಅನ್ನ ಬೇಳೆ ಇಲ್ಲವೆ ರೊಟ್ಟಿಪಲ್ಲೆಗಾಗಿ ದಾಡು ಬಿಡುತ್ತಾನೆ. ಈ ಪರಿಸ್ಥಿತಿಯನ್ನು ನೀವು ಬದಲಿಸಬಯಸುತಿದ್ದರೆ ಕುಟುಂಬದಲ್ಲಿಯ ಪ್ರತಿಯೊಂದು ವ್ಯಕ್ತಿಯೂ ಕೆಲಸ ಮಾಡಲು ನಿರ್ಧರಿಸಬೇಕು. ಹಾಗೆ ಆದರೆ ಮಕ್ಕಳ ಆರೈಕೆ ಯಾರು ಮಾಡಬೇಕು ಎಂದು ನೀವು ಕೇಳುವಿರೆಂಬುದನ್ನು ನಾನು ಬಲ್ಲೆ. ಆದರೆ ಹಿಂದುಸ್ತಾನದಲ್ಲಿ ಬಹುಸಂಖ್ಯ ಜನರು ಕೂಲಿಕಾರರಿದ್ದು ಅವರಿಗೂ ತಮ್ಮ ಮಕ್ಕಳ ಮಡಿಗಳ ಲಾಲನೆ ಪಾಲನೆ ಅಡಿಗೆ ಮತ್ತು ಇತರ ಕೆಲಸ ಮಾಡಬೇಕಾಗುವದೆಂಬುದನ್ನು ಮರೆಯಲಾಗದು. ಇನ್ನುಳಿದ ಅಡಚಣೆಗಳನ್ನು ನೀವು ಮುಂದೆ ಮಾಡಬಹುದು— ಆದರೆ ಇವೆಲ್ಲ ಅಡಚಣೆಗಳು ಶಾರೀರಿಕವಾಗಿರದೆ ಮಾನಸಿಕವಾಗಿರುವವೆಂಬುದನ್ನು ಸ್ವಂತ ಅನುಭವದಿಂದ ನಾನು ಹೇಳಬಲ್ಲೆ. ನನ್ನ ಸೂಚನೆಯನ್ನು ಕಾರ್ಯರೂಪದಲ್ಲಿ ತರುವದಕ್ಕಾಗಿ ಕೆಲಸಗಾರರ ಹೆಂಡಂದಿರಿಗೆ ಶಿಕ್ಷಣ ಕೊಡುವದನ್ನು ಯೋಜಿಸಿದೆ; ಪರಿಣಾಮವಾಗಿ ಕೆಲ ಕೆಲಸಗಾರರಿಗೆ ಈ ಕ್ರಾಂತಿಯು ಮನವಟ್ಟಾಗಿ ತಮ್ಮ ಹೆಂಡಂದಿರನ್ನು ಶಿಕ್ಷಣ ವರ್ಗಗಳಿಗೆ ಕಳಿಸಿಕೊಟ್ಟರು. ಆದರೆ ಅಡಚಣೆಗಳು ಬರಹತ್ತಿದ್ದರಿಂದ ಅವರು ಅದನ್ನು ಸಾಗಿಸಿಕೊಂಡು ಹೋಗಲು ಸಮರ್ಥರಾಗಲಿಲ್ಲ ಎಂಬುದು ವಿಷಾದಕರವು. ಅಡಚಣೆಗಳೇನು? ಅನಾದಿ [illegible] ಯುಗಗಳಲ್ಲಿಯ ತಮ್ಮ ಹಿಂದಿನ ರೂಢಿ ಸಂಪ್ರದಾಯಗಳನ್ನು ಅವರಿಗೆ ಬಿಡಬೇಕಾಯಿತು; [illegible] ಸ್ವತ [illegible] ಇರಲಿಕ್ಕಿಲ್ಲ. ಸಾಮೂಹಿಕ ಜೀವನದ ರೂಢಿಯುಳ್ಳದ್ದರಿಂದಲೂ ಕೆಲಮಟ್ಟಿಗೆ ತ್ಯಜಿಯಬೇಕಾಗಿ ಯಾಗಿರಬಹುದು.

ಸಮಸ್ಯೆಯನ್ನು ತಿಳಿದುಕೊಳ್ಳಿರಿ

ಇಂಥ ಅಡಚಣೆಗಳನ್ನೆದುರಿಸುವದಾಗದೆ [illegible] ಹೋಗುವದಿದ್ದರೆ ನೀವು ಹಾಗೆ ಮಾಡಬಹುದು. ಆದರೆ ಕಾಲಗತಿಯನ್ನು ತಿಳಿದುಕೊಂಡು ಭಾರತದ ನೀವು ಈ ಕ್ರಾಂತಿಯನ್ನು ಸಾಧ್ಯಮಾಡಿಕೊಳ್ಳದಿದ್ದರೆ ಹಿಂಸಾತ್ಮಕ ಹೋರಾಟವು ತಪ್ಪಿಸಲಾಗದಾಗಿ ನೀವು ಮುಂದಿಟ್ಟು ಮಾಡಿಕೊಳ್ಳಿರಿ. [illegible] ವೆಂಬದೇನೆಂಬುದನ್ನು [illegible] ಪ್ರತ್ಯೇಕವಾಗಿ ಹೇಳಬೇಕಿಲ್ಲ. [illegible]

[illegible]

ಕೊಂಡು [illegible] ನೀಡಿ [illegible] ಮಧ್ಯವರ್ಗದವರ [illegible] ಮಧ್ಯವರ್ಗದವರು [illegible] ಮತ್ತು [illegible] ಮಧ್ಯವರ್ಗದವರು [illegible] ಹೋಗುವ [illegible] ಮಧ್ಯವರ್ಗದವರಿಗೆ [illegible] ಮಧ್ಯವರ್ಗದವರು [illegible] ಮುಂದಿನ [illegible] ನನ ಕೆಲಸವಲ್ಲ.

ಸಾಮೂಹಿಕ ಅಡಿಗೆಮನೆಯ ಆವಶ್ಯಕತೆ

ದೇಶದಲ್ಲಿಯ ಸದ್ಯದ ಸಮಸ್ಯೆಗಳನ್ನು [illegible] ಕೆಲಸಗಾರರು ಸಾಮೂಹಿಕ [illegible] ಮತ್ತು [illegible] ಜೀವನವನ್ನು ಸಾಗಿಸುವರು, [illegible] ಕುಟುಂಬದಲ್ಲಿ ಕೆಲಸಗಾರರಲ್ಲೇ [illegible] ಕೆಲಸಗಾರರು [illegible] ಪ್ರತ್ಯೇಕವಾಗಿ [illegible] ಸಾಮೂಹಿಕ ಅಡಿಗೆಯಲ್ಲಿ [illegible]

[illegible] ಸಾಮೂಹಿಕ ಅಡಿಗೆಯನ್ನು [illegible]

ಸೇವಾಗ್ರಾಮ ಖಾದೀ ಕಾರ್ಯಕರ್ತರ ಪ್ರತಿಜ್ಞೆ

ನಾವಿಂದು ಗಾಂಧೀಜಿಯ ವರ್ಷಶ್ರಾದ್ಧವ ನ್ನಾಚರಿಸುತ್ತಿದ್ದೇವೆ. ಅವರಿಂದು ಇಲ್ಲಿ ಜೀವಂತ ಇಲ್ಲದಿದ್ದರೂ ಅವರ ಅಸ್ತಿತ್ವ ಉಪ ಸ್ಥಿತವಾಗಿದೆ. ಬಾಪು ನಮ್ಮ ಸಲುವಾಗಿಯೆ ಬಾಳಿ ಪ್ರಾಣ ಮಾಡಿದರು. ಅದುದರಿಂದ ನಾವಿಂದು ಆತ್ಮಶುದ್ಧಿಗಾಗಿ, ಜೀವನ ಧ್ಯೇಯ ಕ್ಕಾಗಿ ಮತ್ತು ಸಾಮಾಜಿಕ ಸೇವೆಗಾಗಿ ಸದ್ವಿ ಚಾರಗಳನ್ನು ತೊಡಗಬೇಕಾಗಿದೆ.

ನಮ್ಮ ಸಂಸ್ಥೆಯ ಮುಖ್ಯ ಧ್ಯೇಯ ಖಾದಿ ಪ್ರಚಾರ. ಕೆಲವರುಷಗಳಿಂದ ನಾವು ನೂಲುವ ದರಲ್ಲಿ ಹೆಚ್ಚು ವೇಗ ಮತ್ತು ಗುಣವನ್ನುಂಟು ಮಾಡಲು ಮತ್ತು ಇತರ ಅವಶ್ಯಕ ವಿಧಾನಗಳ ಗಾಗಿ ಪ್ರಯತ್ನಿಸುತ್ತಿದ್ದೇವೆ. ಅಗ್ಗ ಮತ್ತು ಸಾದಾ ಉಪಕರಣಗಳು, ನೂಲುವ ಶಾಸ್ತ್ರದ ಬಗ್ಗೆ ಸುಲಭ ಸಾಹಿತ್ಯರಚನೆ ಮತ್ತು ಅದರ ಜ್ಞಾನ ಪ್ರಸಾರಕ್ಕಾಗಿಯೂ ನಾವು ಪ್ರಯತ್ನಿಸು ತ್ತೇವೆ. ಈ ದಿಸೆಯಲ್ಲಿ ಇನ್ನೂ ಬಹಳ ಕೆಲಸ ಮಾಡಬೇಕಾಗಿದೆ. ಅದುದರಿಂದ ಸೇವಾಗ್ರಾಮ ದಲ್ಲಿಯ ಚರಕ ಸಂಘದ ಕಾರ್ಯಕರ್ತರು ಮತ್ತು ವಿದ್ಯಾರ್ಥಿಗಳಾದ ನಾವು ಈ ವರುಷ ಈ ಕಾರ್ಯದಲ್ಲಿಯೇ ನಮ್ಮ ಮಾನಸಿಕ ಮತ್ತು ಶಾರೀರಿಕ ಶಕ್ತಿಯನ್ನೆಲ್ಲ ವೈಯಕ್ತಿಕ ವಾಗಿ ಮತ್ತು ಸಾಮೂಹಿಕವಾಗಿ ಉಪಯೋಗಿ ಸಲು ಬದ್ಧಪ್ರತಿಜ್ಞರಾಗುತ್ತೇವೆ.

ಈ ರೀತಿಯಾಗಿ ಅತ್ಯಂತ ನಿಷ್ಠೆಯಿಂದ ಮತ್ತು ಭಕ್ತಿಪೂರ್ವಕವಾಗಿ ಪ್ರತಿಜ್ಞೆ ಕೈಕೊ ಳ್ಳುವಾಗಲೆ, ರಾಟಿಯ ಮುಖ್ಯ ಉದ್ದೇಶವು ಶೋಷಕವರ್ಗ ಮತ್ತು ಶೋಷಣೆಯಿಂದ ಮುಕ್ತವಾಗುವದೇ ಆಗಿದೆಂಬುದನ್ನು ನಾವು ಮರೆಯಲಾರೆವು. ಅದಕ್ಕಾಗಿ ನಾವು ನಮ್ಮ ಜೀವನದಲ್ಲಿ ಸ್ವಾವಲಂಬನ ತತ್ವವನ್ನು ಅಳ ವಡಿಸಿಕೊಳ್ಳಬೇಕು ಮತ್ತು ಈ ದಿಸೆಯಲ್ಲಿ ರಾಟಿಯೇ ಸರ್ವತ್ರ ಉಪಯುಕ್ತವಾದ್ದರಿಂದ ಮೊದಲನೆ ಮಹತ್ವದ ಹೆಜ್ಜೆಯೆಂದು ನಾವು ಇದನ್ನು ತಿಳಿದುಕೊಂಡಿದ್ದೇವೆ. ಶೋಷಣೆ ಯಿಲ್ಲದ ವೈಯಕ್ತಿಕ ಮತ್ತು ಸಾಮೂಹಿಕ ಸ್ವಾವಲಂಬನ ಜೀವನವಿಲ್ಲದೆ ರಾಟಿಯು ಬಾಳ ಲಾರದೆಂಬುದನ್ನೂ ನಾವು ಬಲ್ಲೆವು. ಜೀವನದ ಈ ಬಗೆಯ ಉಳಿದ ಅವಶ್ಯಕತೆಗಳನ್ನು ನಾವು ಮರೆಯಲಾರೆವು. ನಿಜವಾಗಿ ಇವೆಲ್ಲ ನೂಲುವ ಪ್ರಸಾರಕ್ಕೆ ಮತ್ತು ಕೊನೆಯ ಧ್ಯೇಯ ಸಾಧ ನೆಗೆ ಅವಶ್ಯವಾದ ಸಾಧನವಾಗಿದ್ದು ಮಾರ್ಗ ದರ್ಶನ ಮಾಡುತ್ತವೆ. ಅದುದರಿಂದ ನಾವಿಂದು ನಮ್ಮಲ್ಲಿ ಮತ್ತು ನಮ್ಮ ಸಂಸ್ಥೆಯಲ್ಲಿ ಇರುವ ದೋಷಗಳನ್ನೆಲ್ಲ ದೂರ ಮಾಡಲು ಸಾಮೂ ಹಿಕ ರೀತಿಯಿಂದ ಶಕ್ಯವಿದ್ದಷ್ಟು ಪ್ರಯತ್ನಿ ಸಲು ನಿರ್ಧರಿಸುದ್ದೇವೆ. ಈ ದಿಸೆಯಲ್ಲಿ ಪ್ರಾರಂಭವೆಂದು ನಮ್ಮ ಸಂಸ್ಥೆಯಲ್ಲಿ ಗಿರಣಿ ಹಿಟ್ಟನ್ನು ಉಪಯೋಗಿಸುವದಿಲ್ಲ; ನಾವೇ ನಮಗೆ ಬೇಕಾಗುವಷ್ಟು ಹಿಟ್ಟನ್ನು ಬೀಸಿಕೊ ಳ್ಳುವೆವು; ಇದು ಶಕ್ಯವಾಗದಿದ್ದರೆ ಬೀಸು ಕಲ್ಲಿ ನಲ್ಲಿ ಎರಡನೆಯವರಿಗೆ ಕೂಲಿ ಕೊಟ್ಟು ಬೀಸಿಸಿ ಕೊಳ್ಳುವೆವು. ಅದೇ ರೀತಿಯಾಗಿ ನಾವು ಗಿರಣಿ ಎಣ್ಣೆಯನ್ನುಪಯೋಗಿಸುವದಿಲ್ಲ. ಗಾಣ ದಲ್ಲಿ ತಯಾರಾದ ಎಣ್ಣೆಯನ್ನು ಉಪಯೋಗಿ ಸುವೆವು. ನಮ್ಮಲ್ಲಿ ಕೆಲವರು ಇನ್ನೂ ಚಹಾ ಕಾಫಿ ಕೋಕೋ ಕುಡಿಯುತ್ತಿದ್ದರೂ ಅವರೆಲ್ಲ ಈ ಪೇಯಗಳು ಪ್ರತಿಬಂಧಕ ಪೇಯಗಳೆಂದು ತಿಳಿದು ಅವನ್ನು ಬಿಟ್ಟು ಬಿಡುವರೆಂದು ನಂಬ ಲಾಗಿದೆ. ಅಸಹಾಯ ಸ್ಥಿತಿಯಲ್ಲಿ ಔಷಧ ವೆಂದು ಮಾತ್ರ ಅವನ್ನು ಉಪಯೋಗಿಸ ಬಹುದು. ಜೇನಿನಿಂದ ಬಳಲುವಾಗಲ್ಲದೆ ಬೇರೆ ಸಮಯದಲ್ಲಿ ಮಲಗಲಸಕ್ಕೆಂದು ನಾವು ಸೇವಕರನ್ನು ಇಟ್ಟುಕೊಳ್ಳುವದಿಲ್ಲ; ಬೇನೆ ಬಿದ್ದಾಗ ಕೂಡ ಶಕ್ಯವಿದ್ದ ಮಟ್ಟಿಗೆ ಪರಸ್ಪರ ಸಹಾಯ ಮಾಡಿ ಸೇವಕರ ಅವಶ್ಯಕತೆಯನ್ನೇ ತೆಗೆದು ಹಾಕುವೆವು. ನಮ್ಮ ಸುತ್ತುಮುತ್ತ ಲಿನ ಸ್ಥಳವನ್ನೆಲ್ಲ ಸ್ವಚ್ಛ ಇಡಲು ದಕ್ಷತೆ ವಹಿ ಸುವೆವು.

ನಮ್ಮ ಜೀವನಲಕ ಮೂಢನಿಕವಾಗಿದೆಂದು ನಾವು ಬಲ್ಲೆವು; ಅದನ್ನು ಯೋಗಸಾದಿಸಲು ಮತ್ತು ಮನಸ್ಸನ್ನು ಗಟ್ಟಿಮಾಡಿ ನಿಶ್ಚಲ ಗೊಳಿಸಲು ಮತ್ತು ಸಾಮೂಹಿಕ ಪ್ರಗತಿಯನ್ನು ಸಾಧಿಸಲು ಪ್ರಾತಃ ಸಾಯಂ ಪ್ರಾರ್ಥನೆಯಲ್ಲಿ ನಾವು ಭಾಗವಹಿಸುವೆವು.

ನಿಮ್ಮೀ ನಿರ್ಧಾರದಲ್ಲಿ ಪೂಜ್ಯ ಬಾಪೂಜಿಯ ವರು ಪೂರ್ಣ ಅನುಗ್ರಹ ಮಾಡಲಿ; ಅವರ ನೆನಪಿಗಾಗಿ ಅವರ ಅಶೀರ್ವಾದ ಪೂರ್ವಕ ಸಹಾಯವನ್ನು ಕೊಡುವೆವು.

ಸೇವಾಗ್ರಾಮ ೩೦-೧-೪೯ (ಹರಿಜನ)

(ಹಿಂದುಸ್ತಾನಿಯಿಂದ ಅನುವಾದ)

ಪ್ರಶ್ನೆ ಪೆಟ್ಟಿಗೆ

ಜಮೀನದಾರರಿಗೆ ಪರಿಹಾರ

ಪ್ರಶ್ನೆ:- ಲುಯೀಫಿಶರರು "ಗಾಂಧಿಯವ ರೊಡನೆ ಒಂದು ವಾರ" ಎಂಬದಾಗಿ ಬರೆದ ಪುಸ್ತಕದಲ್ಲಿಯ ಕೆಲ ಅವತರ ಣಿಕೆಗಳನ್ನು ಸ್ಪಷ್ಟೀಕರಣಕ್ಕಾಗಿ ನಿಮ್ಮ ಮುಂದೆ ಮಂಡಿಸಬಯ ಸುತ್ತೇನೆ.

ಪುಟ ೪೩. ಗಾಂಧೀಜಿ: "ರೈತರು ಹೊಲಗಳನ್ನು ತೆಗೆದುಕೊಳ್ಳ ತಕ್ಕದ್ದು"

ಫಿಶರ: "ಜಮೀನದಾರರಿಗೆ ಪರಿ ಹಾರ ಕೊಡುವಾಗುವದೋ?"

ಪುಟ ೭೩- ಫೀಶರ: "ಪರಿಹಾರ ಕೊಡದೆ ಅವನ್ನೆಲ್ಲ ಜಪ್ತಮಾಡಿ ಬಿಡ ಬೇಕೆಂದು ನಿಮಗೆನಿಸುವದಿಲ್ಲವೇ?"

ಗಾಂಧೀಜಿ: "ನಿಶ್ಚಿತವಾಗಿ"

ಮೇಲಿನ ಪ್ರಶ್ನೋತ್ತರಗಳನ್ನು ನೋಡಿದರೆ ಗಾಂಧೀಜಿ ಜಮೀನದಾರರಿಗೆ ಪರಿಹಾರ ಕೊಡು ವದಕ್ಕೆ ವಿರುದ್ಧವಾಗಿದ್ದರೆಂದು ತೋರುತ್ತದೆ. ಆದರೆ ಕಾಂಗ್ರೆಸಸಮಿತಿಗಳು ಮತ್ತು ಕಾಂಗ್ರೆಸ ಸರಕಾರಗಳು ಜಮೀನದಾರರಿಗೆ ಪರಿಹಾರ ಕೊಡಬೇಕೆಂಬ ಧೋರಣಕ್ಕೆ ಬದ್ಧರಾಗಿದ್ದಾರೆ. ಇವೆರಡನ್ನು ಸಮನ್ವಯಿಸುವದು ಹೇಗೆ ಮತ್ತು ಯಾವದು ನ್ಯಾಯ್ಯವಾದುದು?

ಉತ್ತರ- ಆ ಪುಸ್ತಕವನ್ನು ನಾನು ಅವ ಲೋಕಿಸಿದೆ ಹಿಂದುಮುಂದಿನ ಸಂದರ್ಭವನ್ನು ಬಿಟ್ಟು ಈ ಅವತರಣಿಕೆಗಳನ್ನು ವಿಚಾರಿಸಿದ ದರೆ ಅವುಗಳಿಂದ ತಪ್ಪು ತಿಳವಳಿಕೆಯಾಗು ವದು. ಮೊದಲನೆಯ ಸಂಭಾಷಣೆಯಲ್ಲಿ ಗಾಂಧೀಜಿಯು ಹಿಂದುಸ್ತಾನದ ರಾಜಕೀಯ ಮತ್ತು ಆರ್ಥಿಕ ರಚನೆಯೆಂತಿರಬೇಕೆಂಬ ಬಗ್ಗೆ ತಮ್ಮ ಅಭಿಪ್ರಾಯವನ್ನು ಹೇಳುವರು. ಘಟನಾ ಸಮಿತಿಯಲ್ಲಿ ಇದೀಗ ಸಿದ್ಧವಾಗುತಿರುವ ಘಟ ನೆಯ ಎದುರಿಗೆ ಅದು ತೀರ ಭಿನ್ನವಾಗಿದೆ. ಉದಾಹರಣೆಗಾಗಿ ಕೇಂದ್ರಕ್ಕೆ ಅಷ್ಟೇ, ಪ್ರಾಂತಗಳಿಗೆ ಕೂಡ ವಿಶೇಷ ಅಧಿಕಾರಗಳನ್ನು ಕೊಡುವದಕ್ಕೆ ಗಾಂಧೀಜಿ ವಿರುದ್ಧ ಇದ್ದರು. ಆ ಪುಸ್ತಕದ ೪೪ ನೇ ಪುಟದಲ್ಲಿ ಗಾಂಧೀಜಿ ಹೀಗೆ ಹೇಳಿದರೆಂದು ವರದಿಯಾಗಿದೆ:

"ಹಿಂದುಸ್ತಾನದಲ್ಲಿ ೭ ಲಕ್ಷ ಹಳ್ಳಿಗಳಿವೆ ಪ್ರತಿಯೊಂದು ಹಳ್ಳಿಯನ್ನೂ ಅಲ್ಲಿಯ ನಾಗರಿ ಕರ ಮತದಂತೆ ಸಂಘಟಿಸಲಾಗುವದು. ಹಾಗಾದರೆ ೭ ಲಕ್ಷ ಮತದಾರರಾಗುವರು. ೪೦ ಕೋಟಿಯಲ್ಲಿ ಅಂದರೆ ಪ್ರತಿಯೊಂದು ಹಳ್ಳಿಗೂ ಒಂದು ಮತ ಇದ್ದಂತಾಯಿತು ಹಳ್ಳಿಗಳು ತಮ್ಮ ಜಿಲ್ಲೆಯ ಆಡಳಿತಗಾರರನ್ನು ಆರಿಸು ವವು. ಜಿಲ್ಹೆಯ ಆಡಳಿತಾಧಿಕಾರಿಗಳು ಪ್ರಾಂತೀಯ ಆಡಳಿತಾಧಿಕಾರಿಗಳನ್ನು ಆರಿಸು ವರು. ಇವರು ಅಧ್ಯಕ್ಷನನ್ನು ಆರಿಸುವರು. ಅವನೇ ಇಡೀ ರಾಷ್ಟ್ರದ ಮುಖ್ಯ ಆಡಳಿತಾಧಿ ಕಾರಿಯಾಗುವನು."

ಘಟನಾ ಸಮಿತಿಯನ್ನು ಕೀಳ್ಗಳೆಯ ಬೇಕೆಂದು ನಾನಿದನ್ನು ಹೇಳಬಯಸುವದಿಲ್ಲ. ಗಾಂಧೀಜಿಯ ರಾಜಕೀಯ ಮತ್ತು ಆರ್ಥಿಕ ರಚನೆಗೆ ಕಾಂಗ್ರೆಸ್ಸು ಎಂದೂ ಬದ್ಧವಾಗಿಲ್ಲ; ಮುಖ್ಯವಾಗಿ ಕಾಂಗ್ರೆಸ್ಸಿನ ಅಭಿಪ್ರಾಯವನ್ನು ಪ್ರತಿಪಾದಿಸುತಿರುವ ಘಟನಾ ಸಮಿತಿಯು ಮತ್ತು ಸರಕಾರಗಳು ತಮ್ಮ ತತ್ವಗಳಂತೆಯೇ ನಡೆಯುತಿರುವದು ನ್ಯಾಯ್ಯವಾಗಿದೆ.

ಎರಡನೆಯ ಪ್ರಶ್ನೆ ಮತ್ತು ಉತ್ತರ 'ಚಲೇ ಜಾವ' ಚಳವಳಿಯ ಕಾರ್ಯಕ್ರಮದ ಸಂಬಂ ಧದಲ್ಲಿ ಚರ್ಚೆಗೆ ಬರುತ್ತದೆ. ಬ್ರಿಟಿಶರು ಯಾವ ದೊಂದು ಸಂಘಟಿತ ಸಂಸ್ಥೆಗೆ ಅಧಿಕಾರವನ್ನು ಕೊಡದೆ ಹಿಂದುಸ್ತಾನದಿಂದ ಹೊರಟದ್ದು ಹೋದರೆ ಪರಿಸ್ಥಿತಿ ಹೀಂಗಾಗಬಹುದೆಂಬ ದನ್ನು ವಿವರಿಸಲು ಗಾಂಧೀಜಿಗೆ ಕೇಳಲಾಗಿ ದ್ದಿತು. ಗಾಂಧೀಜಿ ವಿವರಿಸಿದರು:

"ಹಳ್ಳಿಗಳಲ್ಲಿ ರೈತರು ತೆರಿಗೆ ಕೊಡುವ ದನ್ನು ನಿಲ್ಲಿಸುವರು. ಸರಕಾರೀ ನಿರ್ಬಂಧ ವಿದ್ದರೂ ಅವರು ಉಪ್ಪು ತಯಾರ ಮಾಡು ವರು ಇದೇನು ಸಣ್ಣ ವಿಷಯವೆನಿಸುತ್ತದೆ. ಬ್ರಿಟಿಶ ಸರಕಾರಕ್ಕೆ ಈ ಉಪ್ಪಿನ ಕರದಿಂದ ಸ್ವಲ್ಪಹಣ ಬರುತ್ತದೆ. ಆದರೆ ಆ ಕರವನ್ನು ಕೊಡಲು ನಿರಾಕರಿಸುವದರಿಂದ ರೈತರಲ್ಲಿ ಸ್ವತಂತ್ರವಾಗಿ ಕಾರ್ಯ ಮಾಡಲು ತಾವು ಸಮರ್ಥರಿರುವೆವೆಂಬ ಧೈರ್ಯ ಬರುತ್ತದೆ. ಅದರ ಮುಂದಿನ ಹೆಜ್ಜೆಯೆಂದರೆ ಹೊಲಗಳ ಆಕ್ರಮಣ."

ಇದೆಲ್ಲ ಕೇವಲ ಕಲ್ಪನೆ, ಕಲ್ಪನಾ ಸಾಮ್ರಾ ಜ್ಯದ ಕಳಕಳಿಯುಳ್ಳ ಪ್ರಶ್ನೆಗೆ ಕೊಟ್ಟ ಉತ್ತರವನ್ನು ಸ್ವೀಕರಿಸುವದು ಯೋಗ್ಯ ವಾಗಲಾರದು. ಆದರೆ ಇವೆರಡು ಉತ್ತರಗಳನ್ನು ಬಿಟ್ಟರೂ ಗಾಂಧೀಜಿ, ಈಗ ಅನುಸರಿಸುತ್ತಿ ರುವ ಪರಿಹಾರ ಕೊಟ್ಟು ಆಸ್ತಿಯನ್ನು ವಶ ಪಡಿಸಿಕೊಳ್ಳುವಧೋರಣಕ್ಕೆ ಎಲ್ಲಿಯೂ ಒಪ್ಪಿಗೆ ಕೊಟ್ಟಿರುವರೆಂದು ನನಗೆ ತೋರುವದಿಲ್ಲ. ಆದರೆ ಅದಕ್ಕೆ ಕಾಂಗ್ರೆಸ್ಸನ್ನು ನಿಂದಿಸಲಾಗದು. ಎಲ್ಲ ಬಗೆಯ ಆಸ್ತಿಧಾರಕರು ತಮ್ಮ ಆಸ್ತಿ ಗಳ ಧರ್ಮದರ್ಶಿಗಳಂತಿರಬೇಕೆಂದು ಗಾಂಧಿ ಜಿ ಬಯಸಿದ್ದರು. ರೈತರು, ಕೂಲಿಕಾರರು ಮತ್ತು ಜನರು ಇವರೆಲ್ಲರ ಅಂದರೆ ತಮ್ಮ ಉಪಕಾರಿಗಳ ಸೇವೆಯನ್ನು ಅವರು ಮಾಡ ಬೇಕು ಮತ್ತು ಇಂಥ ಆಸ್ತಿಗಳ ವ್ಯವಸ್ಥಾಪಕ ರಿಗೆ ಸಿಕ್ಕತಕ್ಕಷ್ಟು ಗೌರವಾರ್ಥವನ್ನು ಮಾತ್ರ ಸ್ವೀಕರಿಸಬೇಕು ಎಂದು ಗಾಂಧೀಜಿ ಅಭಿ ಪ್ರಾಯಪಡುತ್ತಿದ್ದರು ಪ್ರತಿಯೊಬ್ಬರಿಗೂ ವೈಯಕ್ತಿಕ ಗೌರವಾರ್ಥ ಸಮಾನವಾಗಿರ ತಕ್ಕದ್ದು; ಜಮೀನದಾರರು, ಗಿರಣಿಯೊಡೆ ಯರು, ಸರಕಾರದ ಅತ್ಯುಚ್ಚ ಅಧಿಕಾರಿಯು ಕೂಡ ಭಂಗಿಗೆ ಇಲ್ಲವೆ ಸಾಮಾನ್ಯ ಗಿರಣಿ ಕೂಲಿ ಕಾರನಿಗೆ ದೊರೆಯತಕ್ಕಷ್ಟು ಗೌರವಾರ್ಥ ವನ್ನು ಪಡೆಯತಕ್ಕದ್ದು ಎಂದು ಗಾಂಧೀಜಿ ಅಭಿಪ್ರಾಯ ಪಡುತಿದ್ದರೆಂಬುದನ್ನು ನಾವೆಲ್ಲ ಬಲ್ಲೆವು. ಆಸ್ತಿಧಾರಕರಾಗಲಿ ಜನಸಾಮಾನ್ಯ ವಾಗಲಿ ಇಲ್ಲವೆ ಗಾಂಧೀಜಿಯ ಕಾರ್ಯ ಕರ್ತರು ಕೂಡ ಸದ್ಯಕ್ಕೆ ಇಂಥ ಕ್ರಾಂತಿಕಾ ರಕ ಜೀವನಕ್ಕೆ ಸಿದ್ಧರಾಗಿಲ್ಲಾದ್ದರಿಂದ ಕಾಂಗ್ರೆಸ್ಸು ಈಗ ಅನುಸರಿಸುತಿರುವ ಮಾರ್ಗದ ಬಗ್ಗೆ ಅದನ್ನು ಟೀಕಿಸುವದು ನ್ಯಾಯ್ಯವಾಗಲಾರದು.

ಪರಿಹಾರವು ಹೆಚ್ಚಿಗಿದೆಯೋ ಕಡಮೆ ಯಿದೆಯೋ ಮತ್ತು ಅದನ್ನು ಯಾವ ರೂಪ ದಿಂದ ಕೊಡತಕ್ಕದ್ದು ಮೊದಲಾದವೆಲ್ಲ ವಿವರದ ವಿಷಯಗಳಾದವು ಮತ್ತು ಈ ಪ್ರಶ್ನೆಗಳ ಅಭ್ಯಾಸ ಮಾಡಿದವರೇ ಅವುಗಳನ್ನು ಗುಣಾವ ಗುಣಗಳ ದೃಷ್ಟಿಯಿಂದ ಚರ್ಚೆ ಮಾಡಬಲ್ಲರು

ವರ್ಧಾ

೫-೯-೧೯೪೯ ಕಿ ಘ ಮಶ್ರೂವಾಲಾ

ಗ್ರೀಸಿನಲ್ಲಿ ಮಿಲಿಟರಿ ಕೋರ್ಟು ವಿಧಿಸಿದ ಮರಣ ದಂಡನೆಯ ವಿರುದ್ಧ ಅಪೀಲು ಮಾಡಿ ಕೊಳ್ಳುವ ಸವಲತ್ತನ್ನು ರಾಜಕೀಯ ಕೈದಿ ಗಳಿಗೆ ಕೊಡುವದರ ಸಲುವಾಗಿ ಅವರ ಮರಣ ದಂಡನೆಯನ್ನು ತಡೆ ಹಿಡಿಯಲು ಆಜ್ಞೆ ಮಾಡ ಲಾಗಿದೆ. ಕಮ್ಯುನಿಸ್ಟರ ಸಹಾನುಭೂತಿ ತೋರಿದ ಆರೋಪದ ಮೇಲೆ ಕೈದು ಮಾಡ ಲ್ಪಟ್ಟ ಸುಮಾರು ೪೦೦೦ ಜನರನ್ನು (ಅವರಲ್ಲಿ ೧೬೦೦ ಹೆಂಗಸರೂ ಸೇರಿದ್ದಾರೆ) ಬಂಧ ಮುಕ್ತ ಮಾಡಲಾಯಿತು.

ಹೆಣ್ಣುಮಕ್ಕಳಿಗಾಗಿ

ಜೀವನ ಮತ್ತು ಕಾಯದೆಯ ಸುಧಾರಣೆ

ಸೌ. ಸರಸ್ವತೀದೇವಿ ಗೌಡರ ಎಂಬವರು ತಾ. ೧೦-೯-೪೯ ರ "ಸಂಯುಕ್ತಕರ್ನಾಟಕ"ದಲ್ಲಿ ಹಿಂದುಕಾಯದೆಯ ಕ್ರೋಡೀಕರಣದ ಬಗ್ಗೆ ಕೆಲವು ಸಂಗತಿಗಳನ್ನು ತಮಗೆ ತಿಳಿದ ರೀತಿಯಲ್ಲಿ ವಿವರಿಸಿ ಸೌ. ಸರಸ್ವತೀದೇವಿ ಗೌಡರ ಅವರು ಅಕ್ಕತಂಗಿಯರು ಲಾಭಾಲಾಭ ವಿಚಾರ ಮಾಡಬೇಕೆಂದು ಬಿನ್ನವಿಸಿಕೊಂಡಿದ್ದಾರೆ. ವ್ಯವಧಾನ, ವಿಚಾರಶಕ್ತಿ ಇವುಗಳ ಅಭಾವ ಮತ್ತು ಉದಾಸೀನ್ಯಗಳ ದೆಸೆಯಿಂದ ಇತ್ತಕಡೆ ವಿಚಾರವನ್ನು ಹರಿಬಿಡುವುದು ಅನೇಕ ಅಕ್ಕತಂಗಿಯರಿಗೆ ಅಸಾಧ್ಯವಾಗಬಹುದು. ಆದರೆ ಕಾಣದೆ ಮುಟ್ಟಿದರೆ ಬೆಂಕಿಯು ಸುಡುವಂತೆ ಈ ವಿಚಾರದಲ್ಲಿ ಯಾವ ಕಾರಣದಿಂದ ತಲೆ ಹಾಕದಿದ್ದರೂ ಶಾಸನರೂಪದಲ್ಲಿ ಹೊರಬಿದ್ದರೆ ಆ ಹಿಂದು ಕಾಯದೆಯ ಕ್ರೋಡೀಕರಣದ ಪರಿಣಾಮವನ್ನು ಉಣ್ಣಲಾರೆವೆಂದು ಹೇಳಲು ನಮ್ಮ ಯಾವ ಅಕ್ಕತಂಗಿಯರಿಗೂ ಸಾಧ್ಯವಾಗದು. ಆದುದರಿಂದ ಈ ವಿಚಾರದ ಹಿನ್ನೆಲೆಯಾಗಿ ಮಾನವ ಸಮಾಜದ ಕುಟುಂಬಕಲ್ಪನೆಯ ಬಗ್ಗೆ ನಿಸರ್ಗ ಮತ್ತು ಪ್ರಬುದ್ಧ ವಿಚಾರಗಳು ನಿರ್ಣಯಿಸಿದ ಅಂಶಗಳನ್ನು ಈ ಕೆಳಗೆ ಕೊಡಲು ಯತ್ನಿಸಲಾಗಿದೆ.

ವ್ಯವಹಾರಿಕ ಆವಶ್ಯಕತೆ

ಸನ್ಯಾಸವನ್ನು ಕೈಕೊಳ್ಳದ ಜೀವಿಗೆ ಸಮಾಜ ಜೀವನ ಆವಶ್ಯಕ; ಜೀವಿಗಳ Gregarious Instinct ಅಥವಾ ಗುಂಪುಲೀಕವಾದ ಸಹಜೀವನೇಚ್ಛೆ ಅಥವಾ ಪರಪ್ರೀತಿ ಅವುಗಳಲ್ಲಿ ಸಮಾಜರಚನೆ ಮಾಡಲು ಪ್ರೇರಿಸುತ್ತದೆ. ಸಮಾಜದಲ್ಲಿ ಮಾನವ ಕುಲದ ಪ್ರಗತಿಗೆ ಸ್ತ್ರೀಪುರುಷರ ಸಹಜೀವನವನ್ನು ಅನಾದಿಕಾಲದಿಂದ (ಬುದ್ಧಿಯಿರುವ ಕಾರಣ) ಮನುಷ್ಯರು ಒಪ್ಪಿಕೊಂಡಿದ್ದಾರೆ. ಈ ಸ್ತ್ರೀ ಪುರುಷರ ಸಹಜೀವನಕ್ಕೆ ಕುಟುಂಬವನ್ನು ಒಂದು Unit ಅಥವಾ ಮೂಲ ಘಟಕವೆಂದು ತಿಳಿದುಕೊಳ್ಳಲಾಗಿದೆ. ಮನುಷ್ಯರ (ಅಥವಾ ಪ್ರಾಣಿಗಳ) ಯಾವ ಒಂದು ಗುಂಪು ಅಥವಾ ಸಂಘಟನೆಗಾದರೂ ಒಬ್ಬ ಮೇಲ್ವಿಚಾರಕ, ಅಧ್ಯಕ್ಷ ಅಥವಾ ಯಜಮಾನನನ್ನು ಅವರು ತಮ್ಮ ಹಿತದ ದೃಷ್ಟಿಯಿಂದಲೇ ನಿಯಮಿಸಿಕೊಳ್ಳುತ್ತಾರೆ. ಇದೇ ಮನೆ ಅಥವಾ ಕುಟುಂಬದಲ್ಲಿ ಗಂಡ ಅಥವಾ ತಂದೆಯ ಸ್ಥಾನ. ಸಮಾಜದ ವ್ಯವಹಾರಿಕ ಪರಿಸ್ಥಿತಿಯು ಅಮೂಲಾಗ್ರ ವಿವೇಕವೇ ಅವನಿಗೆ ಆ ಸ್ಥಾನವನ್ನು ಕೊಟ್ಟದ್ದು.

ಹೆಂಡತಿ ಅಥವಾ ತಾಯಿಗೆ ಶಿಶುಪಾಲನೆ ನಿಸರ್ಗದತ್ತವಿರುವುದರಿಂದ ಮನೆಯ ಹೊರಗಿನ ವ್ಯವಹಾರದಲ್ಲಿ ನಿತ್ಯದ ಸಂಗತಿಗಳ ಪರಿಜ್ಞಾನ ಮಾಡಿಕೊಳ್ಳುವುದು ದುಸ್ತರವಿರುವ ಕಾರಣ ಅವಳ ಯಜಮಾನಿಕೆ ಮನೆಯೊಳಗೆ ಮಾತ್ರ ಎಂಬ ರೂಢಿ ಬಂದದ್ದು. ಮನೆಯೊಳಗಿನ ವ್ಯವಹಾರ ವಿವರಗಳಲ್ಲಿ ತಂದೆ ಅಥವಾ ಗಂಡ ಹೆಚ್ಚಾಗಿ ಕೈಹಾಕುವುದಿಲ್ಲ; ಆ ಬಗ್ಗೆ ಅವನಿಗೆ ಜ್ಞಾನ ಮತ್ತು ವೇಳೆ ಸಾಕಷ್ಟಿರುವುದು ದುರ್ಲಭ. ಗಂಡ ಹೆಂಡರಿಬ್ಬರಿಗೂ ಆದರ್ಶ ನಾಗರಿಕ ಸಮಾನಾಧಿಕಾರ ಇರುವದು ವ್ಯವಹಾರದಲ್ಲಿ ಹೀಗೆ ಇಬ್ಬರ ಅನುಕೂಲತೆಗಾಗಿ ಪರಿವೃತ್ತವಾಯಿತು. ಹೀಗಾಗದಿದ್ದರೆ "ಇಬ್ಬರೂ ಕಾರ್ಭಾರ್ ಮಾಡಿದ್ರೆ, ಮನಿ ಸಾಗೀತ ಹ್ಯಾಂಗ?" ಎಂಬ ಗಾದೆಯಂತಾಗುತ್ತದೆ. ಮಹತ್ವದ ಪ್ರಶ್ನೆಗಳ ನಿರ್ಣಯಾಧಿಕಾರ ಸಮಾನವಾಗಿ ಹಂಚಲ್ಪಟ್ಟ ರೋಮನ್ ಕಾನ್ಸಲರು ರೋಂ ಚಕ್ರಾಧಿಪತ್ಯದ ವಿನಾಶಕ್ಕೆ ಕಾರಣವಾದದ್ದು ಇತಿಹಾಸಜ್ಞರಿಗೆ ತಿಳಿದ ಸಂಗತಿ.

ಕಾಯದೆಯ ಪ್ರವೇಶವೆಲ್ಲಿ?

ಪ್ರೀತಿಯಿದ್ದಲ್ಲಿ ಕಾಯದೆಯ ಸಹಾಯ ಅನವಶ್ಯಕ. ಪ್ರೀತಿಯಿಲ್ಲದಿದ್ದಲ್ಲಿ ಕುಟುಂಬ ಜೀವನ ದುಃಸಾಧ್ಯ. ಅಷ್ಟೆ ಅಲ್ಲ [illegible]. ಕಾಯದೆಯು ನೆಲೆಯಿಂಬುದು [illegible] ಜೀವನ ಬಂಧನವೆನಿಸಿದಾಗ [illegible] ಹೋಗುವ ಒಂದು ಶಸ್ತ್ರಮಾತ್ರ. ಈ ಅಂಶವನ್ನು ಸ್ತ್ರೀ ಪುರುಷರು ಮನವಿಟ್ಟು ನೋಡಿಕೊಳ್ಳಬೇಕು. ಕಳೆದ "ಕರ್ಮವೀರ"ದಲ್ಲಿ ಶ್ರೀ ವಿನೋಬಾ ಭಾವೆಯವರೆಂದಿರುವಂತೆ ಹಿಂಸೆಯನ್ನು ಅವಲಂಬಿಸಿದರೆ, ವ್ಯಕ್ತಿಯ ಲೆಕ್ಕ, ಅಥವಾ ಜಾತಿ ಜಾತಿಯ ಲೆಕ್ಕ ಹಿಡಿದು ನೋಡಿದರೆ ಅದರಲ್ಲಿ ಸ್ತ್ರೀಯ ಪರಾಜಯ ನಿಶ್ಚಿತವೆಂಬುದು ಗೊತ್ತಾಗುತ್ತದೆ. ಆದುದರಿಂದ ಸ್ತ್ರೀ ಸಮಾನ ಗೌರವವನ್ನು ಪುರುಷಲೋಕದಿಂದ ಪಡೆಯಲು ಅಪಾಯ ಚಿಂತನಕ್ಕಿಂತ ಉಪಾಯ ಚಿಂತನವನ್ನು ಅವಲಂಬಿಸಬೇಕು, ತಮ್ಮ ಅಹಿಂಸಾಬಲದಿಂದ ಪುರುಷರ ಅಹಿಂಸಾಪ್ರವೃತ್ತಿಗೆ ಪ್ರೇರಿಸಿಯೇ ದೊಂದೇ ಸರ್ವೋಯಸಾಧನವಾದೀತಲ್ಲದೆ ಕಾಯದೆಯು, ಶಸ್ತ್ರದ, ಬಲಪ್ರಯೋಗದ ಸಾಧನಗಳಿಂದ ಪುರುಷರನ್ನು ಹಣಿಯಲೂ ಶಕ್ತರಾಗಳು, ಒಮ್ಮೆ ಹಣಿದರೂ ಅದರಿಂದ ಅವಳಿಗೆ ತನ್ನ ಮೂಲ ಗುರಿಯಾದ ಪುರುಷ ಸಹಜೀವನಸೌಖ್ಯ ಲಭಿಸದು.

ಸ್ತ್ರೀ ಪುರುಷರಲ್ಲಿ ತ್ಯಾಗಬುದ್ಧಿ ಕಡಿಮೆಯಾಗುತ್ತ ಬಂದುದೇ ಅವರು ಸ್ವಾರ್ಥಭಾವನೆಯ ಮತ್ತು ತತ್ಪರಿಣಾಮವಾದ ಘರ್ಷಣದ ಉತ್ಕರ್ಷವೂ ಉಂಟಾಗುತ್ತ ಬಂದಿತು. ಅದನ್ನು ದುರುಸ್ತು ಮಾಡಲು ಮೌಲಿಕ ಅಂಶಗಳನ್ನು ಮರೆತು ಉದಾ-ತಾಯಿಮಗನನ್ನು ಸತ್ಪುತ್ರನನ್ನಾಗಿಸಾಕುವುದುಮುಂ. ಮೇಲಿಂದ ಮೇಲೆ ಬುಡಬಿಟ್ಟು ತಲೆಯನ್ನು ಸುಧಾರಿಸುವ ಪಾಶ್ಚಾತ್ಯಬುದ್ಧಿ ನಮ್ಮ ಜನರಲ್ಲಿ ತಲೆದೋರಿ, ಸ್ತ್ರೀಯರಿಗೊಂದು ಸಮಸ್ಯೆಯಿದೆ, ಅದು ಅತ್ಯಂತ ಬೃಹದಾಕಾರದ್ದು, ಅದರ ನಿವಾರಣೆಗೆ ಸದ್ಯದ ಕೌಟುಂಬಿಕ ವ್ಯವಸ್ಥೆಯನ್ನು ಕಿತ್ತೊಗೆಯಬೇಕು ಎಂಬ ವಿಚಾರವನ್ನು ಅವಲಂಬಿಸುತ್ತಿರುವುದು ಶೋಚನೀಯ. ಇದು ವಿತಂಡವಾದ; ಕುಟುಂಬವನ್ನು ಕಿತ್ತೊಗೆದರೆ ಅದರ ಸ್ಥಾನದಲ್ಲಿ ಮತ್ತೇನನ್ನು ಅದಕ್ಕಿಂತ ಉತ್ತಮವೆಂದು ನೀವು ಇಡಬಲ್ಲಿರಿ? ಎಂದು ಕೇಳಿದರೆ ಉತ್ತರವಿಲ್ಲ.

ಆಸ್ತಿಯ ಪಾಲಿನ ಕತೆ

ಹೆಣ್ಣಿಗೆ ತಂದೆಯ ಆಸ್ತಿಯಲ್ಲಿ ಪಾಲು ಸಿಕ್ಕಿದರೆ ತಂದೆತಾಯಿಗಳ ವಾರ್ಧಕ್ಯದಲ್ಲಿ ಅವರ ಪಾಲನೆ ಪೋಷಣೆಯ ಭಾರವನ್ನು ಪ್ರಮಾಣತಃ ಆ ಹೆಣ್ಣು ವಹಿಸಬೇಕೆಂದು ಹಿಂದು ಕಾಯದೆಯ ಕ್ರೋಡೀಕರಣದಲ್ಲಿ ಹೇಳಿಲ್ಲ. ಆ ಭಾರ ಗಂಡಿನ ತಲೆಗೇ ಕಟ್ಟಿದ್ದು. ಒಂದುವೇಳೆ ಸೌ. ಸರಸ್ವತೀದೇವಿಯವರೆಂದಂತೆ ಕುಲಪುತ್ರಿಯರು ಸ್ವಯಂ ಸ್ಫೂರ್ತಿಯಿಂದ ತಾಯ್ತಂದೆಯರನ್ನು ಅವರ ದುರ್ಬಲಾವಸ್ಥೆಯಲ್ಲಿ ಸಲಹುವ ಹೊಣೆಹೊತ್ತರೆಂದುಕೊಳ್ಳೋಣ. ಒಮ್ಮೆ ಗಂಡನ ಮನೆಯವರಿಗೂ ತಂದೆಯ ಮನೆಯವರಿಗೂ ವೈಮನಸ್ಯವುಂಟಾದರೆ ಆಗ ಒಬ್ಬ ಮದುವೆಯಾದ ಹೆಣ್ಣುಮಗಳು ತನ ಮನದೊಲೆತವನ್ನು ಎತ್ತ ಹರಿಯಗೊಡಬೇಕು? ಅವಳಿಗೆ ಮಾನಸಿಕ ವ್ಯವಸ್ಥೆ ಉಳಿದೀತೆ? ಇತ್ತ ಗಂಡನನ್ನು ಬಿಡಲಾರಳು ಅತ್ತ ತಂದೆಯನ್ನೂ ಬಿಡಲಾರಳು. ಹೀಗಾಗಿ ಅವಳು ಒಂದೇ ತಾಟಸ್ಥ್ಯದಿಂದ ಇಲ್ಲವೆ ಗಲಿಬಿಲಿಯಿಂದ ತನ್ನ ಜೀವನವನ್ನೂ ತನ್ನ ಗಂಡ ಮತ್ತು ತಂದೆಯ ಮನೆಯವರ ಜೀವನವನ್ನೂ ದುಃಖಕ್ಕೀಡುಮಾಡುವಂತಾಗುತ್ತದೆ. ಇಬ್ಬರೂ ಆಕೆಗೆ ಪ್ರಿಯರೆಂಬುದು ಸಹಜವಾದರೂ ಬಿಕ್ಕಟ್ಟಿನ ಪ್ರಸಂಗದಲ್ಲಿ ಒಂದಕ್ಕಿಂತ ಒಂದು ಹೆಚ್ಚು ಗ್ರಾಹ್ಯ ಎಂಬುದನ್ನು ಒಬ್ಬಾಕೆ ನಿರ್ಣಯಿಸಬೇಕಾಗುತ್ತದೆ. ಆಗ ಆಕೆ ತಂದೆಯ ಮನೆಯನ್ನು ಎತ್ತಿಹಿಡಿದರೆ ಅವಳು ತನ್ನ ಕುಟುಂಬಕ್ಕೆ, ಪತಿಗೆ ಹಾನಿ(?) ಎರಡು ಬಗೆದಂತಾಗುವದಿಲ್ಲವೆ? ಈ ಮಾನಸಿಕ ಅನ್ಯವಸ್ಥೆಯನ್ನು ತಪ್ಪಿಸಲೆಂದೇ ಹಿಂದು ಧರ್ಮದಲ್ಲಿ ಹೆಂಡತಿಗೆ ಗಂಡನೇ ಸರ್ವಶ್ರೇಷ್ಠ ಎಂದು ವಿಧಿಸಲಾಗಿದೆ. ಇದೂ ಇದರ ಜೊತೆಗೆ ಗಂಡಿಗೆ ಹೆಂಡತಿಗಿಂತಲೂ ತಾಯಿ ಮತ್ತು ತಂದೆ ಇವರೇ ಹೆಚ್ಚು ಆದರಣೀಯರು ಎಂದು ವಿಧಿಸಿದ್ದು ಕುಟುಂಬವೆಂಬ ಘಟಕಕ್ಕೆ ಎಂಥ ಸಂದರ್ಭದಲ್ಲೂ ಪೆಟ್ಟು ಬೀಳಬಾರದು ಎಂಬ ದೂರದರ್ಶಿತ್ವವಲ್ಲದೆ ಹೆಂಗಸನ್ನು ಮುಗ್ಗರಿಸಿ ಗೆಳೆಯಬೇಕೆಂಬುದೂ ಬೇಕಾಗಿಲ್ಲ. ಸ್ತ್ರೀ ಅಥವಾ ಪುರುಷನ ವೈಯಕ್ತಿಕವಾದ ಸ್ವಾರ್ಥಕ್ಕಿಂತ ಅವರ ಸಾಮೂಹಿಕ ಜೀವನದ ಆದ್ಯ [illegible] ಕುಟುಂಬಕ್ಕೇ ಹೆಚ್ಚಿನ ಪ್ರಾಶಸ್ತ್ಯ [illegible] [illegible] ಕೇವಲ ತ್ಯಾಗದ [illegible] [illegible] ಸುಖವನ್ನು [illegible] ಸಾಧಿಸಿಕೊಳ್ಳಬೇಕೆಂಬ ಹಿಂದು ಧರ್ಮಕ್ಕೆ ಅಭಿಮತವಲ್ಲದೆ ಮತ್ತೇನು? wife's Capa-

[illegible] ಹೆಂಡತಿಯದಲ್ಲಿ ಇಲ್ಲದ [illegible] ಸಾಮರ್ಥ್ಯದಲ್ಲಿ ಬರುತ್ತದೆ. [illegible] [illegible] ಸ್ಥಾನ [illegible] ಸಿಗುತ್ತದೆ. ಇದರಲ್ಲಿ ಯಾವ ಅನ್ಯಾಯವಿದೆ! [illegible] [illegible] ಸ್ವಾತಂತ್ರ್ಯವೇ [illegible] [illegible] [illegible] [illegible] ಮನುಷ್ಯರು [illegible] [illegible] ಸ್ವಾತಂತ್ರ್ಯವನ್ನು ನೋಡಿದರೆ [illegible] [illegible] [illegible] [illegible] ದೃಷ್ಟಿಯಿಂದಲೇ [illegible] [illegible] ಮೇಲೆಯೇ [illegible] [illegible]. ಸ್ತ್ರೀಯರ [illegible] ನಾಗರಿಕ [illegible]!

ಗಂಡಿನ ಪಿತ್ರಾರ್ಜಿತವನ್ನು ಕಾಪಿಡ ಪಡೆಯಲಿ


ಇದರ ಮೇಲೆ ಸ್ತ್ರೀಯರು ತಮ್ಮ ಹಿತದ ದೃಷ್ಟಿಯಿಂದ ತಮ್ಮ ವೈಯಕ್ತಿಕ ಸಾಮರ್ಥ್ಯದ ಇತಿಮಿತಿಯನ್ನು ಅರಿತುಕೊಳ್ಳುವದು ಅವಶ್ಯಕ, ಆದರ್ಶತಃ ಸ್ತ್ರೀಪುರುಷರ ಸ್ವಾತಂತ್ರ್ಯದಲ್ಲಿ ಸಾಮ್ಯವನ್ನು ಕಲ್ಪಿಸಬಹುದಲ್ಲದೆ ವ್ಯವಹಾರದಲ್ಲಲ್ಲ. ಕಾಮುಕ್ಯದಲ್ಲಿ ಗಂಡು ಹೆಣ್ಣುಗಳು ತಮ್ಮ ಪಶುಬಲವನ್ನು ಪ್ರಯೋಗಿಸಿ ಎಷ್ಟೆಷ್ಟನ್ನು ಸಾಧಿಸಿಕೊಳ್ಳಬಹುದೆಂಬುದು ಎಲ್ಲರಿಗೂ ವಿದಿತವಾದ ಸಂಗತಿ. ನಿಸರ್ಗನಿಯಮದಂತೆ ಪಶುಧರ್ಮದಲ್ಲಿ ಸ್ತ್ರೀಪುರುಷರು ಇಳಿದರೆ ಪುರುಷನ ಕೈಮೇಲಾಗುವದು ನಿಶ್ಚಿತ ಮತ್ತು ಸ್ತ್ರೀಗೆ ಸುಖದ ಬದಲು ದುಃಖ ಉಂಟಾಗುವದು ಅನುಭವಸಿದ್ಧ. ಆದುದರಿಂದ ಪರಸ್ಪರರನ್ನು ಒಲಿಸಿಕೊಳ್ಳುವದು ಸ್ತ್ರೀಪುರುಷರಿಬ್ಬರಿಗೂ ನಾಗರಿಕ ಧರ್ಮವೆನಿಸಿದರೂ ನಿಸರ್ಗದ ಶಾರೀರಿಕ ನಿಯಮದಂತೆ ಗಂಡಸಿಗದು ಅನಿವಾರ್ಯವಲ್ಲ, ಹೆಂಗಸಿಗೆ ಅನಿವಾರ್ಯ. ಆದುದರಿಂದಲೇ ಹೆಂಗಸಿಗೆ ಪತಿಯನ್ನು ಒಲಿಸಿಕೊಳ್ಳುವ ಒಂದೇ ಮಾರ್ಗವನ್ನಲ್ಲದೆ ಅವನೊಡನೆ ಹೋರಾಡುವ ಮಾರ್ಗವನ್ನು ಹಿರಿಯರು ಉಪದೇಶಿಸಿಲ್ಲ. ಹೋರಾಡುವುದರಿಂದ ಬೇರಾಗುವ ಒಂದೇ ಪರಿಣಾಮವಲ್ಲದೆ ಅದರ ಒಂದು ಉದ್ದೇಶವಾದ ಬಲಾತ್ಕಾರದಿಂದ ಪಾಶವೀ ಸೌಖ್ಯವನ್ನು ಅನುಭವಿಸುವುದು ಕೂಡ ಹೆಂಗಸಿಗೆ ಸಾಧ್ಯವಿಲ್ಲ. ಬೇರಾಗುವುದಕ್ಕೆ ಬಹಳ ಕಷ್ಟಪಡಬೇಕಾಗಿಲ್ಲ. ಹಿಂದಿನ ಕಾಯದೆಯಂತೆ ದೂರಉಳಿದು ಸ್ವಾರ್ಜಿತದ ಜೊತೆಗೆ ಭುಕ್ತ್ಯಾಂಶವನ್ನು ಪಡೆಯುವ ವಿಶೇಷ ಸವಲತ್ತು ಹೆಂಗಸಿಗೆ ಗಂಡಸರ ಉದಾರ್ಯದಿಂದ ದೊರಕಿದೆ. ರಚನಾತ್ಮಕ ರೀತಿಯಿಂದ ಸ್ವಹಿತ ಪರಹಿತಗಳನ್ನು ಸಾಧಿಸಬೇಕೆಂಬ ಸ್ತ್ರೀಗೆ ತರ್ಕದಂತೆ ಆಸ್ತಿಯಲ್ಲಿ ಸಹೋದರರೊಡನಾಗಲಿ, ಗಂಡನೊಡನಾಗಲಿ ಪಾಲು ಕೇಳುವ ಅವಶ್ಯಕತೆಯಿಲ್ಲ. ಇಬ್ಬರ ಯಜಮಾನಿಕೆ ಅಸಾಧ್ಯವಾದ ಮೇಲೆ ಕುಟುಂಬದಲ್ಲಿ ಸ್ತ್ರೀ ತನ್ನ ಸ್ವಾತಂತ್ರ್ಯವನ್ನು ಸಾಧಿಸಹೊರಟರೆ ಅದು ಸ್ವಾಚ್ಛಂದ್ಯವಾಗಿ ತನಗೂ ಕುಟುಂಬಕ್ಕೂ ಹಾನಿಯನ್ನು ಒದಗಿಸದಿರಲು ಸಾಧ್ಯವೇ? ಕಾಯದೆಯ ಬೆಂಬಲ ಪಡೆದರೆ ಗಂಡಿನ ಉದಾರ್ಯ ಮತ್ತು ಪ್ರೀತಿಗೆ ಎದುರಾಗಿ ಸಮಸ್ಪರ್ಧಿಯಾಗಿ ನಿಲ್ಲುವ ದುರವಸ್ಥೆ ಹೆಣ್ಣಿಗೆ ನಿಶ್ಚಿತ. ಪ್ರೀತಿಜೀವನಕ್ಕೆ ಅದು ಸ್ಮಶಾನಯಾತ್ರೆಯಾಗುವುದು; ವ್ಯಾಪಾರಿಗಳ ಲೆಕ್ಕಾಚಾರದ ಜೀವನಕ್ಕೂ ಕುಟುಂಬದಲ್ಲಿ ತಲೆಹಾಕಿ ಮನುಷ್ಯತ್ವದ ದರ್ಜೆ ಕೆಳಗಿಳಿಯು

[illegible]

[illegible]

[illegible]

— [illegible]



೧೦೦೦ ರೂ. ಆಹ್ವಾನ
ಮಾಯಾ-ಉಂಗುರ
[ಅದ್ಭುತವಾದ ಶೋಧನೆ]

[illegible]

Principal, THE BENGAL MESMERISM, (K.V. M.)
Jullundur City.

ಹರಿಜನ ಲೇಖ

ಅಗ್ರಲೇಖ

ಖಾದಿಯ ಭವಿತವ್ಯ

(ಗಾಂಧೀಜಿಯವರಿಂದ)

. . . . ಖಾದಿಗೆ ಭೀಕರವಾದ ಭವಿತವ್ಯವಿದೆಯೆಂದು ನನ್ನ ಖಚಿತವಾದ ಅಭಿಪ್ರಾಯ. ಅದನ್ನು ಅಲ್ಲಗಳೆಯಲು ಎಷ್ಟೋ ಚತುರ ವಾದಗಳು ಹೂಡಲ್ಪಟ್ಟಿದ್ದರೂ ಗಿರಣಿಗಳ ಉತ್ಪಾದನೆಯ ಕಣ್ಣು ಸೆಳೆಯುವ ಅಂಕೆ ಸಂಖ್ಯೆಗಳು ಪ್ರಕಟವಾಗುತ್ತಿದ್ದರೂ ನನ್ನ ನಂಬಿಕೆ ಸ್ಥಿರವಾಗಿಯೇ ಉಳಿದಿದೆ. ನಾನಾಗಿ ಮನಸ್ಸೊಪ್ಪಿ ಮಾಡಲೊಲ್ಲದುದನ್ನು ಪರಿಸ್ಥಿತಿಯ ಒತ್ತಾಯ ನನ್ನಿಂದ ಮಾಡಿಸಿಯೇ ತೀರುವುದು. ಭಾರತ ಬಾಳಬೇಕಾಗಿದೆ, ಅಂದರೆ ಅದರಲ್ಲಿರುವ ಕೋಟ್ಯಂತರ ಪ್ರಜೆಗಳು ಬಾಳಬೇಕಾಗಿದೆ. ಅವರಿಂದು ನಡೆಸುತ್ತಿರುವುದು ಬಾಳುವೆಯಲ್ಲ, ಬರಿ ಬದುಕಿದ್ದಾರೆ, ಅಷ್ಟೆ. ಈ ಮಾತಿನಲ್ಲಿ ಭಿನ್ನಾಭಿಪ್ರಾಯವೇ ಇಲ್ಲ. ಜಗತ್ತಿನಲ್ಲಿ ಬೇರಾವ ದೇಶದಲ್ಲಿಯೂ ಇಲ್ಲಿರುವಂತೆ ಕೋಟ್ಯಂತರ ಜನರಿಗೆ ಅರೆಹೊತ್ತಿನ ಉದ್ಯೋಗ ಮಾತ್ರ ಇರುವುದಾಗಲಿ, ನಾಗರಿಕತೆ ಮುಖ್ಯವಾಗಿ ಗ್ರಾಮೀಣವಾಗಿದ್ದರೂ ತಲಾ ಬರಿ ಎರಡೆಕರೆ ಹಿಡುವಳಿಗಳಿರುವುದಾಗಲಿ ಕಾಣಸಿಗಲಾರದು. ಎಲ್ಲ ಬಟ್ಟೆಯನ್ನು ಉಗಿಯ ಅಥವಾ ವಿದ್ಯುತ್ತಿನ ಬಲದಿಂದಲೆ ಇಲ್ಲವೆ ಪರದಕ್ಕೆ ಉಪಯೋಗಿಸುವ ಮನುಷ್ಯಶಕ್ತಿ ಹೊರತು ಬೇರಾವ ಶಕ್ತಿಯಿಂದಲೆ, ನಡಸಿದರೆ ದೇಶದಲ್ಲಿ ನಿರುದ್ಯೋಗ ಇನ್ನಷ್ಟು ಗಾಢವಾಗುವುದು ಖಂಡಿತ. ಆದುದರಿಂದ, ಭಾರತದಲ್ಲಿ ಔದ್ಯೋಗೀಕರಣವೆಂದರೆ, ನಮಗೆ ಲಜ್ಜಾವಹವೆನಿಸುವಂತೆ ಸಮಾಜದ ಅತಿ ನೀಚ ವರ್ಣವಾಗಿರುವ ಹರಿಜನರನ್ನೊಳಗೊಂಡು ಕೋಟ್ಯಂತರ ಭಾರತೀಯರ ಸರ್ವನಾಶವೇ ಸರಿ.

ಅತಿಶಯವಾಗಿ ಉದ್ದಿಮೆಗಳನ್ನು ಬೆಳೆಸುವ ಮೂಲಕ ಅಮೇರಿಕೆಯಲ್ಲಿ ಪ್ರತಿಯೊಬ್ಬನೂ ಸುಮಾರು ೩೬ ಗುಲಾಮರಿಗೆ ಸಮಾನವಾದುದರ ಒಡೆಯನಾಗಿದ್ದಾನೆಂದು ಕೇಳುತ್ತೇವೆ. ನಾವು ಅಮೇರಿಕೆಯ ಮೇಲ್ಪಂಕ್ತಿಯನ್ನು ಅನುಸರಿಸಿ ೩೬ ರ ಬದಲು ತಲಾ ೩೦ ಗುಲಾಮರಂತೆಯೆ ಹಂಚಿಕೊಂಡರೂ ನಮ್ಮ ೩೧ ಕೋಟಿ ಮನುಷ್ಯ ಪ್ರಾಣಿಗಳಲ್ಲಿ ೩೦ ಕೋಟಿ ಜನರು ಆತ್ಮಹತ್ಯೆಯನ್ನಾದರೂ ಮಾಡಿಕೊಳ್ಳಬೇಕು. ಅಥವಾ ಕೊಲ್ಲಲ್ಪಡಬೇಕಾಗುವುದು ಕೆಲ ಉತ್ಸಾಹಿ ದೇಶಭಕ್ತರು ಹೀಗಾದರೆ ತಪ್ಪಿಲ್ಲವೆಂದಿಷ್ಟೇ ಅಲ್ಲ, ಅದೇ ಶ್ರೇಯಸ್ಕರವೆಂದೂ ಬಗೆಯಬಹುದೆಂದು ನನಗೆ ಗೊತ್ತು. ೩೦ ಕೋಟಿ ನಿಸ್ತ್ರಾಣ್ಯ ನಡೆಯುವ ಸಾಮರ್ಥ್ಯ ಕೂಡ ಇಲ್ಲದ ಜಂತುಗಳಿರುವುದಕ್ಕಿಂತ ಬರಿ ಒಂದು ಕೋಟಿ ಸುಖಸಂತುಷ್ಟರೂ ಶಸ್ತ್ರಶಕ್ತಿಸಂಪನ್ನರೂ ಆದ ನರಪುಂಗವರಿರುವುದೇ ಒಳಿತೆಂದು ಅವರು ಹೇಳುವರು. ಈ ತತ್ವಜ್ಞಾನಕ್ಕೆ ನನ್ನಲ್ಲಿ ಪ್ರತ್ಯುತ್ತರವಿಲ್ಲ ಏಕೆಂದರೆ ಹರಿಜನ ಮನೋವೃತ್ತಿಯಿಂದ ತುಂಬಿದ ನನಗೆ ಕೋಟ್ಯಂತರ [illegible] ಚಿಂತೆಬಿಟ್ಟು ವಿಚಾರಿಸುವ ಶಕ್ತಿಯೇ ಇಲ್ಲ. ಅವರ ಸುಖಸೌಕರ್ಯದ ಮೇಲೆ ನನ್ನದೂ ನಿರ್ಭರವಾಗಿರಲಿ, ಅವರು ಬದುಕಿದರೆ ಮಾತ್ರ ನಾನೂ ಬದುಕುವೆ ಎಂಬವನು ನಾನು. ಸ್ವಪ್ರಯತ್ನದಿಂದ ಏನೂ ತೊಂದರೆಯಿಲ್ಲದೆ ಬೆಳಸಿಕೊಳ್ಳಬಲ್ಲದಾದ ಮತ್ತು ಸಂಗಡ ಬೇಕು-ಬೇಕಾದಲ್ಲಿಗೆ ಒಯ್ಯಬಹುದಾದ ಈ ಹುಟ್ಟು ಚರಕದ ಹುಟ್ಟು ಅವರಿಂದಾಚೆಗೆ ನನ್ನ ಬುದ್ಧಿ ಓಡುವುದೇ ಇಲ್ಲ. ಈ ಸಂಬಂಧದಲ್ಲಿ ಪತ್ರಿಕೆಗಳಲ್ಲಿ ಪ್ರಕಾರ ಹೊಂದುತ್ತಿರುವ ಈ ಕೆಳಗಿನ ಮಾತುಗಳನ್ನು ಹೊಸ ಪತ್ರಿಕೆಯಿಂದ [illegible]:

“ಕೆಲ ಉದ್ಯಮಗಳಲ್ಲಿ ಉಂಟಾಗಿರುವ ನಿರುದ್ಯೋಗವನ್ನು ನಿವಾರಿಸಲು ಮನುಷ್ಯ [illegible] ಉಪಯೋಗಿಸಲ್ಪಡುತ್ತಿ[illegible] ಯಂತ್ರಗಳನ್ನು [illegible] ಪ್ರತಿಬಂಧ [illegible] “ಮ್ಯಾಂಚೆಸ್ಟರ್ ಗಾರ್ಡಿಯನ್” ಪತ್ರಿಕೆ ಬರೆಯುತ್ತದೆ, “ ಜರ್ಮನಿಯಲ್ಲಿ [illegible] ಯಂತ್ರಗಳ ಕಾರಣವಾಗಿ [illegible] ಉಪಯೋ[illegible]ಗವನ್ನು ನಿಲ್ಲಿಸುವ ಮೂಲಕ ತರ್ಕಬದ್ಧವಾದ ಉಪಾಯವನ್ನು ಕೈಕೊಳ್ಳಲು ನಾಜಿಗಳೇ ಬರಬೇಕಾಯಿತು. ಜರ್ಮನಿಯಲ್ಲಿ ಸಾಧಿಸಲಾದ ಮನುಷ್ಯಶ್ರಮವನ್ನುಳಿಸುವ ಅದ್ಭುತ ಯುಕ್ತಿಗಳನ್ನು ಅಭಿನಂದಿಸಲು ಜಗತ್ತು ಪ್ರಸ್ತುತವಾಗಿ ಬಹಳ ದಿನ ಕಳೆದಿಲ್ಲ. ಈಗಾಗಲೆ ಸರಕಾರ ಯಂತ್ರದ ವಿರುದ್ಧ ಹೋರಾಡತೊಡಗಬೇಕಾಗಿದೆ. ಯಂತ್ರದ ಉಪಯೋಗವನ್ನೇ ಪ್ರತಿಬಂಧಿಸಿ, ಇಲ್ಲವೆ ಹೆಚ್ಚು ಜನರನ್ನು ನೇಮಿಸಿಕೊಳ್ಳಲನುವಾಗುವಂತೆ ಕೆಲಸದ ತಾಸುಗಳನ್ನು ಕಡಿಮೆ ಮಾಡಲು ಉದ್ದಿಮೆಗಾರರನ್ನು ನಿರ್ಬಂಧಿಸಿ ಅವರೀ ಕಾರ್ಯವನ್ನು ಸಾಧಿಸಹೊರಟಿದ್ದಾರೆ. ಯಾಂತ್ರಿಕ ರಾಟೆಯನ್ನು ಬಿಟ್ಟು ಕೈರಾಟೆಯನ್ನೂ ಯಾಂತ್ರಿಕ ಮಗ್ಗವನ್ನು ಬಿಟ್ಟು ಕೈಮಗ್ಗವನ್ನು ಬಳಕೆಗೆ ತರುವ ಮಿ. ಗಾಂಧಿಯವರ ಪ್ರಯತ್ನವನ್ನೇ ಜರ್ಮನ್ ಸಿಗಾರ ಮತ್ತು ಗಾಜಿನ ಉದ್ಯಮಗಳಲ್ಲಿ ಅನುಸರಿಸಲಾಗುತ್ತಿದೆ.”

“ಗಾರ್ಡಿಯನ್” ಪತ್ರಿಕೆಯ ಟೀಕೆ ಹೀಗೆ ಕೊನೆಗೊಳ್ಳುತ್ತದೆ: “ಜರ್ಮನ್ ತತ್ವಗಳು ಮಧ್ಯಯುಗಕ್ಕೆ ಮರಳಬಹುದಾದರೆ ಅದರ ಅರ್ಥಪದ್ಧತಿಯೂ ಆ ಸ್ಥಿತಿಗೇ ಮರಳುವುದು ಅಸಂಗತವಲ್ಲ” ಈ ಟೀಕೆಗಳಿಗೆ ಉತ್ತರ ಕೊಡುತ್ತ ಒಬ್ಬ ಪತ್ರಕಾರ “ಗಾರ್ಡಿಯನ್”ನಲ್ಲಿ ಬರೆಯುತ್ತಾನೆ:

“ತಯಾರಾದ ಎಲ್ಲ ಸಾಮಗ್ರಿಗಳೂ ಬಳಕೆಗೆ ಬೀಳುವ ವರೆಗೆ ಉತ್ಪಾದನವೇಗವನ್ನು ಇಳಿಸಬೇಕೆಂದು ಪ್ರಯತ್ನಿಸುತ್ತಿರುವ ಹಿಟ್ಲರ್, ಗಾಂಧಿ ಮೊದಲಾದವರು ಮಧ್ಯಯುಗೀನ ಪದ್ಧತಿಗಳನ್ನು ಪುನರುಜ್ಜೀವಿಸುತ್ತಿರಬಹುದಾದರೂ ಕೈಗಾರಿಕೆಗಳು ಸರ್ವಥಾ ಪ್ರತಿಗಾಮಿಯಾಗಲಿ ಅನಾಗರಿಕವಾಗಲಿ ಅಲ್ಲವೆಂದು ಹೇಳಬೇಕಾಗಿದೆ. ಅವುಗಳನ್ನು ಪ್ರತಿಯೊಂದು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಯಲ್ಲಿ ಕಲಿಸಲಾಗುತ್ತಿದೆ. . . . . ಸಕಾಲದಲ್ಲಿ ನಿರುದ್ಯೋಗವನ್ನು ಹೊಸ ಮತ್ತು ಸಂಪ್ರದಾಯವಿರುದ್ಧ ರೀತಿಗಳಿಂದಲಾದರೂ ನಿವಾರಿಸದೆ ಹೋದರೆ ಕ್ರಾಂತಿಗಳಿಂದಲೂ ಯುದ್ಧಗಳಿಂದಲೂ ಯಂತ್ರಯುಗವೇ ಅದೃಶ್ಯವಾಗುವುದಲ್ಲದೆ ನಮ್ಮೆಲ್ಲರನ್ನೂ ಅವು ನಿರ್ನಾಮ ಮಾಡುವುವು. ಎಲ್ಲಿಯವರೆಗೆ ಯಂತ್ರಗಳು ಶ್ರೀಮಂತ-ದರಿದ್ರ ವರ್ಗಗಳೆರಡರ ಸುಖಕ್ಕೆ ಕಾರಣವಾಗುವವೋ ಅಲ್ಲಿ ವರೆಗೆ ಮಾತ್ರ ಅವು ಹಿತಕಾರಿ. ಆದರೆ ಇಂದು ಅನೇಕ ಪ್ರಮುಖ ಪಾಶ್ಚಾತ್ಯ ಔದ್ಯಮಿಕ ರಾಷ್ಟ್ರಗಳಲ್ಲಿ ಆಗಿರುವಂತೆ ಅವು ನಿರುದ್ಯೋಗಕ್ಕೂ ಲಕ್ಷಾಂತರ ಜನರ ಉಪವಾಸಕ್ಕೂ ಕಾರಣವಾದರೆ ಅಭಿಶಾಪಸ್ವರೂಪವೇ ಸೈ. ಯಂತ್ರಗಳಿರುವುದು ಮನುಷ್ಯನಿಗಾಗಿ ಹೊರತು ಇವನು ಅವಕ್ಕಾಗಿ ಅಲ್ಲ. ಆದುದರಿಂದ ಅವು ಜನರ ಹಿತಕ್ಕೆ ವಿಧೇಯವಾಗಿರಬೇಕಲ್ಲದೆ ಅವೇ ಅವರ ಸ್ವಾಮಿಯಾಗತಕ್ಕದ್ದಲ್ಲ.”

ಜರ್ಮನಿಯಲ್ಲಿ ಗ್ರಾಮೋದ್ಯೋಗಗಳನ್ನು ಯುದ್ಧಭಯದಿಂದ ಉಜ್ಜೀವನಗೊಳಿಸಲಾಗುತ್ತಿದೆಯೆಂಬುದು ಇಲ್ಲಿ ಪ್ರಸ್ತುತವಲ್ಲ. ಆದರೆ ಅತ್ಯುತ್ತಮ ತಾಂತ್ರಿಕ ಚಾತುರ್ಯವುಳ್ಳ ಔದ್ಯಮೀಕರಣದಲ್ಲಿ ಪ್ರಥಮ ಶ್ರೇಣಿಯದೆನಿಸಿಕೊಂಡ ಆ ರಾಷ್ಟ್ರವಿಂದು ತನ್ನ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಲು ಗ್ರಾಮೋದ್ಯೋಗಗಳನ್ನು [illegible] ಆಶ್ರಯಿಸಬೇಕಾಗಿದೆಯೆಂಬುದೀಗ ಇಲ್ಲಿ ಗಮನಾರ್ಹವಾಗಿದೆ.

(ಹರಿಜನ, ೨೭-೧೦-೩೪)

ಸರ್ವೋದಯ

ಮೇಲಿನ ಹೆಸರಿನ ಶ್ರೀ ವಿನೋಬಾ ಭಾವೆ ಮತ್ತು ದಾದಾ ಧರ್ಮಾಧಿಕಾರಿ ಇವರ ಸಂಪಾದಕತ್ವದಲ್ಲಿ ಆಗಸ್ಟ್ ೧೯೩೮ ರಿಂದ ನಾಗರೀ ಲಿಪಿಯ ಹಿಂದುಸ್ತಾನಿಯಲ್ಲಿ ಒಂದು ಮಾಸಪತ್ರಿಕೆ ಹೊರಟಿದ್ದು ಅದರ ಎರಡು ಸಂಚಿಕೆಗಳು ನಮ್ಮ ಕೈಸೇರಿವೆ. ಗಾಂಧೀಜಿಯ ಧ್ಯೇಯಗಳಿಗಾಗಿ ಮೀಸಲಾದ ಈ ಪತ್ರಿಕೆ ಸರ್ವಸೇವಾ ಸಂಘ, ವರ್ಧಾ ಇಲ್ಲಿಂದ ಹೊರಡುತ್ತಿದೆ. ವಾರ್ಷಿಕ ಚಂದಾ ರೂ. ೩. [illegible] ಪತ್ರಿಕೆಗೆ [illegible] ಸುಸ್ವಾಗತವು.

ದೇಶಭಕ್ತ ಕೊಂಡಾ ವೆಂಕಟಪ್ಪಯ್ಯ

೧೯೩೦ ರ ಉಪ್ಪಿನ ಸತ್ಯಾಗ್ರಹದಲ್ಲಿ ಅವರು ಆಂಧ್ರ ದೇಶಕ್ಕೆ ನೇತೃವಾಗಿ ನಿಂತರು ಮತ್ತು ೧೯೩೨ ರ ಅಸಹಕಾರ ಚಳವಳಿಯಲ್ಲಿಯೂ ಅವರೇ ಮುಂದಾಳಾಗಿದ್ದರು. ೧೯೩೩ ರಲ್ಲಿ ಆಂಧ್ರದಲ್ಲಿ ಮಹಾತ್ಮರು “ಹರಿಜನಪ್ರವಾಸ”ವನ್ನು ಮಾಡಿದರು. ಆಗ ವೆಂಕಟಪ್ಪಯ್ಯನವರು ನಿಧಿ ಸಂಗ್ರಹದಲ್ಲಿ ನೆರವಾದರು. ಶಾರದಾ ನಿಕೇತನಕ್ಕೆ ಸಹಾಯ ಸಲ್ಲಿಸಿದ್ದಲ್ಲದೆ ಅವರು ಯಾಜ್ಞವಲ್ಕ್ಯ ಶಿಕ್ಷಣ ನಿಧಿಗೆ ೫೦೦ ರೂಪಾಯಿಗಳನ್ನು ದಾನ ಮಾಡಿದರು. ಅವರಿಗೆ ಹಳೆಯ ಕಾಲದ ಹಿಂದು ಸಾಹಿತ್ಯದ ಬಗ್ಗೆ ತುಂಬ ಪ್ರೇಮ; ಆದರಿಂದ ಅವರು ಪಂಡಿತರಿಗೆ ಮೃಷ್ಟಾನ್ನವನ್ನು ಹಾಕಿ ದಕ್ಷಿಣಾದಿ ದಾನಗಳಿಂದ ಮನ್ನಿಸುತ್ತಿದ್ದರು. ದುಡಿಯುತ್ತಿದ್ದಾಗ ಇಂಥ ಕಾರ್ಯ ನಿತ್ಯವೂ ಅವರಲ್ಲಿ ನಡೆಯುತ್ತಿತ್ತು; ಅನಂತರವಾದರೂ ಈ ಪದ್ಧತಿ ಪೂರ್ಣವಾಗಿ ನಿಲ್ಲಲಿಲ್ಲ. ೧೯೪೦ ರಲ್ಲಿ ಅವರ ಅನಾರೋಗ್ಯದ ದೆಸೆಯಿಂದ ಬಾಪು ಅವರಿಗೆ ಜೇಲಿಗೆ ಹೋಗಲು ಬಿಡಲಿಲ್ಲ. ೧೯೪೨ ರ “ಚಲೇಜಾವ್” ಚಳವಳಿಯಲ್ಲಿ ಅವರಿಗೆ ಪುನಃ ಕಾರಾವಾಸ ಪ್ರಾಪ್ತಿಯಾಯಿತು; ಆದರೆ ೧೯೪೩ ರಲ್ಲಿ ಅನಾರೋಗ್ಯದ ಕಾರಣದಿಂದ ಅವರನ್ನು ಅನಿರ್ಬಂಧವಾಗಿ ಬಿಡುಗಡೆ ಮಾಡಲಾಯಿತು. ಒಟ್ಟಿಗೆ ಅವರು ನಾಲ್ಕು ವರ್ಷಗಳನ್ನು ಜೇಲಿನಲ್ಲಿ ಕಳೆದಂತಾಯಿತು.

ಅವರ ಜೇಲುಜೀವನವನ್ನು ಕಾಣುವ ಸಂಯೋಗ ನನಗೊದಗಿತು. ಅದು ತೀರ ಆದರ್ಶ ರೀತಿಯದಾಗಿತ್ತು, ಅವರನ್ನು ಅಲ್ಲಿ ಒಬ್ಬ ಋಷಿಯೆಂದೇ ತಿಳಿಯಲಾಗುತ್ತಿತ್ತು. ಸಂಪುಗಿಂಪಿನ ಸಮಯದಲ್ಲಿ ಅವರು ಜೇಲಿನ ಅಂಗಳದೊಳಗೆ ತಮ್ಮ ಸಹಜೀವಿಗಳೊಡನೆ ಸಹಕರಿಸಿ ಅವರ ಕಷ್ಟಗಳಲ್ಲಿ ಪಾಲುದಾರರಾಗಲು ಸದಾಸಿದ್ಧರಾಗಿದ್ದರು; ಕೆಲ ಅಗ್ರಹ ವೃತ್ತಿಯ ಕೆಲಸಗಾರರು ಹಿಂದೆ ಬಿದ್ದರೂ ಅವರು ಕಡೆಯ ವರೆಗೂ ದೃಢತೆಯಿಂದ ನಿಂತಿದ್ದರು. “ಡಚ್ ರಿಪಬ್ಲಿಕ್” ಎಂಬ ಗ್ರಂಥವನ್ನು ಅವರು ತೆಲುಗಿಗೆ ಅನುವಾದಿಸಿದರು ಮತ್ತು ತೆಲುಗಿನಲ್ಲಿ ತಾಂತ್ರಿಕ ಮತ್ತು ಪಾರಿಭಾಷಿಕ ಪದಗಳ ಒಂದು ಶಬ್ದಕೋಶವನ್ನು ರಚಿಸಿದರು. ಜೇಲಿನ ಹೊರಗಿದ್ದಾಗ ಅವರು ತೆಲುಗಿನ ಗದ್ಯಪದ್ಯಗಳಲ್ಲಿ ಆತ್ಮ ವಿಚಾರ, ಸೃಷ್ಟಿ ವಿಚಾರ, ಆತ್ಮಚರಿತ್ರೆ ಮತ್ತು ಇತರ ಗ್ರಂಥಗಳನ್ನು ಬರೆದರು. ತಿರುಪತಿಯ ಅಂಧ್ರಾಭಿಮಾನದೇವ ವೆಂಕಟೇಶ್ವರ ಪರವಾದ ಭಕ್ತಿಗ್ರಂಥವೊಂದನ್ನುಳಿದು ಮಿಕ್ಕ ಯಾವುವೂ ಅವರ ಜೀವಿತಕಾಲದಲ್ಲಿ ಪ್ರಕಟವಾಗಲಿಲ್ಲ. ಅವರೇ ಮೊದಲಿನಿಂದ ೧೩ ವರ್ಷಗಳ ವರೆಗೆ ಅಧ್ಯಕ್ಷರಾಗಿದ್ದ ಆಂಧ್ರ ಹಿಂದುಸ್ತಾನಿ ಪ್ರಚಾರ ಸಭೆಯು ಈಗ ಅವೆಲ್ಲವನ್ನೂ ಬೆಳಕಿಗೆ ತರಲಾರಂಭಿಸಿದೆ.

೧೯೪೩ ರಲ್ಲಿ ಜೇಲಿಂದ ಹೊರಗೆ ಬಂದ ಬಳಿಕ ಆರೋಗ್ಯವನ್ನು ಸುಧಾರಿಸಿಕೊಳ್ಳುವುದರ ಸಲುವಾಗಿ ಕೆಲ ಕಾಲ ವಿಶ್ರಾಂತಿ ತೆಗೆದುಕೊಂಡರು; ಅನಂತರ ಅವರು ರಾಯಲಸೀಮೆಯ ಕ್ಷಾಮ ಪರಿಹಾರದ ಸಂಘಟನಾ ಕಾರ್ಯವನ್ನು ವಹಿಸಿಕೊಂಡರು. ಅದಕ್ಕಾಗಿ ಅವರು ಮುಂಬಯಿಗೆ ಹೋಗಿ ಒಂದು ಲಕ್ಷಕ್ಕಿಂತ ಹೆಚ್ಚು ದ್ರವ್ಯವನ್ನು ಸಂಗ್ರಹಿಸಿದರು. ಅದಕ್ಕೂ ಮೊದಲು ಗುಂಟೂರು ಜಿಲ್ಲೆಯ ಒಂಗೋಲೆ ತಾಲೂಕಿನ ಕ್ಷಾಮ ಪರಿಹಾರದ ಸಂಘಟನೆಯನ್ನು ಮಾಡಿ ಒಂದು ಖಾದಿ ಕೇಂದ್ರವನ್ನು ತೆರೆಯಲು ವೆಂಕಟಪ್ಪಯ್ಯನವರೇ ಕಾರಣರಾದರು. ಈಗಲೂ ಅದು ಅದೇ ಪ್ರಕಾರ ಅ. ಭಾ. ಚರಕ ಸಂಘದ ಆಂಧ್ರ ಶಾಖೆಯ ಆಶ್ರಯದಲ್ಲಿ ಕೆಲಸ ಸಾಗಿಸುತ್ತಿದೆ. ಮೊದಲು ಬಂದ ಲಾಭದಲ್ಲಿ ಪ್ರತಿವರ್ಷವೂ ಅಲ್ಲಿ ಬಾಪುವಿನ ವರ್ಧಂತಿಯನ್ನು ಆಚರಿಸಿ ನೂಲುಗಾರರಿಗೆ ಪಾರಿತೋಷಕವನ್ನು ಕೊಡುವ ವ್ಯವಸ್ಥೆಯನ್ನು ಮಾಡಲಾಗಿದೆ.

೧೯೩೭ ರಲ್ಲಿ ಅವರು ಮದ್ರಾಸಿನ ಶಾಸನಸಭೆಗೆ ಎರಡನೆಯ ಸಲ ಆರಿಸಿ ಬಂದರು ಮತ್ತು ಎರಡನೆಯ ಜಾಗತಿಕ ಯುದ್ಧ ಸುರುವಾಗಿ ಕಾಂಗ್ರೆಸ್ ಮಂತ್ರಿಮಂಡಲ ರಾಜೀನಾಮೆ ಸಲ್ಲಿಸಿದಲ್ಲಿಯ ವರೆಗೆ ಎಷ್ಟೋ ಉಪಯುಕ್ತ ಕಾರ್ಯಗಳನ್ನು ಮಾಡಿದರು. ೧೯೪೬ ರಲ್ಲಿ ಅವರು ಚುನಾವಣೆಗೆ ನಿಲ್ಲಲಿಲ್ಲ; ಆದರೆ ಆಂಧ್ರ ಪ್ರಾಂತಿಕ ಕಾಂಗ್ರೆಸ್ ಸಮಿತಿ ಮಾಡಿದ [illegible]ಗಳನ್ನು ಸರಿಪಡಿಸಲು ಮುಂಬಯಿಗೆ ಯಾತ್ರೆ ಮಾಡಿದರು. ಅಲ್ಲಿ ಅವರ ಹೇಳಿಕೆಯ ಮೇರೆಗೆ ಸರದಾರ ಪಟೇಲರು ಹಲವು ಬದಲಾವಣೆಗಳನ್ನು ಮಾಡಿದರು.

ಬಾಪುವಿಗೆ ಶ್ರೀ ವೆಂಕಟಪ್ಪಯ್ಯನವರು ಕಾಂಗ್ರೆಸ್ ವರ್ಗಗಳಲ್ಲಿ ಹಬ್ಬಿದ ಭ್ರಷ್ಟಾಚಾರದ ಬಗ್ಗೆ ಬರೆದ ಪತ್ರ ಸುಪ್ರಸಿದ್ಧವಾಗಿದೆ. ಬಾಪು ಅದನ್ನು ಸರಿಯಾದ ಯೋಗ್ಯತಾ ನಿರ್ಣಯವೆಂದು ಗ್ರಹಿಸಿದರಲ್ಲದೆ, ಇತರ ಅಧಿಕಾರಿ ಅಧಿಕಾರೇತರರೂ ಅದನ್ನು ಮೆಚ್ಚಿದರು. ಅವರು ಸ್ವರ್ಗ ಪ್ರಯಾಣ ಮಾಡುವ ಮುನ್ನ ಬೀಳ್ಕೊಡಲು ಕೊಟ್ಟ ಸಂದೇಶವು ದುರ್ದೈವದಿಂದ ಅಪೂರ್ಣವಾಗಿ ಉಳಿದರೂ ಅದೇ ಹಾದಿಯಲ್ಲಿ ಹರಿದಿದೆ; ಅದರಲ್ಲಿ ಮಹಾತ್ಮರು ಗೆದ್ದುಕೊಟ್ಟ ಸ್ವಾತಂತ್ರ್ಯಕ್ಕೆ ಅರ್ಹರಾಗಿರೆಂದು ಸ್ವದೇಶೀಯರಲ್ಲಿ ಕಳಕಳಿಯಿಂದ ಅವರು ಪ್ರಾರ್ಥಿಸಿಕೊಂಡಿದ್ದಾರೆ. ಅದು ಅವರ ಪರಿಪಕ್ವವಾದ ವಿಚಾರಧಾರೆಯನ್ನು ವ್ಯಕ್ತಗೊಳಿಸುತ್ತದೆ.

ಆಂಧ್ರಪ್ರಾಂತ ನಿರ್ಮಾಣದ ಕಾರ್ಯದಲ್ಲಿ ಅವರು ಅತ್ಯಂತ ನಿಷ್ಠೆಯುಳ್ಳವರಾಗಿದ್ದರು; ಕಾಂಗ್ರೆಸ್ ರಾಜಕಾರಣದಲ್ಲಿ ಅವರು ತೊಡಗಿರದಿದ್ದರೆ, ಕಾಂಗ್ರೆಸ್ಸಿಗೂ ಮಹಾತ್ಮರಿಗೂ ಆಂಧ್ರರು ಅಂಟಿಕೊಂಡಿರದಿದ್ದರೆ ಅವರು ಒರಿಸ್ಸ ಪ್ರಾಂತದ ಪ್ರತ್ಯೇಕೀಕರಣದ ಕಾಲದಲ್ಲೇ ಆಂಧ್ರಪ್ರಾಂತದ ಪ್ರತ್ಯೇಕೀಕರಣವನ್ನು ಸಾಧಿಸಿಬಿಡುತ್ತಿದ್ದರು. ಸ್ವರಾಜ್ಯಸ್ಥಾಪನೆಯಾದ ಕೂಡಲೇ ಆಂಧ್ರ ಪ್ರಾಂತ ರಚಿತವಾದೀತೆಂದು ಅವರ ನಿರೀಕ್ಷೆಯಿತ್ತು. ಸಮಿತಿಗಳ ನಿಯಮನ ಮುಂತಾದವುಗಳಿಂದ ತಡ ಮಾಡಹತ್ತಿದ್ದರಿಂದಲೂ ಮೇಲಿನ ವರ್ಗದವರು ಕೂಡ ಕಾಲು ಶತಮಾನದ ವರೆಗೆ ಒಪ್ಪಿ ನೀರುಣಿಸಿ ಬೆಳೆಸಿದ ಧ್ಯೇಯವನ್ನು ನೀರೆರೆಯದೆ ಒಣಗಿಸುವ ಪ್ರಯತ್ನ ನಡೆಸಿದುದರಿಂದಲೂ ಅವರೂ ಇತರ ಆಂಧ್ರರೂ ಬಹಳ ನಿರಾಶೆಗೊಳಗಾದರು. ಆಡಳಿತೆಯ ಕೆಲಸಗಳಿಗೆ ಭಾಷಾನುಗುಣ ಪ್ರಾಂತರಚನೆ ಅಯೋಗ್ಯವೂ ಅಸಾಧ್ಯವೂ ಎನಿಸಿದ್ದೇ ಆದರೆ ಕಾಂಗ್ರೆಸ್ಸಿನ ಕೆಲಸಗಳಿಗೂ ಆ ನಿಯಮವನ್ನು ಅನ್ವಯಿಸಬಾರದು. ದರ್ ಸಮಿತಿಯೆದುರು ವೆಂಕಟಪ್ಪಯ್ಯನವರು ಸಾಕ್ಷ್ಯ ಕೊಟ್ಟರು ಮತ್ತು ತ್ರಿಪುರುಷ ಸಮಿತಿ ವಿಧಿಸಿದ ಶರ್ತುಗಳಿಂದ ವಿಹ್ವಲರಾದರು. ಅಖಿಲ ಆಂಧ್ರ ಪರಿಷತ್ತನ್ನು ಕರೆಯಬೇಕೆಂದು ಅವರು ಬೇಡಿಕೊಂಡರು. ಅದನ್ನು ಕರೆಯಲಾಯಿತು. ಅದಕ್ಕೆ ಅಧ್ಯಕ್ಷರಾಗಿ ಆಯ್ಕೆ ಹೊಂದಿದರೂ ಅನಾರೋಗ್ಯದ ದೆಸೆಯಿಂದ ಅವರಿಗೆ ಅದನ್ನು ವಹಿಸಿಕೊಳ್ಳಲಾಗಲಿಲ್ಲ. ಅವರ ಭಾಷಣವನ್ನು ಓದಿ ಪ್ರಕಟಿಸಲಾಯಿತು. ಅವರಿಗೆ ಕೌಟುಂಬಿಕ ಸುಖ ಸರಿಯಾಗಿರಲಿಲ್ಲ. ೧೯೩೬ ರ ತನಕ ಅಂದರೆ ಮರಣಾಂತಿಕವಾಗಿ ಏಳು ವರ್ಷಗಳ ವರೆಗೆ ಅವರ ಹೆಂಡತಿ ಪಾರ್ಶ್ವವಾಯುವಿನಿಂದ ನರಳುತ್ತಿದ್ದರು. ಅವರ ಜ್ಯೇಷ್ಠ ಪುತ್ರಿಗೆ ಮಕ್ಕಳಿಲ್ಲ. ಎರಡನೆಯ ಮಗಳು ಬಾಲವಿಧವೆ. ಅವಳಿಗೆ ಅವರು ವಿದ್ಯಾಭ್ಯಾಸ ಮಾಡಿಸಿದರು. ಅವಳು ಹಿಂದು ವಿಶ್ವವಿದ್ಯಾನಿಲಯದಲ್ಲಿ ಪದವೀಧರಳಾದಳು. ಅವರ ಸಹೋದರರಲ್ಲಿ ಒಬ್ಬರೇ ಒಬ್ಬರು ಈಗ ಬದುಕಿದ್ದಾರೆ.

೧೯೪೬ ರಲ್ಲಿ ಅವರ ೮೧ ನೆಯ ವರ್ಧಂತಿಯನ್ನು ಅವರ ಗೆಳೆಯರೂ ಭಕ್ತರೂ ನೆರವೇರಿಸಿದರು. ಈ ವರ್ಷ ಫೆಬ್ರುವರಿ ೧೯ ರಲ್ಲಿ ನಾವು ಸಹಸ್ರಮಾಸಿಕೋತ್ಸವವನ್ನು ಆಚರಿಸಿದೆವು. ಅವರ ಸಾವಿಗಾಗಿ ನಾವು ಬಹಳ ಹೆದರಿದ್ದೆವು. ಆದರೆ ಪಂಚಾಂಗವನ್ನು ಕಂಡ ಬಳಿಕ ಸಮಾಧಾನ ಹೊಂದಿದೆವು.

೧೯೪೭ ರಲ್ಲಿ ಪ್ರಕಾಶಂ ಅವರ ಮಂತ್ರಿಮಂಡಲದ ವಿರುದ್ಧ ನಡೆದ ಸುಳ್ಳು ಹೊಂಚುಗಳ ಬಗ್ಗೆ ಕಾಂಗ್ರೆಸ ವರಿಷ್ಠರೊಡನೆ ಮಾತಾಡಲೆಂದು ಅವರು ದಿಲ್ಲಿಗೆ ತೆರಳಿದರು. ದಿಲ್ಲಿಯಿಂದ ಮದರಾಸಿಗೆ ಹಿಂದಿರುಗಿದ ಮೇಲೆ ರಮಣ ಮಹರ್ಷಿಯನ್ನು ಕಾಣಲು ಅವರು ತಿರುವಣ್ಣಾಮಲೆಗೆ ಹೋಗಬೇಕೆಂದಿದ್ದರು. ದಿನದ ಪ್ರಯಾಣಕ್ಕೆಂದು ನಿಶ್ಚಯಿಸಿದ ದಿನದ ಮುಂಜಾನದಲ್ಲಿ ಆಕಸ್ಮಿಕವಾಗಿ ಬಿದ್ದು ಅವರ ಸೊಂಟದ ಮೂಳೆ ಮುರಿದು ಹೋಯಿತು. ಸಾರ್ವಜನಿಕ ಚಿಕಿತ್ಸಾಲಯದಲ್ಲಿ ಅವರಿಗೆ ಚಿಕಿತ್ಸೆ ನಡೆಸಿದ್ದರಿಂದ ಹೆಚ್ಚು ಪ್ರಯೋಜನ ಕಂಡುಬರದಿರಲು ಗುಂಟೂರಿಗೆ ಅವರನ್ನು ಕರೆತಂದು ಕೆಲ ದೇಶೀಯ ಚಿಕಿತ್ಸೆ ನಡೆಸಿದ್ದರಿಂದ ಸ್ವಲ್ಪ ಗುಣ ಹೊಂದಿದರು.

—೧೧ನೇ ಪುಟಕ್ಕೆ

ಸ್ವಯಂಪ್ರೇರಿತ ಮಿತವ್ಯಯ

ಕರ ಕೊಡುವವನ ಮೇಲಿನ ಹೊರೆಯನ್ನು ಕಡಿಮೆ ಮಾಡಲೆಂದಾಗಲಿ, ಅತಿಪ್ರಸರಣವನ್ನು ತಡೆಗಟ್ಟಲೆಂದಾಗಲಿ ಆಡಳಿತೆಯ ವೆಚ್ಚವನ್ನು ಇಳಿಸಬೇಕೆನಿಸಿದರೆ ಸರಕಾರದವರು ಆಜ್ಞೆಗಳನ್ನು ಜಾರಿಗೆ ತರಬೇಕಾಗುವುದು ರೂಢಿ. ಇದು ಸಾಮಾನ್ಯವಾಗಿ ನೌಕರರಿಗೆ ಮೆಚ್ಚಿಕೆಯಾಗುವುದಿಲ್ಲ. ಆದರೆ ನೌಕರರೇ ಸ್ವೇಚ್ಛೆಯಿಂದ ಪ್ರತಿಯೊಂದು ಹೆಜ್ಜೆಯಲ್ಲಿಯೂ ಮಿತವ್ಯಯವನ್ನು ಮಾಡಲುಪಕ್ರಮಿಸಿದರೆ, ಅದರಿಂದ ತುಂಬ ಹಿತವಾದ ಪರಿಸ್ಥಿತಿಯುಂಟಾಗಿ ನಮ್ಮ ಪ್ರಜಾತಂತ್ರಾತ್ಮಕ ಸ್ವಾತಂತ್ರ್ಯವನ್ನು ಬಲಗೊಳಿಸುವುದು.

ತಾಳೆಬೆಲ್ಲದ ಗ್ರಾಮೋದ್ಯೋಗವನ್ನು ಪ್ರಚುರಗೊಳಿಸುವಲ್ಲಿ ಆಸ್ಥೆವಹಿಸಿದ ಡಾ. ರಾಜೇಂದ್ರ ಪ್ರಸಾದರು ಕೃಷಿ ಮಂತ್ರಿಯಾಗಿದ್ದಾಗ ತಾಳೆ ಬೆಲ್ಲದ ಬೆಳವಣಿಗೆಯ ವಿಭಾಗವನ್ನು ೧೯೪೭ ರಲ್ಲಿ ಸ್ಥಾಪಿಸಿದರು. ಜನವರಿ ೧೯೪೮ ರಿಂದ ಅದು ಕಾರ್ಯಪ್ರವೃತ್ತವಾಯಿತು.

ತಾಳೆ ಬೆಲ್ಲದ ವಿಭಾಗವು ಸ್ವಯಂ ಪ್ರವೃತ್ತವಾದ ಮಿತವ್ಯಯವನ್ನು ಅವಲಂಬಿಸಿ ನಡೆಯುತ್ತಿದೆ. ಸಲಹೆಗಾರನಲ್ಲದೆ, ಒಬ್ಬ ಉಪಸಲಹೆಗಾರ, ಇಬ್ಬರು ಸಹಾಯಕ ಸಲಹೆಗಾರರು ಮತ್ತು ಕೇಂದ್ರ ತಾಳೆಬೆಲ್ಲದ ತರಬೇತಿ ಶಾಲೆಯ ಪ್ರಿನ್ಸಿಪಾಲ, ಹೀಗೆ ನಾಲ್ವರು ಬೇರೆ ಅಧಿಕಾರಿಗಳು ನೇಮಿಸಲ್ಪಟ್ಟರು. ಎಲ್ಲ ಅಧಿಕಾರಿಗಳು ತೀರ ಮಿತವಾದ ಪ್ರತಿಫಲವನ್ನು ತೆಗೆದುಕೊಳ್ಳಲುದ್ಯುಕ್ತರಾದರು. ಸ್ವತಃ ಸಲಹೆಗಾರನಂತೂ ಸಂಬಳವನ್ನೇ ತೆಗೆದುಕೊಳ್ಳುವುದಿಲ್ಲ. ಸರಕಾರದ ನಿಯಮಾನುಸಾರವಾಗಿ ಈ ಅಧಿಕಾರಿಗಳಿಗೆ ಪ್ರಥಮ ವರ್ಗದ ಪ್ರವಾಸ ಭತ್ತೆ ಕೇಳುವ ಹಕ್ಕಿದೆ; ಆದರೂ ಅವರು ಸಾರ್ವಜನಿಕ ವೆಚ್ಚದಲ್ಲಿ ಉಳಿಕೆ ಮಾಡಬೇಕೆಂದು ಕೆಳವರ್ಗದ ಪ್ರವಾಸವನ್ನೆ ಮಾಡುವ ಹಟ ಹಿಡಿದರು.

ಈ ಕೆಳಗಿನ ತಖ್ತೆಯಿಂದ, ಜನವರಿ ೧೯೪೮ ರಿಂದ ಮೊದಲು ಮಾಡಿ ಜೂನ ೧೯೪೯ ರ ವರೆಗಿನ ೧೮ ತಿಂಗಳ ಅವಧಿಯಲ್ಲಿ ಈ ಸ್ವಯಂ ಪ್ರವೃತ್ತ ಮಿತವ್ಯಯದಿಂದ ವಿಭಾಗಕ್ಕೆ ೮೭,೪೫೭ ರೂಪಾಯಿ ಉಳಿತಾಯವಾಗಿದೆಯೆಂದು ಗೊತ್ತಾಗುತ್ತದೆ; ಅಂದರೆ ನೂರಕ್ಕೆ ೮೨ ರಷ್ಟು ಕಡಿಮೆಯಾದಂತಾಯಿತು.

ಅವಧಿ: ೧೯೪೮ ಜನೆವರಿಯಿಂದ ೧೯೪೯ ಜೂನ್‌ದ ವರೆಗೆ

ವಿವರ	ಸಲಬೇಕಾದ್ದು ರೂ.	ತೆಗೆದುಕೊಂಡದ್ದು ರೂ.	ಉಳಿಕೆ ರೂ.	ಶೇಕಡಾ
ಸಂಬಳ	೭೬,೪೫೦	೧೧,೯೮೫	೬೪,೪೬೫	೮೪
ಪ್ರವಾಸ ಭತ್ತೆ	೩೦,೫೯೯	೭,೬೦೭	೨೨,೯೯೨	೭೫
ಒಟ್ಟು	೧,೦೭,೦೪೯	೧೯,೫೯೨	೮೭,೪೫೭	೮೨

ಅರ್ಥಾತ್ ಈ ಐವರು ಗಜೆಟೆಡ್ ಅಧಿಕಾರಿಗಳು ಸ್ವಯಂಪ್ರೇರಣೆಯಿಂದ ತಮ್ಮ ಸಂಬಳ ಮತ್ತು ಭತ್ತೆಗಳಲ್ಲಿ ಕ್ರಮವಾಗಿ ನೂರಕ್ಕೆ ೮೪ ಮತ್ತು ೭೫ ರಷ್ಟು ಕಡಿಮೆ ಮಾಡಿಕೊಂಡಂತಾಯಿತು. ಅವರಲ್ಲಿ ಪ್ರತಿಯೊಬ್ಬನ ಸಂಬಳ ಸ್ಕೇಲು, ಅವನು ತೆಗೆದುಕೊಂಡದ್ದು ಮತ್ತು ಉಳಿಸಿದ್ದನ್ನು ಕೆಳಗಿನ ತಖ್ತೆಯಲ್ಲಿ ಕಾಣಬಹುದು:

ಅವಧಿ: ೧೯೪೮ ಜನೆವರಿಯಿಂದ ೧೯೪೯ ಜೂನ್ ವರೆಗೆ

ಅಧಿಕಾರ	ಸ್ಕೇಲು ರೂ.	ಸಲಬೇಕಾದ ಸಂಬಳ ರೂ.	ತೆಗೆದುಕೊಂಡ ಸಂಬಳ ರೂ.	ಸರಕಾರಕ್ಕೆ ಉಳಿತಾಯ ರೂ
ಸಲಹೆಗಾರ	೧,೬೦೦-೧೦೦-೧,೮೦೦	೨೯,೪೫೦	ಇಲ್ಲ	೨೯,೪೫೦
ಉಪಸಲಹೆಗಾರ	೧೦,೦೦-೫೦-೧೪೦೦	೧೮,೬೦೦	೩,೮೭೦	೧೪,೭೩೦
ಸಹಾಯಕ ಸಲಹೆಗಾರ (ಮುಂಬೈ)	೬೦೦-೫೦ ೧,೦೦೦.	೯,೮೦೦	೩,೫೫೦	೬,೨೫೦
	೨- ೧೧೫೦	೫,೪೦೦	೨,೦೪೦	೩,೩೬೦
ಡಿ. (ದಿಲ್ಲಿ)		೧೩,೨೦೦	೨,೫೨೫	೧೦,೬೭೫
ಪ್ರಿನ್ಸಿಪಾಲ	೧,೨೦೦-೫೦-೧೫೦೦			
ಒಟ್ಟು		[illegible]	[illegible]	[illegible]

[ಟಿಪ್ಪಣಿ: ಇಷ್ಟು ಶ್ಲಾಘ್ಯವಾದ ಮಿತವ್ಯಯದಿಂದ ನಡೆಯುವ ಒಂದಾದರೂ ಶಾಖೆಯನ್ನಿಟ್ಟುಕೊಂಡ ಮತ್ತು ಇರಗೊಟ್ಟ ಭಾರತ ಸರಕಾರ ಅಭಿನಂದನ [illegible]

[illegible]

೧೦-೯-೪೯

ಕೊಂಡಾವೆಂಕಟಪ್ಪಯ್ಯ

(೧೦ನೆಯ ಪುಟದಿಂದ ಮುಂದರಿಯುವುದು)

ಅವರು ಅಂದಿನ ಪರಿಗೆ ತಿಳ್ಳರು [illegible] ಆದರೆ ಪೋಲೀಸ್ [illegible] ಕಲೆಕ್ಟರ [illegible] ಸಾಲಲು ಅವರಿಗೆ [illegible] ದ್ದಿಲ್ಲ. ಆದುದರಿಂದ ಅವರು [illegible] ಕೊಂಡು ಅವುದಣ ಕೂಲು ತೆಗೆದರು. ಗ್ರಾಮೋದ್ಯಮಗಳಲ್ಲಿ ಅವರಿಗೆ ಆಸಕ್ತಿಯುತ್ತು. ಗುಂಟೂರಿನ [illegible] ಸಂಘಕ್ಕೆ ಅವರು ಅಧ್ಯಕ್ಷರಾಗಿದ್ದರು. ಅನೇಕ ವರ್ಷಗಳ ತನಕ ಅವರು [illegible] ಮತ್ತು ಮುಚ್ಚಿಗೆಗಳನ್ನು ಬಳಸುತ್ತಿದ್ದರು. ತಮ್ಮ ಜಾತಿಯ ಶಿಕ್ಷಣದಲ್ಲಿ ಆಸಕ್ತಿವಹಿಸಿದ್ದಲ್ಲದೆ, ಅವರ ಸಧರ್ಮೀಯರಾದ ಶ್ರೀ ಬಿ. ರಾಮರಾಯರು ನಿರ್ಮಿಸಿದ ಧರ್ಮ ಸಭೆಗೆ ಸದಸ್ಯರಾಗಿಯೂ ಇದ್ದರು.

ಇತ್ತೀಚೆಗೆ ಸ್ಥಾಪಿಸಿದ ಆದಿಮಜಾತಿಸೇವಕ ಸಂಘದ ಆಂಧ್ರಶಾಖೆಗೂ ಅವರು ಅಧ್ಯಕ್ಷರಾಗಿದ್ದರು.

ಗುಂಟೂರಿನಲ್ಲಿ ನಾವು ವಕೀಲವೃತ್ತಿಯಲ್ಲಿ ಕೆಲಸಮಾಡುತ್ತಿದ್ದೆವು. ನಮ್ಮ ರಾಜಕೀಯ ಸಂಬಂಧ ೩೭ ವರ್ಷಗಳ ಕೆಳಗೆ ಪ್ರಾರಂಭವಾಯಿತು. ನಮ್ಮಲ್ಲಿ ಹಿತಕರವೂ ಸುಖಕರವೂ ಆದ ಸಂಬಂಧ ಬೆಳೆದುಬಂದಿತು. ಅವರು ನನ್ನನ್ನು ತಮ್ಮ ಮಗನೆಂದು ಭಾವಿಸುತ್ತಿದ್ದರು. ನಾನು ಅವರನ್ನು ತಂದೆಯೆಂದೂ ಗುರುವೆಂದೂ ಭಯಭಕ್ತಿಯಿಂದ ಕಾಣುತ್ತಿದ್ದೆ. ಅವರು ಸಾಯುವ ಕಾಲದಲ್ಲಿ ನನ್ನನ್ನು ನೋಡಲು ಅಪೇಕ್ಷೆಪಟ್ಟರು; ಆದರೆ ದುರ್ದೈವದಿಂದ ನಾನು ಆ ಹೊತ್ತಿನಲ್ಲಿ ದೂರ ಹೋಗಿದ್ದೆ. ಅವರ ಹಾಸಿಗೆಯ ಬಳಿ ಕುಳಿತು ಮುಂದಿನ ಉಪದೇಶವನ್ನೂ ಸ್ಫೂರ್ತಿಯನ್ನೂ ಅವರಿಂದ ಪಡೆದುಕೊಳ್ಳಲಾಗಲಿಲ್ಲ.

ಕಳೆದ ವರ್ಷ ಜುಲೈಯಲ್ಲಿ ಅವರು ಪಂಡಿತ ಜವಾಹರರನ್ನು ಸಂದರ್ಶಿಸಿದರು. ಅವರಿಬ್ಬರಿಗೂ ಒಪ್ಪುವ ರೀತಿಯಲ್ಲಿ ಪಂಡಿತರು ಶ್ರೀ ವೆಂಕಟಪ್ಪಯ್ಯನವರಿಗೆ ಭಯಭಕ್ತಿಯನ್ನು ತೋರಿದರು. ಅದನ್ನು ಕಂಡವರು ಎಂದೂ ಮರೆಯುವಂತಿಲ್ಲ.

೧೯೪೮ ರಲ್ಲಿ ನಡೆದ ಮೊದಲನೆಯ ಸರ್ವೋದಯ ಸಮ್ಮೇಳನಕ್ಕೆ ಹೋಗಿ ಅವರು ತಮ್ಮ ಪರಿಣತ ಸಲಹೆಯನ್ನು ಕೊಟ್ಟುಬಂದರು.

ಅವರು ಪ್ರಭಾವಶಾಲಿಗಳಾದ ಮಾತುಗಾರರು, ಪ್ರತಿವಾದಿಭಯಂಕರರು. ಲೋಕದ ಮಹತ್ವಾಕಾಂಕ್ಷೆಗಳು ಅವರನ್ನು ಸ್ಪರ್ಶಿಸಿರಲಿಲ್ಲ. ಈ ಜನ್ಮದಲ್ಲಿ ಮಾಡಿದ ಕಾರ್ಯಗಳಿಗೆ ಅನುಗುಣವಾದ ಜನ್ಮವನ್ನು ಮುಂದೆ ಕೊಡು ಎಂಬುದೇ ಅವರ ಕಡೆಯ ಪ್ರಾರ್ಥನೆಯಾಗಿತ್ತು. ಅದು ಅವರ ಪ್ರಕೃತಿ ಗುಣವನ್ನು ನಿದರ್ಶಿಸುತ್ತದೆ. ಕಡೆಯ [illegible] ಜಾಗ್ರತ [illegible] ರಾಗದ್ದು ಅವರು ದೇವರನ್ನೂ ದೇಶವನ್ನೂ ಸೇವಿಸುತ್ತಿದ್ದರು. [illegible]

[illegible] ಯಿಂದ ಬಳಸಿಕೊಂಡರು. [illegible] ಅವರೇ ದೇಶದ ಅತಿವೃದ್ಧ ಸ್ವರಾಜ್ಯವೀರರಾಗಿದ್ದರು. ನಾವು ಅವರನ್ನು ಪ್ರೀತಿಸುತ್ತಿದ್ದೆವು. ಮಾಲವೀಯರು ಅವರನ್ನು [illegible] ಯಿಂದ ಕಾಣುತ್ತಿದ್ದರು; [illegible] ಅವರಲ್ಲಿ ಬಹಳ ವಾತ್ಸಲ್ಯವಿಟ್ಟಿದ್ದರು. [illegible] ದಲ್ಲಿ ಅವರು ಮಗುವಿನಂತೆ [illegible] ಭ್ರಷ್ಟಾಚಾರಗಳನ್ನು ಕಂಡರೆ ಮಾತ್ರ [illegible] ಹುಲಿಯಂತೆ ಭಯಂಕರರೂಪಿಗಳಾಗುತ್ತಿದ್ದರು. ತಮ್ಮ ನೆರವನ್ನು ಕೋರಿದ [illegible] ಗಳಿಗೆ ಪರಿಚಯ ಪತ್ರವನ್ನು ಕೊಡುತ್ತಿರುವುದರಲ್ಲೇ ಅವರ ಕಾಲ ಕಳೆಯುತ್ತಿತ್ತು. [illegible] ಕಾರ್ಯಕರ್ತರನ್ನು ಅವರ ಕಾರ್ಯಭಾರ [illegible] ಮಾಡಿತ್ತು. [illegible] ಬರೆಯುತ್ತಿದ್ದರು; [illegible] ಬರಹದಷ್ಟೇ ಸ್ವಚ್ಛವಾಗಿತ್ತು. [illegible] ಶರೀರ ದುರ್ಬಲವಾಗುತ್ತ ಹೋದಂತೆ [illegible] ಮಾನಸಿಕ ಮತ್ತು ನೈತಿಕ ಶಕ್ತಿಗಳು [illegible] ವಾಗುತ್ತ ನಡೆದವು.

ಅವರಿಗೆ ಎರಡೇ ಎರಡು [illegible] ಒಂದನೆಯದು ತಮ್ಮ ಆಂಧ್ರ [illegible] ನನಸಾದದ್ದನ್ನು [illegible] ಎರಡನೆಯದು ಕಾಂಗ್ರೆಸ್ ಮತ್ತು [illegible] ವರ್ಗಗಳಲ್ಲಿಯ ಭ್ರಷ್ಟಾಚಾರವನ್ನು [illegible] ಸಲು ತಮ್ಮಿಂದ ಸಾಧ್ಯವಾಗಲಿಲ್ಲ ಎಂಬುದು.

ಅವರು ಸ್ವಾತಂತ್ರ್ಯದ ದ್ವಿತೀಯ ವಾರ್ಷಿಕೋತ್ಸವದ ಕಾಲದಲ್ಲೇ [illegible] [illegible]



[illegible]

ಮುಂಬಯಿಯ ಅಪರಾಧಿ ಕುಲದವರ ಬಿಡುಗಡೆಯ ದಿನ

ಸಾಮಾಜಿಕ [illegible] ಕಾನೂನು ಮತ್ತು ಹರಿಜನರ ದೇವಸ್ಥಾನ ಪ್ರವೇಶದ ಕಾನೂನುಗಳು, ಹರಿಜನರ ಅಸ್ಪೃಶ್ಯತೆಯನ್ನು ನಿರ್ಮೂಲಗೊಳಿಸಲು ಹೊರಬಿದ್ದವು. ೧೮-೮-೧೯೪೯ ರಲ್ಲಿ ಅಪರಾಧಿ ಕುಲದವರ ಮೇಲಿದ್ದ ಕಾನೂನನ್ನು ಮುಂಬಯಿ ಸರಕಾರವು ರದ್ದು ಮಾಡಿತು. ಇದು ಕಾಯಿದೆ ಮೂಲಕ ಅಪರಾಧಿಗಳೆಂದು ಘೋಷಿತವಾದ ಕುಲದವರಿಗೆ ಅತಿ ಸಂತೋಷದ ದಿವಸವಾಯಿತು. ೧೯೪೯ ರ ಆಗಸ್ಟ ೨೮ ರ ದಿವಸ ಬಿಡುಗಡೆಯ ದಿನವಾಯಿತು. ನಾನಾ ಕುಲ, ಪಂಗಡಗಳಿಗೆ ಸೇರಿದ ೭ ಲಕ್ಷಕ್ಕೂ ಮೀರಿ [illegible]

[illegible]

ಪ್ರಾಚ್ಯ ದೇಶಗಳ ಆರೋಗ್ಯಸಮಸ್ಯೆ

[ನಾಗಪುರದ ಬಾನುಲಿಯಲ್ಲಿ ಶ್ರೀಮತಿ ಬರ್ಸ್ಟೈಲು ಮಾಡಿದ ಭಾಷಣದ ಸಾರಾಂಶ]

"ಪ್ರತಿಯೊಬ್ಬ ಮನುಷ್ಯನೂ ತಕ್ಕಮಟ್ಟಿಗೆ ಆರೋಗ್ಯಶಾಸ್ತ್ರವನ್ನು ತಿಳಿದುಕೊಂಡಿರಬೇಕು. ಅವನು ಆರೋಗ್ಯವಂತನಾಗಿರಬೇಕಾದರೆ, ಒಳ್ಳೆಯ ಗಾಳಿಯನ್ನು ಸೇವಿಸಬೇಕು; ಬೆಳಕಿರಬೇಕು; ವ್ಯಾಯಾಮವಿರಬೇಕು; ತಣ್ಣನೆ ಇಲ್ಲವೆ ಬೆಚ್ಚನೆ ನೀರನ್ನು ಉಪಯೋಗಿಸುವುದು; ಹಿತವಾದ ಆಹಾರವನ್ನುಪಯೋಗಿಸುವುದು; [illegible] ಹುದು ಮತ್ತು ಮಾದಕ ಪದಾರ್ಥಗಳೆಲ್ಲವನ್ನೂ ಬಿಡುವುದು. ಎಲ್ಲಕ್ಕೂ ಮಿಗಿಲಾಗಿ ದೇವರಲ್ಲಿ ಅಗಾಧವಾದ ನಂಬಿಕೆ ಇಷ್ಟೆಲ್ಲವೂ ಇರಬೇಕು ಮಾನವನು ದೃಢಕಾಯನಾಗಿರಬೇಕಾದರೆ.

"ಆಸ್ಪತ್ರೆಗಳಲ್ಲಿ ವೈದ್ಯರಿಗಿಂತ ದಾದಿಯರು ಹೆಚ್ಚಾಗಿ ಬೇಕಾಗಿದೆ. ರೋಗಿಗಳನ್ನು ನೋಡಿಕೊಳ್ಳುವುದಕ್ಕೆ ದಾದಿಯರೇ ಹೆಚ್ಚು ಬೇಕು. ನಿಮ್ಮಲ್ಲಿ ಕೆಲವು ಆಸ್ಪತ್ರೆಗಳು, ಕೆಲವು ದಾದಿಯರಿಗೆ ವೈದ್ಯಕೀಯವನ್ನೂ ದಾದಿಯರ ಕೆಲಸವನ್ನೂ ಹೇಳಿ ಕೊಡುವ ಕಾರ್ಯದಲ್ಲಿವೆ. ಇದು ಸ್ತೋತ್ರಾರ್ಹವಾದ ವಿಷಯ; ಆದರೆ ಸಾಕಷ್ಟು ಜನ ದಾದಿಯರನ್ನು ತರಬೇತು ಮಾಡಿಕೊಡುತ್ತಿಲ್ಲ.

ತಾಯಿಯಂದಿರ ಅಜ್ಞಾನ

[illegible]

ಚಿಕ್ಕಮಕ್ಕಳು ವ್ಯಾಧಿಗೆ ಬಲು ಬೇಗ ಬಲಿಯಾಗುತ್ತಾರೆ. ಇದನ್ನು ಬಹು ಜಾಗರೂಕತೆಯಿಂದ ತಡೆಯಬೇಕು. ಚಿಕ್ಕ ವಯಸ್ಸಿನಲ್ಲೇ ದ್ಯುತಿ ಹಾಕಿಸಬೇಕು. ಡಿಫ್ತೀರಿಯ ಮತ್ತು ಹಾದಿಕೆಮ್ಮುಗಳಿಂದ ಪೀಡಿತರಾಗಿ ಅಸಂಖ್ಯಾತ ಮಕ್ಕಳು ಸಾಯುತ್ತಿದ್ದಾರೆ. ಈಗ ಇವುಗಳಿಗೆ ಕೆಲವು ಔಷಧಿಗಳು ಸಿಗುತ್ತಿವೆ. ಸ್ವಲ್ಪ ಅನುಕೂಲವಾಗಿದೆ. ಆದ್ದರಿಂದ ಜನಗಳು ವಿದ್ಯಾವಂತರಾಗಿ ಇಂತಹ ಭೀಕರ ಪೀಡೆಗಳನ್ನು ತಡೆಗಟ್ಟಲು ಶ್ರಮಿಸಬೇಕಾಗಿದೆ. ನಾನು ಇನ್ನೊಂದು ವಿಚಿತ್ರ ರೂಢಿಯನ್ನೂ ಕಂಡೆ. ಮಕ್ಕಳಿಗೆ, ತಾಯಿಯರು ಮೊಲೆ ಹಾಲನ್ನು ಕುಡಿಸುವವರೆಗೂ ಒಂದು ಕಾಲದ [illegible] ಅವರಿಗೆ ಇಲ್ಲದಿರುವುದು ಕೋಲಾಹಲಕಾರಿಯಾದ ವಿಷಯವಾಗಿದೆ.

ತಾಯಿಯರು ತಮ್ಮ ಮಕ್ಕಳಿಗೆ, ೯ ತಿಂಗಳ ವರೆಗೂ ಮೊಲೆ ಹಾಲನ್ನು ಕುಡಿಸಬಹುದು. ಮಗು ಹುಟ್ಟಿದ ಆರು ವಾರದ ಮೇಲೆ ಮಗುವಿಗೆ ಸ್ವಲ್ಪ ಸ್ವಲ್ಪ ಕಿತ್ತಳೆ ಹಣ್ಣಿನ ರಸವನ್ನೂ ಟಿಮೆಟೋ ರಸವನ್ನೂ ಹಾಕುತ್ತ [illegible] ಬೇಕು. ಅದಕ್ಕೂ ಕೆಲವು ವಾರಗಳ ಅನಂತರ ಚೆನ್ನಾಗಿ ಬೇಯಿಸಿದ ತರಕಾರಿಯನ್ನೂ ಕೆಂಪು ಮೂಲಂಗಿಯನ್ನೂ ಕೊಡಬೇಕು. ಖಾರದ ಪದಾರ್ಥವನ್ನು ಮತ್ತು ಕಾಫಿ, ಚಹಗಳನ್ನು ಮಕ್ಕಳಿಗೆ ಕೊಡಬಾರದು. ಹಾಗೆ ಕೊಟ್ಟಲ್ಲಿ ಮಗುವಿನ ಬೆಳವಣಿಗೆಯನ್ನು ಹಾಳು ಮಾಡಿದಂತಾಗುತ್ತದೆ.

ಉಚಿತ ರೀತಿಯ ಬಳಕೆ

ಅನೇಕ ಜನರು, ತಮಗೆ ಒಳ್ಳೆಯ ಆಹಾರ [illegible] ಉಪಯೋಗಿಸುತ್ತಾರೆ. ಅವರ [illegible] ಅನಗಾಗ "ಬೆರಿಬೆರಿ" ಎಂಬ ರೋಗಕ್ಕೆ ತುತ್ತಾಗುವುದು. [illegible]

"ಮಾಂಸಾಹಾರವೇನೋ ಪರಿಪುಷ್ಟಿಯಾದ ಆಹಾರ. ಆದರೆ ಅತಿ ಬಡವರಾದ ಜನರಿಗೆ ಇದು ಹೇಗೆ ನಿತ್ಯವೂ ಸಿಗಬೇಕು? ಅವರ ಆರ್ಥಿಕ ಸ್ಥಿತಿ ಬಹಳ ಕಂಗೆಟ್ಟಿದ್ದಾಗಿದೆ. ಇದರ ಬದಲು ಪುಷ್ಟಿಯ ಆಹಾರವೆಂದರೆ, ಹಣ್ಣು ಹಂಪಲು, ಕೆಂಪು ಮೂಲಂಗಿ, ತರಕಾರಿಗಳು ಮತ್ತು ಕಡಲೆಯ ಕಾಯಿ ಮೊದಲಾದ ದ್ವಿದಳ ಧಾನ್ಯಗಳು.

"ಜನಗಳು ವಿಶ್ರಾಂತಿಯ ಮಹತ್ವವನ್ನರಿಯಬೇಕು; ಅರಿತು ಉಪಯೋಗಿಸಬೇಕು. ಕೆಲವು ತರಕಾರಿಗಳನ್ನು ಯಾವ ರೀತಿಯಲ್ಲಿ ಬೇಯಿಸಬೇಕು, ಮತ್ತೆ ಕೆಲವನ್ನು ಮತ್ತಾವ ರೀತಿಯಲ್ಲಿ ಅಡಿಗೆ ಮಾಡಬೇಕೆಂಬುದನ್ನೂ ಮುಖ್ಯವಾಗಿ ತಿಳಿಯಬೇಕು.

ಕೊನೆಯದಾಗಿ ಆಕೆ ಕೆಲವು ಮುಖ್ಯಾಂಶಗಳನ್ನು ಸೂಚಿಸಿದಳು; ದೇಹಾರೋಗ್ಯವಿರಬೇಕಾದರೆ:

೧ ಸಮತೂಕ ಆಹಾರ: ಹಣ್ಣು, ತರಕಾರಿ, ಕೆಂಪು ಮೂಲಂಗಿ, ದ್ವಿದಳ ಧಾನ್ಯ, ಹಾಲು ಮತ್ತು ಮೊಟ್ಟೆ, ಸೇರಿರಬೇಕು.

೨ ತಕ್ಕಷ್ಟು ನಿದ್ದೆ ಮತ್ತು ವಿಶ್ರಾಂತಿಯಿರಬೇಕು.

೩ ಶುದ್ಧವಾದ ಗಾಳಿ ಮತ್ತು ಬೆಳಕು.

೪ ದೇಹವನ್ನು ಚೆನ್ನಾಗಿಟ್ಟಿರಬೇಕಾದರೆ ವ್ಯಾಯಾಮ ಅವಶ್ಯಕ.

೫ ವಾಸಿಸುವ ಸುತ್ತುಮುತ್ತು ಚೆನ್ನಾಗಿರಬೇಕು. ನೈರ್ಮಲ್ಯವಿರಬೇಕು.

೬ ಪರಿಶುದ್ಧವಾದ ಕುಡಿಯುವ ನೀರಿನ ಪೂರೈಕೆ ಉತ್ತಮವಾಗಿರಬೇಕು.

೭ ಸಾಂಕ್ರಾಮಿಕ ಜಾಡ್ಯದ ಹರಡುವಿಕೆಯನ್ನು ತಡೆಗಟ್ಟಬೇಕು.

೮ ಮಾನಸಿಕ ಬೆಳವಣಿಗೆಯಾಗಬೇಕು. ಇದಾಗಬೇಕಾದರೆ ಪರಾತ್ಪರ ಶಕ್ತಿಯಲ್ಲಿ ನಂಬಿಕೆ ಮೂಡಬೇಕು ಪ್ರತಿಯೊಬ್ಬ ವ್ಯಕ್ತಿಯಲ್ಲೂ.

ಜೀವನ ಮತ್ತು ಕಾಯಿದೆಯ ಸುಧಾರಣೆ

(ನೆಯ ಪುಟದಿಂದ ಮುಂದರಿದುದು)

(ಹೊಣೆ ಹೊತ್ತುಕೊಳ್ಳಲು ಮುಂಬರದೆ) ಹೋರಾಡುವುದಕ್ಕಿಂತ ಇಂದಿನ ಸ್ತ್ರೀ ಅಹಿಂಸೆ ಸತ್ಯ, ಜ್ಞಾನ, ಇವುಗಳನ್ನು ಬೆಳೆಸಿಕೊಂಡು ಸಮಾಜದ ಕುಟುಂಬದ ಸರ್ವಸ್ತ್ರೀಪುರುಷರೂ ಅದನ್ನು ಬಿತ್ತಿ ಬೆಳೆಸಲು ಶಕ್ತರಾಗ.ವಂತೆ ಶಿಕ್ಷಣ ಪಡೆಯುವ ಸವಲತ್ತಿಗಾಗಿ ದುಡಿಯುವುದು ಕುಟುಂಬದ, ಸಮಾಜದ, ರಾಷ್ಟ್ರದ ಮತ್ತು ಆ ಮೂಲಕ ಇಡಿಜಗತ್ತಿನ ಹಿತವನ್ನು ಸಾಧಿಸಲು ಸಹಕಾರಿಯಾಗುತ್ತದೆ.

ಪಾಶ್ಚಾತ್ಯ ಸ್ತ್ರೀವಾದಿಗಳು ಬುದ್ಧಿವರಿಯದೆ ಒಣ ತರ್ಕಕ್ಕೆ ಬಲಿಯಾಗಿ ದಿನೇ ದಿನೇ ಸಮಾಜದ, ಪೀಳಿಗೆಯ ನೀತಿಯ ನೆಲಗಟ್ಟಿಗೆ ಶತ್ರುವಿಘ್ನಗಳಾಗಿ ಸಮಸ್ಯಾರೋಗದಿಂದ ನರಳುವ Neurotics ಅಥವಾ ಭ್ರಮಿಷ್ಟ ಸ್ತ್ರೀಯರು ಸಮಾಜದಲ್ಲಿಹೆಚ್ಚಾಗುವಂತೆಪ್ರಯತ್ನಿಸಿಅಲ್ಲಿಯ ಸಮಾಜದ ಹಿರಿಯರ ತಲೆಯಲ್ಲಿ ಗೊಂದಲವನ್ನೆಬ್ಬಿಸಿ ಬಿಟ್ಟಿದ್ದಾರೆ. ಇದನ್ನು ಕಂಡೂ ಕಂಡೂ ಭಾರತೀಯರು ಅಲ್ಲಿ ಸಲ್ಲುವುದಿಲ್ಲವೂ ಇಲ್ಲಿಸಲ್ಲಬೇಕು, ಎಂಬ ಮೂರ್ಖವಾದವನ್ನು ಹಿಡಿಯುವುದು ಜ್ಞಾನದ ತವರಾದ ಭಾರತಕ್ಕೆ ಅವಮಾನಾಸ್ಪದವಾದುದು ಧರ್ಮಶ್ರದ್ಧೆಯಂತೆ ವರ್ತಿಸುವ ಸಮಾಜಕ್ಕಿಂತ ಶಾಸನ ಗೌರವದಿಂದ ವರ್ತಿಸುವ ಸಮಾಜದ ನೀತಿ ಶಿಥಿಲವೂ ದುರ್ಬಲವೂ ಮೂಲತಃಅಪ್ರಾಮಾಣಿಕತನವುಳ್ಳದ್ದೂ ಆಗಿರುವುದೆಂಬುದನ್ನು ಇತಿಹಾಸದ ಅನುಭವದಿಂದ ಕಲಿತು ಕೊಳ್ಳಲು ಯತ್ನಿಸದೇ "ಸುಧಾರಣೆ"ಗೆ ಮನಸೋಲುವುದು ಆತ್ಮಘಾತಕವಲ್ಲವೆ?

... ಹಿರಿಯಕ್ಕ

● ಬಾಯಿ ಜದ್ದಾನಬಾಯಿ ಎಂಬ ಪ್ರಸಿದ್ಧ ಸಂಗೀತಗಾರ್ತಿ ಹೃದಯ ಸ್ತಂಭನದಿಂದ ಸತ್ತು ಹೋದಳೆಂದು ತಿಳಿದು ಬಂದಿದೆ. ಅವಳು ಚಲಚ್ಚಿತ್ರ ತಾರೆ ನಾರ್ಗೀಸಳ ತಾಯಿ. ಸಾಯುವಾಗ ೫೩ ವರ್ಷ ವಯಸ್ಸಾಗಿತ್ತು.

ವ್ಯಾಪಾರ ಪ್ರಪಂಚ

ಮುಂಬಯಿ ಶೇರಪೇಟೆ

ರೂಪಾಯಿಯ ಬೆಲೆ ಇಳಿದದ್ದರಿಂದ ಸ್ಟೈಲ ಮತ್ತು ಚಿನ್ನ ಬೆಳ್ಳಿ ಪೇಟೆ ಬಂದಾಗಿದೆ.

ಅರಳೆ

ಫೆಬ್ರವರಿ	೬೧೮ ೮.೦
ಮಾರ್ಚ	೬೭೩ ೮.೨

ಶಿವಮೊಗ್ಗೆ ಅಡಿಕೆ ಪೇಟೆ

ತಾ ೨೧

ಶಿವಮೊಗ್ಗೆ ಪೇಟೆಯಲ್ಲಿ ಅಡಿಕೆ ಧಾರಣೆ ಮಣ ಒಂದರ ಈ ರೀತಿ ಇದೆ:—

ದೇಶಾವರ ನಂ. ೧	೪೨-೪೪
,, ೨	೩೧ ೪೨
ನಂ. ೩	೨೮-೪೦
ತೊರಸಾಲು	೨೭-೪೦
ರಾಜಾ ಅಲವು	೨೮-೩೩
ಚಿಟ್ಟವಂತ	೧೯-೨೨
ಚಿಟ್ಟ	೧೭-೧೯

ಬೇಡಿಕೆ ಚೆನ್ನಾಗಿದೆ.

ಹುಬ್ಬಳ್ಳಿ

(ಅ. ಪ್ರೊ. ಮಾರ್ಕೆಟ ಕಮೀಟಿ ಹುಬ್ಬಳ್ಳಿ)

ತಾ. ೯

ಜಿನ್ ಅರಳೆ (ಕನಿಷ್ಠ)	೨೮೦
ಡೆಬಲ್‌ರೋಲ ಅರಳೆ ಮಧ್ಯಮ	೩೦೫-೩೦೮

ಸಾಂಗಲಿ ಪೇಟೆ

ತಾ. ೨೦

ಅರಿಸಿಣ(ಹೇರು)	೧೧೦-೧೧೭
ಮೆಣಸಿನಕಾಯಿ(ಹೇರು)	೧೫೦-೧೯೦
ಶೇಂಗಾ(ಖಂಡಿ)	೧೬೫-೦-೦
ಬೆಲ್ಲ(ಹೇರು)	೮೦-೮೬

ಬೇರೆ ಪೇಟೆಗಳಲ್ಲಿ ವ್ಯಾಪಾರವಿಲ್ಲ.

ಫಿನ್ನಿಶ್ ಭಾಷೆಯಲ್ಲಿ ಸಂಭಾಷಣೆ

(೧) "ಕೊ ಕೂ ಕೊ ಕೂ ನ್ ಕೊ ಕೋ ಕೊ ಕ್ಕೋ!"
"ಕೊ ಕೋ ಕೊ ಕೋ ಕೋ?"
"ಕೊ ಕೋ ಕೊ ಕೋ!"
ಅರ್ಥ: "ಸೇರಿರೆಲ್ಲರೊಂದು ಗೂಡಿ ಇಡೀ ಹೋಳಿಗೆ!"
"ಇಡೀ ಹೋಳಿಗೆ?"
"ಇಡೀ ಹೋಳಿಗೆ!"

(೨) "ಅರ್ಬೇಟರ್ ಡೈ ಫೋರ್ ಐನೆಮ್ ಮಾರ್ಮೆಲೇಡನ್ ಷೋಕೊ ಲೇಡನ್ ಲೇಡನ್ ಲೇಡನ್ ಷಟ್ ಲೇಡನ್ ಲೇಡನ್, ಲೇಡನ್ ಲೇಡನ್ ಮೇಡನ್ ಇನ್ ದೆನ್ ಲೇಡನ್- ಚಾಕ್ಲೇಟು ಫಲಪಾಕಗಳ ಅಂಗಡಿಯ ಕಿಟಕಿಯೆದುರು ಕಪಾಟುಗಳಲ್ಲಿ ಅವನ್ನು ತುಂಬುತ್ತಿರುವ ಕೂಲಿಕಾರರು ಕೆಲಸದ ಹುಡುಗಿಯರನ್ನು ಉಗ್ರಾಣಕ್ಕೆ ಕರೆಯುತ್ತಾರೆ."

ಭಾರತದ ಪ್ರಸಿದ್ಧ ಇತಿಹಾಸಕಾರರಾದ ಸರ್ ಯದುನಾಥ ಸರಕಾರರ ಮಗಳಾದ ಕುಮಾರಿ ರಮಾ ಸರಕಾರ್ ಎಂಬವಳು ಲಂಡನ್ನಿನಲ್ಲಿ ಓದುತ್ತಿದ್ದಳು. ಈಗ ಒಮ್ಮಿಂದೊಮ್ಮೆ ವಿಷ ತೆಗೆದುಕೊಂಡು ಅವಳು ತನ್ನ ಹಾಸಿಗೆಯ ಮೇಲೆ ಸತ್ತು ಬಿದ್ದಿದ್ದಳೆಂದೂ ಅದರ ವಿಚಾರಣೆಯಾಗಿ ತಲೆಕೆಟ್ಟದ್ದರಿಂದ ಆತ್ಮಹತ್ಯೆ ಮಾಡಿಕೊಂಡಳೆಂದು ತೀರ್ಮಾನಿಸಲ್ಪಟ್ಟು ಅವಳ ಹೆಣವನ್ನು [illegible]ಯಿತೆಂದೂ ಸುದ್ದಿ ಬಂದಿದೆ.

● ಜಪಾನವು ತನ್ನ ಯೆನ್ ನಾಣ್ಯದ ಬೆಲೆ ಇಳಿಸುವದಕ್ಕೆ ಜನರಲ್ ಮೆಕ್ಆರ್ಥರ ಅಪ್ಪಣೆ ಪ್ರಕಾರ ಯೆನ್‌ದ ಹೊಸ ಬೆಲೆ ೩೬೦ ಯೆನ್‌ಗಳಿಗೆ ಒಂದು ಡಾಲರ ಮತ್ತು ಒಂದು ಪೌಂಡಿಗೆ ೧೦೦೮ ಯೆನ್ನು ಈ ಪ್ರಕಾರವಾಗಿರುತ್ತದೆ.

ಅಜ್ಞಾನದ ನಾಶಕ್ಕೆ ಚಲಚ್ಚಿತ್ರ ಪ್ರದರ್ಶನವೊಂದು ಸುಲಭೋಪಾಯ

"ಲೇಖನಿಯು ಕತ್ತಿಗಿಂತ ಮೊನೆಯಾದದ್ದು" ಎಂಬುದೊಂದು ಗಾದೆಯುಂಟು. ಆದರೆ ಇಪ್ಪತ್ತನೆಯ ಶತಮಾನದಲ್ಲಿ ಈ ಗಾದೆಯನ್ನು ಈ ರೀತಿ ಬದಲಾಯಿಸಿ ಹೇಳಬೇಕಾಗುತ್ತದೆ. "ಚಲಚ್ಚಿತ್ರವು ಲೇಖನಿಗಿಂತ ಪರಿಣಾಮಕಾರಿಯಾದದ್ದು" ಎಂದು.

ಇಂದಿನ ಅಣುಯುಗದಲ್ಲಿ (Atomic Age) ಕತ್ತಿಯ ಶಕ್ತಿಯು ತೃಣಸಮಾನವಾದದ್ದು. ಆದರೆ ಚಲಚ್ಚಿತ್ರವು ಅಣುಶಕ್ತಿಯನ್ನು ಎದುರಿಸಿ ನಿಲ್ಲಬಲ್ಲ ಶಕ್ತಿಯನ್ನು ಹೊಂದಿದೆ. ಚಲಚ್ಚಿತ್ರವು ನಾಡಿನ ಜನರೆಲ್ಲರ ಮನಸ್ಸನ್ನು ಸೆರೆಹಿಡಿದಿರುವುದೇ ಇದರ ಮಹಾಶಕ್ತಿಗೆ ಕುರುಹು ಸಾಕ್ಷಿ.

ಚಲಚ್ಚಿತ್ರ ಇರುವುದು ಬರಿಯ ಕಾಲಕಳೆಯುವುದಕ್ಕೋಸ್ಕರವಲ್ಲ ಜನತೆಯಲ್ಲಿ ವಿದ್ಯಾಪ್ರಚಾರ ಮಾಡುವುದಕ್ಕೋಸ್ಕರ. ಬರೆದಂಥವುಗಳನ್ನು ಓದುವುದರಿಂದ ತಲೆಗೆ ವ್ಯಾಯಾಮವಾದಂತಾಗುತ್ತದೆ ಆದರೆ ಚಿತ್ರ ಪ್ರದರ್ಶನವನ್ನು ನೋಡುವುದರಿಂದ ಹೃದಯಕ್ಕೆ ಆನಂದವಾಗುತ್ತದೆ.

ಜಗತ್ತಿನಲ್ಲಿ ಚಲಚ್ಚಿತ್ರಕ್ಕೆ ಇರುವ ಸ್ಥಾನ ಮಿಗಿಲಾದದ್ದು. ಪಾಶ್ಚಾತ್ಯ ದೇಶದಲ್ಲಿ ಇವುಗಳ ಮೂಲಕ ವಿದ್ಯಾಪ್ರಚಾರವು ಬಹಳ ರಭಸದಿಂದ ಮುಂದುವರಿಯುತ್ತಿದೆ. ಇಂತಹ ಕೆಲಸವು, ನಮ್ಮ ದೇಶದಲ್ಲೂ ಆಗಬೇಕಾಗಿದೆ. ಇದರ ಅಗತ್ಯವನ್ನು ತಿಳಿದು ನಮ್ಮ ಸರ್ಕಾರದವರು ಆ ಬಗ್ಗೆ ಹೆಚ್ಚು ಗಮನವೀಯುತ್ತಿದ್ದಾರೆ. ಸುಮಾರು ಶೇ. ೯೦ರಷ್ಟು ಅನಕ್ಷರಜ್ಞರಿರುವ ಈ ದೇಶದಲ್ಲಿ ಇಂತಹ ಕೆಲಸಕ್ಕೆ ಹೆಚ್ಚು ಗಮನಕೊಡಬೇಕಾದದ್ದು ಮುಖ್ಯವಲ್ಲವೇ?

ಚಲಚ್ಚಿತ್ರಗಳ ಮೂಲಕ ವಿದ್ಯಾಪ್ರಚಾರ ಮಾಡುವ ರೂಢಿಯನ್ನು ಭಾರತ ಸರ್ಕಾರವೂ ಕೈಗೊಂಡು, ಈಗಾಗಲೇ ಭಾರತದ ಎಷ್ಟೋ ಚಿತ್ರಮಂದಿರಗಳಲ್ಲಿ ಹಲವಾರು ತರದ ವೃತ್ತಾಂತ ಚಿತ್ರಗಳನ್ನು (News Reels) ಪ್ರದರ್ಶಿಸುವಂತೆ ಏರ್ಪಾಟು ಮಾಡಿದೆ.

ಚಲಚ್ಚಿತ್ರಗಳ ಮೂಲಕ ವಿದ್ಯಾಪ್ರಚಾರ ಮಾಡುವ ಮಾರ್ಗವನ್ನು, ಭಾರತವು ಹೋದ ವರುಷದಿಂದ ಹಿಡಿಯಿತು.

ಭಾರತದ ಸಂಸ್ಕೃತಿ, ಕಲಾವೈಭವ, ಆರ್ಥಿಕಸ್ಥಿತಿ, ರಾಜಕೀಯ, ಸೈನ್ಯ, ವಾಸ್ತುಶಿಲ್ಪ, ಸಾಹಿತ್ಯ, ಅಂತಾರಾಷ್ಟ್ರೀಯ ಸಂಬಂಧ, ಗ್ರಾಮಕೈಗಾರಿಕೆ, ಔದ್ಯೋಗಿಕ ಕೇಂದ್ರಗಳ ವಿಷಯವನ್ನೆಲ್ಲ ರಸವತ್ತಾಗಿ ಚಿತ್ರರೂಪದಲ್ಲಿ ತೆಗೆದು ಸರ್ಕಾರವು, ಪ್ರಾಥಮಿಕ ಶಾಲೆಗಳಲ್ಲೂ, ವಿಶ್ವವಿದ್ಯಾಲಯಗಳಲ್ಲೂ, ವಿಶೇಷ ಸಭೆಗಳಲ್ಲೂ, ದೊಡ್ಡ ದೊಡ್ಡ ಕಾಲಕಳೆಯುವ ಸಂಘಗಳಲ್ಲೂ, ಈ ವಿಶೇಷ ಚಲಚ್ಚಿತ್ರಗಳನ್ನು (News Reels and Documentaries) ಪ್ರದರ್ಶಿಸುವಂತೆ ಕಟ್ಟಪ್ಪಣೆಮಾಡಿದೆ. ಅದರಂತೆ ಈಗ ನಡೆದು ಬರುತ್ತಿದೆ.

ಮೇಲೆ ಹೇಳಿದ ವಿವಿಧ ವಿಷಯಗಳೊಡನೆ ಪಂ. ನೆಹರು ಅವರು ಹಿಂದೆ ಲಂಡನ್ ನಗರಕ್ಕೆ ಹೊರಟದ್ದು ಪ್ರವಾಸದ ಚಿತ್ರವನ್ನೂ ಕೊನ್ನೆಯ ಅವರ ಕಾಶ್ಮೀರ ಮತ್ತು ಟಿಬೆಟ್ ಪ್ರವಾಸವನ್ನೂ ಮತ್ತು ಅವರು ಹೋಗಲಿರುವ ಅಮೇರಿಕಾ ಪ್ರವಾಸದ ವಿಷಯವನ್ನೂ ನಮ್ಮೆಲ್ಲರಿಗೆ ತೋರಿಸಲು ಆಗಲೇ ಏರ್ಪಾಟಾಗಿ ಅದಕ್ಕೆ ತಕ್ಕ ಸಲಕರಣೆಗಳೆಲ್ಲಾ ಸಿದ್ಧವಾಗುತ್ತಿವೆ ಎಂಬುದನ್ನು ತಿಳಿಸಲು ಸಂತೋಷ ಪಡುತ್ತೇವೆ.

ಭಾರತದ ವಿಷಯವನ್ನು ಪಾಶ್ಚಾತ್ಯರಿಗೆ ಸರಿಯಾದ ರೀತಿಯಲ್ಲಿ ತಿಳಿಸಲು, ಕೆಲವು ಮುಖ್ಯ ಚಿತ್ರಗಳನ್ನು ತೆಗೆದು ಪಾಶ್ಚಾತ್ಯ ದೇಶಗಳಿಗೆ ಪ್ರದರ್ಶನಕ್ಕಾಗಿ ಕಳುಹಿಸಿಕೊಟ್ಟಿದ್ದಾರೆ.

ಹೀಗೆ ತಯಾರಾಗಿರುವ ಚಿತ್ರಗಳಲ್ಲಿ ಅತ್ಯುತ್ತಮವೂ, ಅತಿ ಸುಂದರವೂ ಆದ ಭಾರತೀಯ ದೇವಾಲಯಗಳ ಚಿತ್ರವೂ (Saga in Ston.) ಗ್ರಾಮಕೈಗಾರಿಕೆಯ ಚಿತ್ರವೂ (the Handicrafts of S. India) ಭಾರತೀಯ ಸಂಸ್ಕೃತಿ ಮತ್ತು [illegible], ಇವುಗಳಿಗೆ ಕೇಂದ್ರವಾಗಿರುವ, ಶಾಂತಿನಿಕೇತನದ "ಶಾಂತಿನಿಕೇತನ್" ಎಂಬ ಚಿತ್ರವೂ (The Shantiniketan) ಹಿಮಾಲಯದ ಚೆಲುವನ್ನು ತೋರಿಸುವ ಚಿತ್ರವೂ (Vigil in Snow) ಹೊಸದಾಗಿ ವರ್ಣರಂಜಿತವಾದ "ಕಾಶ್ಮೀರದ ಕಣಿವೆ" ಎಂಬ ಚಿತ್ರವೂ ಮತ್ತು ತೆಂಗಿನ ಮರಗಳು ಅಂದವಾಗಿ, ಹುಲುಸಾಗಿ ಬೆಳೆದು ನಿಂತು, ನೋಡಿದವರ ಮನಸ್ಸನ್ನು ಸೂರೆಗೊಳಿಸಿ, ತಲ್ಲೀನರನ್ನಾಗಿ ಮಾಡಿಸುವಂತಹ ಚಿತ್ರವೂ ಬಹು ಮನೋಜ್ಞವಾಗಿವೆ, ಹೊಗಳತಕ್ಕದ್ದೂ ಆಗಿವೆ.



ಸುರಯ್ಯ
"ಜಗತ್" ಚಿತ್ರಾಲಯದ "ಶೈರ್" ಚಿತ್ರದಲ್ಲಿ. ಕ್ರೋಧಭಂಗಿಯಲ್ಲಿರುವುದು.

ಕಡೆಯಲ್ಲಿ ಹೇಳಿದ ತೆಂಗಿನಮರದ ಚಿತ್ರವನ್ನು (The Trees of Wealth) ಅಂತಾರಾಷ್ಟ್ರೀಯ ಚಲಚ್ಚಿತ್ರಗಳ ವಾರ್ಷಿಕ ಹಬ್ಬದಲ್ಲಿ ಪ್ರದರ್ಶಿಸಲು ಪ್ರೇಗ್‌ಗೆ ಕಳುಹಿಸಿಕೊಟ್ಟಿದ್ದರು. ಇದನ್ನು ಸರ್ವರೂ ಹೊಗಳಿದರು.

ಚಲಚ್ಚಿತ್ರ ಸಂಸ್ಥೆಯು ಇದು ವರೆಗೂ ೧೮ ಚಿತ್ರಗಳನ್ನು ನಿರ್ಮಿಸಿದೆ. ಇನ್ನೂ ೧೮ ಚಿತ್ರಗಳನ್ನು ತಯಾರು ಮಾಡಲು ಮನಸ್ಸು ಮಾಡಿದೆ. ಜಾಗ್ರತೆಯಾಗಿ ಹೀಗೇ ಮೇಲಿಂದ ಮೇಲೆ ಪ್ರಚಾರಕ ಚಿತ್ರಗಳು ಬಂದು, ಜನತೆಯಲ್ಲಿ ಹೊಸ ಬೆಳಕನ್ನು ಬೀರಿ, ಸಂಸ್ಥೆಯು, ನಾಡಿನ ಏಳ್ಗೆಗೆ ಹೆಚ್ಚು ಹೆಚ್ಚಾಗಿ ದುಡಿಯಲೆಂದು ಪ್ರಾರ್ಥಿಸೋಣ.

ಚಲಚ್ಚಿತ್ರಗಳ ಮೂಲಕ ದೇಶದಲ್ಲಿರುವ ಅಜ್ಞಾನದ ಕತ್ತಲೆಯನ್ನು ಹರಿಸಿ ಬೆಳಗಬಹುದು, ಎಂಬುದು ಸತ್ಯವಾದ ವಿಷಯ. ಆದ್ದರಿಂದ ಚಲಚ್ಚಿತ್ರವು ಲೇಖನಿಗಿಂತ ಘನವಾದದ್ದು.

(ಕೆ. ಸಿ. ಅರುಣರ ಲೇಖನದ ಸಾರಾಂಶ)

"ರಾತ್ ಕಿ ರಾಣಿ"

ವಂಶದ ಅಂತಸ್ತು, ಸಂಪ್ರದಾಯ, ಪ್ರಾಚೀನಕಾಲದಿಂದ ಬಂದಿರುವ ಕೆಲವು ಮೂಢ ನಂಬಿಕೆ ಮತ್ತು ಪದ್ಧತಿ ಇವುಗಳು ಮದುವೆಯ ವಿಷಯದಲ್ಲಿ ಅಡ್ಡಬರಬಾರದು. ಗಂಡೇ ಆಗಲಿ, ಹೆಣ್ಣೇ ಆಗಲಿ, ಅವರವರ ಬಾಳಿನ ಗೆಳೆಯ, ಗೆಳತಿಯರನ್ನು, ಮೆಚ್ಚಿ ಸಂತೋಷದಿಂದ ವಿವಾಹವಾಗಲು ಸ್ವಾತಂತ್ರ್ಯವಿರಬೇಕು. ಅಡ್ಡಿಗಳು ಬಂದು, ಜೀವನವನ್ನು ವಿರಸಗೊಳಿಸಬಾರದು. ಪ್ರತಿಯೊಂದು ವ್ಯಕ್ತಿಗೂ [illegible] ಸ್ವಾತಂತ್ರ್ಯವಿರಬೇಕು. ಇಲ್ಲದಿದ್ದರೆ ಅನರ್ಥವಾಗುವುದೆಂಬುದು ಅನುಭವದ ವಿಷಯವಾಗಿದೆ.

ಈ ವಿಷಯವನ್ನೇ "ರಾತ್ ಕಿ ರಾಣಿ" ಚಿತ್ರವು ಪ್ರತಿಪಾದಿಸುತ್ತದೆ. ಈಗ ಮುಂಬಯಿ ಎಕ್ಸೆಲ್ಸಿಯರ್, [illegible] ಮತ್ತು [illegible] [illegible] ಇದು [illegible] ಚಿತ್ರ ತಯಾರಿಕೆಯಾಗಿದೆ.

ಮೂಲೆ ಮೂಲೆಗಳಿಂದ

ಲೇಕ್‌ಸಕ್ಸೆಸ್ಸಿನಲ್ಲಿ [illegible]

[illegible]

ಅಂತಾರಾಷ್ಟ್ರೀಯ ನಿಧಿ ಮತ್ತು [illegible] ಸದಸ್ಯತ್ವವಿರುವ [illegible] ಅಂತಾರಾಷ್ಟ್ರೀಯ [illegible] ಬೋರ್ಡಿನಲ್ಲಿ ಭಾರತಕ್ಕೆ ಚೇರ್ಮನ್ ಪದವಿ ಕೊಡಲಾಯಿತು, ಈ ಬ್ಯಾಂಕು [illegible] ರಾಷ್ಟ್ರಗಳಿಗೆ ಹೆಚ್ಚಿನ ಸಾಲವನ್ನು [illegible] ಕೊಡಬಾರದು ಎಂದು ಅದರ [illegible] ಯೂಜಿನ್ ಆರ್. ಬ್ಲ್ಯಾಕರು ಹೇಳಿದ್ದಾರೆ.

ಯುರೋಪಿನಲ್ಲಿ ಆರ್ಥಿಕ [illegible] ಪರಿಸ್ಥಿತಿಯನ್ನು ರೂಢಿಸುವುದರ [illegible] ಫ್ರಾನ್ಸು ಕೊಳ್ಳುವ ಸಾಲಕ್ಕೆ [illegible] ಆಯಾತ ಪದಾರ್ಥಗಳ ಮೇಲಿನ ನಿರ್ಬಂಧಗಳನ್ನು ತೆಗೆದು ಹಾಕಲಾಗುವದೆಂದು ಫ್ರೆಂಚ್ ವಿದೇಶಮಂತ್ರಿ [illegible] ಹೇಳಿದನು.

ಸಂ. ರಾ. ಸಂಘದ [illegible] ಒಂದು ಸಭೆಗಾದರೂ ಪಂಡಿತ ನೆಹರು [illegible] ಬಂದರೆ ಅವರಿಗೆ ಖಾಸಗಿ [illegible] ಸಂಘದ ಪ್ರಧಾನಕಾರ್ಯದರ್ಶಿ ಶ್ರೀ ಟ್ರಿಗ್ವೆಲೈ ಅವರು ಪತ್ರಿಕಾ ಪ್ರತಿನಿಧಿಗಳಿಗೆ ಹೇಳಿದರು.

ಬುಡಾಪೆಸ್ಟಿನಲ್ಲಿ ಹಂಗೇರಿಯ [illegible] ವಿದೇಶ ಮಂತ್ರಿಯಾದ [illegible] ನನ್ನು ದೇಶದ್ರೋಹದ ಮತ್ತು [illegible] ಗುಪ್ತ ಸಮಾಚಾರಗಳನ್ನು [illegible] ಗಳ ಮೇಲೆ ವಿಚಾರಣೆ ಮಾಡಿದಲ್ಲಿ [illegible] ಎಲ್ಲ ಅಪರಾಧಗಳನ್ನು ಒಪ್ಪಿಕೊಂಡನು.

ಅಂತಾರಾಷ್ಟ್ರೀಯ ಕಮ್ಯುನಿಸ್ಟ್ ಸಂಘದ ಗುಪ್ತಚಾರರೆಂದು ಬೆಲ್‌ಗ್ರೇಡಿನಲ್ಲಿ [illegible] ಜಿಲ್ಲಾ ಕೋರ್ಟು ೬ ಹಂಗೇರಿಯನ್ನರಿಗೆ [illegible] ಯುಗೋಸ್ಲೋವಿಯನ್ನರಿಗೂ ೧೮ ವರ್ಷಗಳ ಕಾರಾವಾಸವನ್ನು ವಿಧಿಸಿತು.

"ಓವರ್ ನೋಟ್" [illegible]

[illegible]

— [illegible]

[illegible]

ಪಾಶ್ಚಾತ್ಯ ಮಹಾ ಪ್ರಭುತ್ವಗಳು [illegible]

[illegible]

ಗ್ರಹಗಳ ಮುನ್ನೋಟ

[ಜ್ಯೋತಿಷಿ:— ಶ್ರೀ ಕೃಷ್ಣಶಾಸ್ತ್ರಿ ಭಿಡೆ,]

ಭವಿಷ್ಯ ಕಥನ ಅಧೀನ ಕಾರ್ತೀಕೇಶ್ವರ ಬಿಲ್ಡಿಂಗ ಖಡೇಬಜಾರ ಬೆಳಗಾವಿ

ಸಪ್ಟಂಬರ ೨೬ ರಿಂದ ಅಕ್ಟೋಬರ ೨ ರ ವರೆಗೆ

ಮೇಷ

ನಿಮಗೆ ಧಂದಿಯಿಂದ ತೊಂದರೆ ಮಕ್ಕಳಲ್ಲಿ ಒಬ್ಬರು ಕಳೆದುಹೋಗುವ ಇಲ್ಲವೆ ಓಡಿ ಹೋಗುವ ಸಂಭವ. ಹೆಂಡತಿಯ ಪ್ರಕೃತಿ ಉತ್ತಮ ಆದರೆ ಇಬ್ಬರಲ್ಲಿಯೂ ಮೇಲಿಂದ ಮೇಲೆ ವಾಗ್ವಾದ ಏಳುವಷ್ಟು ಮತಭೇದ. ಉದ್ಯೋಗದಲ್ಲಿ ಪ್ರಗತಿ ಉತ್ತಮ ಲಾಭ ಅನುಕೂಲ ಆದರೆ ಪ್ರತಿಷ್ಠೆಗೆ ಒಮ್ಮೆಲೆ ಕುಂದು ಬರುವ ಅಂಜಿಕೆ. ಮಿತ್ರತ್ವದಲ್ಲಿ ವಿರೋಧ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು ದೊರೆಯುವದು. ಮನಸ್ಸು ಅಸಂತುಷ್ಟ. ನೆರೆ ಹೊರೆಯವರೊಡನೆ ತಿಕ್ಕಾಟದ ಪ್ರಸಂಗ. ಪುರುಷರಿಗಿಂತ ಸ್ತ್ರೀಯರಿಗೆ ಹೆಚ್ಚು ಆದರ. ಪ್ರವಾಸ ಸುಖಕರ ಆದರೆ ಭೆಟ್ಟಿ ಮತ್ತು ಪತ್ರ ವ್ಯವಹಾರ ಸ್ವಲ್ಪ ತಕರಾರಿನದು ಅಶ್ವಿನಿಯ ಕೊನೆಯ ೨ ಮತ್ತು ಭರಣಿಯ ಮೊದಲನೇ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೬, ೨೯, ೩೦ ಅನುಕೂಲ.

ವೃಷಭ

ನಿಮ್ಮ ಪ್ರಕೃತಿ ಕೆಡುವುದು ಆದರೆ ಹೆಂಡತಿಯದು ಸುಧಾರಿಸುವದು ಮಕ್ಕಳ ಉನ್ನತಿಯ ಸಂಗತಿಗಳು ಜರುಗುವವು. ಉದ್ಯೋಗದಲ್ಲಿ ಒಳ್ಳೆ ಪ್ರಗತಿ ಉತ್ತಮ ಪ್ರತಿಷ್ಠೆ ಮತ್ತು ತುಂಬ ಲಾಭ ಅವಚಿತ ಲಾಭದ ಸಂಭವ. ಅಪ್ತರು ಮತ್ತು ನೆರೆಯವರಿಂದ ಮಹತ್ವದ ಕೆಲಸಗಳಲ್ಲಿ ಆಟು ಅನುಭವ. ಮಿತ್ರರಲ್ಲಿ ಒಬ್ಬರು ಬಹಳ ಕಾಯಿಲೆ ಬೀಳುವ ಇಲ್ಲವೆ ಸಾಯುವ ಅಂಜಿಕೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳ ಜೋರು ಹೆಚ್ಚು. ಪ್ರವಾಸ ತೊಂದರೆಯದು ಆದರೆ ಭೆಟ್ಟಿ ಪತ್ರವ್ಯವಹಾರ ಉತ್ತಮ. ಕೃತ್ತಿಕೆಯ ಕೊನೆಯ ೨ ಮತ್ತು ರೋಹಿಣಿಯ ಮೊದಲನೆಯ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೭, ೨೮, ೧, ೨ ಅನುಕೂಲ.

ಮಿಥುನ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಉತ್ತಮ. ಮಕ್ಕಳಲ್ಲಿ ಒಬ್ಬರ ಉನ್ನತಿ. ಆದರೆ ಕೌಟುಂಬಿಕ ವಿಷಯಗಳಲ್ಲಿ ಬಗೆಬಗೆಯ ಅಗಂತುಕ ಕಾರಣಗಳಿಂದ ವಿಪರೀತ ದಗದಗಿ. ಉದ್ಯೋಗದಲ್ಲಿ ಉತ್ತಮ ಪ್ರಗತಿ ಅನುಕೂಲ ಯಶಸ್ಸು. ಆದರೆ ಶತ್ರುಗಳ ಉಪದ್ರವು ಹೆಚ್ಚೇ. ಪ್ರವಾಸಾದಿ ಕೆಲಸ ಸಾಧಾರಣ ಅನುಕೂಲ. ಆರಿದ್ರೆಯ ಕೊನೆಯ ೨ ಮತ್ತು ಪುನರ್ವಸುವಿನ ಮೊದಲನೇ ೨ ಚರಣಗಳಿಗೆ ತೊಂದರೆ ಕಡಮೆ ತಾ. ೨೬, ೨೯-೩೦ ಅನುಕೂಲ.

ಕರ್ಕ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿಯಲ್ಲಿ ಕಿರಿಕಿರಿ ಇದ್ದೀತು. ಮನೆಯಲ್ಲಿ ಕಲಹ ಹೆಚ್ಚು. ನಿರೀಕ್ಷಿತ ಹೆಚ್ಚು ಬಹಳ ಬಂಧುವರ್ಗದವರಲ್ಲಿ ಮತ್ತು ಮಕ್ಕಳಲ್ಲಿ ಕೆಲವರಿಗೆ ಉನ್ನತಿ. ಸ್ವಾಸ್ಥ್ಯದಲ್ಲಿ ಅನುಕೂಲ ಘಟನೆಗಳು ... ಮೇಲಿಂದ ಮೇಲೆ ಸಾಧಿಸ... ದೊರೆಯುವ ಯೋಗ. ಉದ್ಯೋಗದಲ್ಲಿ ಪ್ರಗತಿ ಆದರೆ ಪ್ರತಿಷ್ಠೆ ಪೂರ್ತಿ ಅನುಕೂಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆ ... ಮಿತ್ರತ್ವದಲ್ಲಿ ವಿರೋಧ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ...ಕೊನೆಯ ೨ ಮತ್ತು ಆಶ್ಲೇಷಾ ... ೨ ಚರಣಗಳಿಗೆ ತೊಂದರೆ ಕಡಮೆ. ...

ಸಿಂಹ

ನಿಮ್ಮ ಪ್ರಕೃತಿ ಉತ್ತಮ. ಕೌಟುಂಬಿಕ ...

ಪರಿಣಮಿಸುವ ಸಂಭವ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಹೆಚ್ಚು ಅನುಕೂಲ. ಮಘದ ಕೊನೆಯ ೨ ಮತ್ತು ಪೂರ್ವದ ಮೊದಲನೆ ೨ ಚರಣಗಳಿಗೆ ಹೆಚ್ಚು ಅನುಕೂಲ. ತಾ. ೨೬, ೨೯, ೩೦ ಅನುಕೂಲ.

ಕನ್ಯಾ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಉತ್ತಮ. ಮಕ್ಕಳಿಗೆ ಸ್ವಲ್ಪ ಕ್ಲೇಶ ಮತ್ತು ಅವರ ವರ್ತನೆಯ ಬಗ್ಗೆ ಗಂಡ ಹೆಂಡರಲ್ಲಿ ಬಹಳ ಮತಭೇದ. ಉಳಿದ ವಿಷಯದಲ್ಲಿ ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಉತ್ತಮ ಪ್ರಗತಿ ಒಳ್ಳೆ ಪ್ರತಿಷ್ಠೆ ಮತ್ತು ತುಂಬ ಲಾಭ. ಆದರೆ ಕೆಲ ಕೆಲಸಗಳಲ್ಲಿ ಮನಸ್ಸಿನ ವಿರುದ್ಧ ವೆಚ್ಚ ಮಾಡಬೇಕಾಗುವ ಪ್ರಸಂಗ. ಶ್ರೀಮಂತ ಇಲ್ಲವೆ ಸುಂದರ ಸ್ತ್ರೀಯ ಭೆಟ್ಟಿಯ ಯೋಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ವಿಪರೀತ ಯಶಸ್ಸು. ಮಿತ್ರರಲ್ಲಿ ಮಂಗಲ ಘಟನೆಗಳು ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಉತ್ತರೆಯ ಕೊನೆಯ ೨ ಮತ್ತು ಹಸ್ತದ ಮೊದಲನೆಯ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೬, ೨೭, ೧, ೨ ಅನುಕೂಲ.

ತುಲಾ

ನಿಮ್ಮ ಪ್ರಕೃತಿ ಉತ್ತಮ. ಆದರೆ ಹೆಂಡತಿಯದು ಮಾತ್ರ ಸ್ವಲ್ಪ ಕೆಡುವದು. ಉಳಿದ ವಿಷಯಗಳಲ್ಲಿ ಉತ್ತಮ. ಆಪ್ತರು ಯೋಗ್ಯ ಮಾರ್ಗದರ್ಶನ ಮಾಡುವರು, ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭವೂ ಮನಸ್ಸಿನಂತೆ. ಆದರೆ ವೆಚ್ಚವೂ ಅಷ್ಟೇ ಭಾರದ್ದು. ಪ್ರತಿಷ್ಠೆ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉತ್ತಮ ಯಶಸ್ಸು. ಆದರೆ ವೆಚ್ಚ ಮತ್ತು ಓಡಾಟ ಕಲ್ಪನಾತೀತ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಸ್ವಾತಿಯ ಕೊನೆಯ ೨ ಮತ್ತು ವಿಶಾಖದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೬, ೨೭, ೨೮, ೨೯ ಅನುಕೂಲ.

ವೃಶ್ಚಿಕ

ನಿಮ್ಮ ಮತ್ತು ಮಕ್ಕಳ ಪ್ರಕೃತಿ ಉತ್ತಮ. ಆದರೆ ಹೆಂಡತಿಯದು ಮಾತ್ರ ಸ್ವಲ್ಪ ಕೆಡುವದು. ಅಲ್ಲದೆ ಅವಳಿಗೆ ತನ್ನ ಬಗ್ಗೆ ಇರುವ ಪ್ರೇಮದ ಸಂಬಂಧದಲ್ಲಿಯೂ ಬಹಳ ಸಂಶಯ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಉದ್ಯೋಗದಲ್ಲಿ ಉತ್ತಮ ಪ್ರಗತಿ ಒಳ್ಳೆ ಲಾಭ ಮತ್ತು ವಿಶೇಷ ಪ್ರತಿಷ್ಠೆ. ಮಿತ್ರಸುಖ ಉತ್ತಮ ವೆಚ್ಚ ಹೆಚ್ಚು. ಆದರೆ ಅದರಲ್ಲಿಯ ಹೇತು ಸಾಧ್ಯ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿಯೂ ಸಮಾನ ಸ್ಥಿತಿ. ಪ್ರವಾಸ ತೊಂದರೆಯದು. ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಉತ್ತಮ. ಅನುರಾಧೆಯ ಕೊನೆಯ ೨ ಮತ್ತು ಜ್ಯೇಷ್ಠದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೬, ೨೮, ೨೯, ೩೦ ಅನುಕೂಲ.

ಧನು

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಉತ್ತಮ. ಆದರೆ ಮಕ್ಕಳಿಗೆಲ್ಲ ಒಂದಿಲ್ಲೊಂದು ಬಗೆಯಿಂದ ಕ್ಲೇಶವಾಗುವದರಿಂದ ಪ್ರಾಪಂಚಿಕ ಸುಖದಲ್ಲಿ ಬಹಳ ವಿರಸ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಬಹಳ ಜನರೊಡನೆ ಹೊಸ ಆಪ್ತಸಂಬಂಧ ... ಬಗ್ಗೆ ... ಜೋರಿನಿಂದ ನಡೆಯುವವು. ಮಿತ್ರಸುಖ ಉತ್ತಮ ಬಹಳ ದಿನಗಳ ಹರಕೆ ಪೂರ್ತಿಯಾಗಿದ್ದವನು ... ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉತ್ತಮ ಯಶಸ್ಸು. ಪ್ರವಾಸಾದಿ ಕೆಲಸ ಹಿತದ್ದು. ಮೂಲಾದ ಕೊನೆಯ ೨ ಮತ್ತು ಪೂರ್ವಾಷಾಢದ ಮೊದಲನೇ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೯, ೩೦, ೧, ೨ ಅನುಕೂಲ.

ಮಕರ

...

ಪ್ರತಿಷ್ಠೆ ಮತ್ತು ದೊಡ್ಡ ಜನರಿಂದ ಸನ್ಮಾನ ಮತ್ತು ತುಂಬ ಲಾಭ. ವೆಚ್ಚ ಹೆಚ್ಚಿಗಾದರೂ ಯೋಜಿತವಾದ ಕೆಲಸಗಳೆಲ್ಲ ಮನಸ್ಸಿನಂತೆ ಪರಿಣಮಿಸುವವು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪ್ರತಿಪಕ್ಷಗಳ ಜೋರು ಹೆಚ್ಚಿಗಿದ್ದರೂ ಯಶಸ್ಸಿನ ಒಲವು ನಿಮ್ಮ ಕಡೆಗೆಯೇ. ಮಿತ್ರಸುಖ ಉತ್ತಮ. ಪರೋಪಕಾರದಲ್ಲಿ ಮನಸ್ಸು ಪ್ರವಾಸಾದಿ ಕೆಲಸ ಸುಖಕರ. ಉತ್ತರಾಷಾಢದ ಕೊನೆಯ ೨ ಮತ್ತು ಶ್ರವಣದ ಮೊದಲನೆ ೨ ಚರಣಗಳಿಗೆ ಹೆಚ್ಚು ಅನುಕೂಲ. ತಾ. ೨೬, ೨೭, ೧, ೨ ಅನುಕೂಲ.

ಕುಂಭ

ನಿಮ್ಮ ಪ್ರಕೃತಿ ಅನುಕೂಲ. ಆದರೆ ಹೆಂಡತಿಯ ಪ್ರಕೃತಿ ಬಗ್ಗೆ ತಕರಾರು ಇದ್ದೀತು. ಉದ್ಯೋಗದಲ್ಲಿ ಒಳ್ಳೆ ಪ್ರಗತಿ ಮತ್ತು ತುಂಬ ಲಾಭ. ಆದರೆ ಸ್ವತಂತ್ರ ಜನರಿಗಿಂತ ನೌಕರದಾರರ ಪ್ರತಿಷ್ಠೆ ಹೆಚ್ಚುವ ಯೋಗ ಮನೆಯಲ್ಲಿ ಕಲಹ. ಆದರೆ ಕುಟುಂಬದಲ್ಲಿಯ ಪ್ರತಿಯೊಬ್ಬನು ಉತ್ಕರ್ಷ ಮಾರ್ಗದಲ್ಲಿ. ಮಿತ್ರಸುಖ ಉತ್ತಮ. ಅಕಸ್ಮಾತ್ ಲಾಭದ ಯೋಗವೂ ಇದೆ. ಏರಡನೆಯವರ ಬಗ್ಗೆ ಬಹಳ ವಿಘ್ನಸಂತೋಷ ಪ್ರವೃತ್ತಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು. ಪತ್ರವ್ಯವಹಾರಕ್ಕಿಂತ ಪ್ರವಾಸ ಭೆಟ್ಟಿ ಹೆಚ್ಚು ಅನುಕೂಲ. ಶತತಾರಿಕೆಯ ಕೊನೆಯ ೨ ಮತ್ತು ಪೂರ್ವಾಭಾದ್ರಪದದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೬, ೨೭, ೨೮, ೨೯ ಅನುಕೂಲ,

ಮೀನ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಉತ್ತಮ. ಮಕ್ಕಳಿಗೆ ಸ್ವಲ್ಪ ಕ್ಲೇಶ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಉತ್ತಮ ಪ್ರಗತಿ ಮತ್ತು ಬಹಳ ಪ್ರತಿಷ್ಠೆ. ಆದರೆ ಲಾಭದಲ್ಲಿ ಕೆಲ ಅಡಚಣಿಗಳು, ಅಕಸ್ಮಾತ್ ಲಾಭದ ಸಂಭವವೂ ಉಂಟು. ಗುಪ್ತ ಪ್ರೇಮದ ಚಾಳಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉತ್ತಮ ಯಶಸ್ಸು ಮಿತ್ರತ್ವದಲ್ಲಿ ಸ್ವಲ್ಪ ವಿರೋಧ. ಪ್ರವಾಸಾದಿ ಕೆಲಸ ಹಿತಕರ. ಉತ್ತರಾಭಾದ್ರಪದದ ಕೊನೆಯ ೨ ಮತ್ತು ರೇವತಿಯ ಮೊದಲನೇ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೬, ೨೮, ೨೯, ೩೦ ಅನುಕೂಲ.

ವಾಸ್ಕೋಡ ಗಾಮನಿಗಿಂತಲೂ ಮೊದಲು ಭಾರತಕ್ಕೆ ಬಂದ ಪ್ರಥಮ ಯುರೋಪಿಯನ್ನ ನಂದರಿರಶಿಯದ ಅಥನಾಸ್ ನಿಕಿತಿನ್ ವ್ಯಾಪಾರಿ ಅವನು ೪೮೦ ವರ್ಷಗಳ ಹಿಂದೆ ಜೀಡರ್ ಪಟ್ಟಣಕ್ಕೆ ಬಂದಿದ್ದನು ಎಂದು ಸೋವಿಯಟ್ ಒಕ್ಕೂಟದ ಭೂವಿಜ್ಞಾನ ಸಂಘದ ಅಧ್ಯಕ್ಷರಾದ ಪ್ರೊ. ಲೆವಿಬರ್ಗರು ಟಾಸ್ ವಾರ್ತಾ ಸಂಸ್ಥೆಗೆ ತಿಳಿಸಿದರು.

ರಾಜಮಾತೆ



ರಾಜಮಾತೆಯೆಂದು ಹೆಸರಾದ ಮೇರಿ ಲಿಟೇಶಿಯಾ ರವೋಲಿನೋ ಕಾರ್ಸಿಕದಲ್ಲಿ ೧೭೫೦ ರಲ್ಲಿ ಜನಿಸಿದಳು. ಅಲಾಕ್ಸಿಯೋವಿನ ಕರಣಿಕನಾದ ಕಾರ್ಲೊ ಬೋನಾಪಾರ್ಟನ್ನು ಅವಳು ಮದುವೆಯಾದಳು. ಅವನಿಂದ ಅವಳಿಗೆ ೧೩ ಮಕ್ಕಳು ಹುಟ್ಟಿದವು. ಅವರಲ್ಲಿ ನಾಲ್ವರು ರಾಜರಾಗಲಿದ್ದರು ಮತ್ತು ಈರ್ವರು ರಾಣಿಯರಾಗಲಿದ್ದರು. ಅವರಲ್ಲಿ ಅತಿ ಪ್ರಸಿದ್ಧನಾದವನು ನೆಪೋಲಿಯನ್ ಅವನು ಅವಳ ಎರಡನೆಯ ಮಗ; ಮುಂದೆ ಫ್ರಾನ್ಸಿನ ಚಕ್ರವರ್ತಿಯಾದನು. ಅವಳ ಜ್ಯೇಷ್ಠಪುತ್ರ ಜೋಸೆಫನು ಸ್ಪೇನಿನ ರಾಜನಾದನು. ಜೆರೋಮ ಮತ್ತು ಲೂಯಿಗಳು ವೆಸ್ಟ್‌ಫೇಲಿಯ ಮತ್ತು ಹಾಲಂಡುಗಳ ದೊರೆಗಳಾದರು. ಹೆಣ್ಣು ಮಕ್ಕಳಲ್ಲಿ ಮೇರಿಯಾ ಎನನ್ಸಿಯಾ ಕಾರೋಲಿನಳು ನೇಪಲ್ಸಿನ ರಾಣಿಯೂ ಅವಳ ಸಹೋದರಿ ಎಲೀಸಳು ಟೊಸ್ಕನದ ರಾಣಿಯೂ ಆದರು. ಮಿಕ್ಕ ಇಬ್ಬರು ಪ್ರಸಿದ್ಧ ಮಕ್ಕಳಾದ ಲೂಸೀನ್ ಮತ್ತು ಮೇರಿ ಪಾಲಿನ್ನರು ಕಾನಿಯೋವಿನ ರಾಯನೂ ಗೌಸ್ಟಲದ ಶ್ರೀಮಂತ ಪತ್ನಿಯೂ ಆದರು. ರವೋಲನೋ ತನ್ನ ಕುಟುಂಬ ಸಂಪೂರ್ಣವಾಗಿ ಅಸ್ತಂಗತವಾದ ಮೇಲೆ ೨೦ ವರ್ಷಗಳ ಕಾಲ ಬದುಕಿ ೧೮೩೬ ರಲ್ಲಿ ಸ್ವರ್ಗಸ್ಥಳಾದಳು

ನಾನು ಊಟ ಬಿಟ್ಟೆ!

ವೈದ್ಯಶಾಸ್ತ್ರ, ಆರೋಗ್ಯಶಾಸ್ತ್ರ ಅಂದರೆ ನನಗೆ ಪ್ರಾಣ. ಅವನ್ನು ಆಳವಾಗಿ ಅಭ್ಯಾಸ ಮಾಡಿದೆ. ಹಗಲೂ ರಾತ್ರಿಯೂ ಕಣ್ಣಿಗೆ ಎಣ್ಣೆ ಹಾಕಿಕೊಂಡು ಓದಿದೆ. ಹಿಂದಿನ ಚರಕ ಸುಶ್ರುತರನ್ನು ಮುಗಿಸಿ ಆಧುನಿಕ ವಿಜ್ಞಾನಿಗಳಾದ ಇ. ವಿ. ಮೆಕ್ ಕಾಲಮ್, ಡಾ. ಪಾಲ್ ವೈಟ್‌ಲ್ ಮುಂತಾದವರನ್ನು ಓದಿದೆ. ಓದುವ ವರೆಗೇನೋ ಬಹಳ ಚೆನ್ನಾಗಿಯೇ ಇತ್ತು. ಓದು ಮುಗಿಸಿ ಓದಿದ್ದನ್ನು ಅರಗಿಸಿ ಅನುಭವಕ್ಕೆ ತಂದುಕೊಳ್ಳಹೋದಾಗ ಬಂತು ನೋಡಿ ಫಜೀತಿ. ಭರ್ತೃಹರಿಯು ಸುಭಾಷಿತದಲ್ಲಿ "ಮೌನಾನ್ಮೂಕಃ ಪ್ರವಚನಪಟುಃ..." ಎಂಬಲ್ಲಿ ಸುಮ್ಮನಿದ್ದರೆ ಮೂಕ ಎನ್ನುತ್ತಾರೆ. ಮಾತಾಡಿದರೆ ಬಾಯಿಬಡಿಕ ಎನ್ನುತ್ತಾರೆ, ಎಂದು ಇನ್ನೊಬ್ಬರನ್ನು ರಂಜಿಸುವುದು ಎಷ್ಟು ಕಷ್ಟ ಎನ್ನುವುದನ್ನು ವರ್ಣಿಸಿದ್ದಾನೆ. ಹಾಗಾಯಿತು ನನ್ನ ಕತೆ; ಅತ್ತ ಪುಲಿ ಇತ್ತ ದರಿ ಎಂಬ ಧರ್ಮ ಸಂಕಟ ಬಂದೊದಗಿತು. ಜ್ಞಾನವೆಂದಾದರೂ ಅಜ್ಞಾನವನ್ನು ಹಡೆಯುವುದೇ ಎಂದು ನೀವು ಕೇಳಬಹುದು. ನೀವು ಕೇಳುವುದೇನೋ ಸರಿ; ಆದರೆ ಆದದ್ದು ಮಾತ್ರ ಹಾಗೆ. ಇಂಥ ಪರಿಸ್ಥಿತಿಯಲ್ಲಿ ಸಿಕ್ಕಿದ ಜಿಜ್ಞಾಸುವೊಬ್ಬ, ತರ್ಕದಿಂದ ಕೊನೆಯ ತೀರ್ಮಾನ ಸಿಕ್ಕುವುದಿಲ್ಲ, ವೇದಾದಿ ಶ್ರುತಿಗಳು ಭಿನ್ನಭಿನ್ನವಾಗಿವೆ; ಋಷಿಗಳೋ ನೂರೆಂಟುಮಂದಿ, ಅವರು ನೂರೆಂಟು ತರಹ ಹೇಳಿದ್ದಾರೆ. ಯಾರನ್ನು ನಂಬುವುದು, ಯಾರನ್ನು ಬಿಡುವುದು? ಆದುದರಿಂದ ಧರ್ಮಸೂಕ್ಷ್ಮವೆಂಬುದು ಯಾರಿಗೂ ತಿಳಿಯತಕ್ಕಂಥದಲ್ಲ, ಹತ್ತು ಜನ ಹೇಗೆ ನಡೆದುಕೊಳ್ಳುವರೋ ಹಾಗೆ ನಾನೂ ನಡೆದುಕೊಂಡರಾಯಿತು" ಎಂದು ಬೇಸರಬಟ್ಟು ನಿರ್ಧರಿಸಿಕೊಂಡದ್ದು ನಿಮಗೆ ಗೊತ್ತಿರಬಹುದು.

ನನ್ನ ಪ್ರತಿಜ್ಞೆ!

ಊಟ ಮಾಡೋಣ ಅಂತ ನಿನ್ನೆ ಎಲೆಯ ಮುಂದೆ ಕುಳಿತೆ. ಆಗ ಏನೋ ಹಬ್ಬದ ದಿನ ಅಂತ ಪಾಯಸ ಮಾಡಿ ಎಲೆಯ ಮೊದಲಲ್ಲಿ ಬಡಿಸಿದ್ದರು. ಬಾಯಿಗೆ ಹಾಕಿದೆ. ಬಹಳ ಸಿಹಿಯಾಗಿತ್ತು. ಸಕ್ಕರೆ ತಿಂದರೆ ಚುರುಕುತನ ಹೆಚ್ಚುತ್ತದೆ. ಅಂತ ಗೋಲ್ಬರ್ ಹೇಳಿದ್ದಾನೆ ಎಂಬ ಮಾತು ನೆನಪಿಗೆ ಬಂದು ಬಹಳ ಹುರುಪು ಉಂಟಾಯಿತು. ಅದರಿಂದಲೇ ಸಿಹಿ ಪದಾರ್ಥ ಹೆಚ್ಚು ತಿಂದವರು ಆಟ ಪಾಠಗಳಲ್ಲಿ ಬಹಳ ಕುಶಲರಾಗಿರುತ್ತಾರೆ ಎಂದು ಓದಿದ್ದೆ. ಆದರೆ ಎರಡನೆಯ ಸಲ ತುತ್ತನ್ನು ಬಾಯಿಗೆ ಇತ್ತುವಷ್ಟರಲ್ಲಿ ಮೆಕ್‌ಕಾಲಂ ಹೇಳಿದ್ದು ಜ್ಞಾಪಕಕ್ಕೆ ಬಂತು. ಅವನೇನು ಹೇಳಿದ್ದಾನೆ ಅಂತಂದರೆ, ಹೆಚ್ಚಾಗಿ ಸಕ್ಕರೆ ಮತ್ತು ಪಿಷ್ಟ ಪದಾರ್ಥಗಳನ್ನು ತಿಂದರೆ ಹಲ್ಲು ಶಿಥಿಲವಾಗಿ ಬೇಗನೆ ಕಿತ್ತುಹೋಗುತ್ತದೆ ಎಂದ. ಏನು ಮಾಡಬೇಕಾಗ? ಪಾಯಸ ಬೇಡ ಅಂತ ಬಿಟ್ಟೆ. ಮೊದಲಿಗಿಂದಲೂ ಬೆಲ್ಲದ ಸಕ್ಕರೆಯ ಚೂರ ಎಂದು ಬಿರುದು ಪಡೆದಿದ್ದ ನನಗೆ ಅಂಥ ಅತಿಮಧುರವಾದ ಪರಮಾನ್ನವನ್ನು ಬಿಡಲು ಎಷ್ಟು ಕಷ್ಟವಾಯಿತು ಅನ್ನುವದನ್ನು ಬರೆದರೆ ಒಂದು ಮಹಾಕಾವ್ಯವೇ ಆದೀತು. ಹೋಗಲಿ ಅಂದೆ. ಆ ಮೇಲೆ ಸಕ್ಕರೆ ಶರೀರದಲ್ಲಿ ಕಡಿಮೆಯಾದವರು ಖೂನಿ ಮುಂತಾದ ಕೆಟ್ಟ ಕೃತ್ಯ ಮಾಡುವರು ಎಂಬುದು ನೆನಪಿಗೆ ಬಂದರೂ ಮೊದಲಿನ ಹೆದರಿಕೆಯಿಂದ ನಾನು ಹತ್ತಿರವೇ ಬಡಿಸಿದ್ದ ಸತ್ಯನಾರಾಯಣ ಪ್ರಸಾದವನ್ನು ಕಿರಿಬೆರಳಿಂದ ಕೂಡ ಮುಟ್ಟಲಿಲ್ಲ. ಜೊತೆಗೆ ಸಕ್ಕರೆ ಹೆಚ್ಚಾಗಿ ತಿಂದರೆ ಕ್ಯಾನ್ಸರ್ ಹುಣ್ಣು ತಲೆದೋರುತ್ತದೆ, ರಕ್ತದಲ್ಲಿ ಸಕ್ಕರೆ ವಿಶ್ರವಾಗಿ ಬೊಜ್ಜುಬೆಳೆದು ಹೃದಯಸ್ತಂಭನ ಸಂಭವಿಸುತ್ತದೆ ಎಂಬುದೂ ನೆನಪಾಗಿ ಇನ್ನೆಂದೆಂದೂ ಸಿಹಿ ಪದಾರ್ಥವನ್ನು ಕಣ್ಣಿಂದ ಕೂಡ ನೋಡುವುದಿಲ್ಲ ಎಂದು ಪ್ರತಿಜ್ಞೆಮಾಡಿಬಿಟ್ಟೆ!

ಅನಂತರ ಅನ್ನಕ್ಕೆ ಕೈಹಾಕಿದೆ. ಕೂಡಲೆ ನೀರುಳ್ಳಿ ಬೇಳೆ ಹುಳಿ ಬಂತು. ಉಳ್ಳಿಯಲ್ಲಿ ಕಬ್ಬಿಣದ ಅಂಶವಿದೆ. ಫೇಷ್ ಅಂತೆ. ಕಬ್ಬಿಣ ಅಂದರೆ ಬಹಳ ಸತ್ವಶಾಲಿಯಾದದ್ದು. ಉಳ್ಳಿಯನ್ನು ತಿಂದು ಒಳ್ಳೆಯ ಕಸುವಿನವನಾಗುತ್ತೇನೆ ಎಂದುಕೊಂಡೆ. ಆದರೆ ಅಷ್ಟು ಹೊತ್ತಿಗೆ ಉಳ್ಳಿಯಿಂದ ವಾಯುವೃದ್ಧಿಯಾಗುತ್ತದೆ, ಕಾಮುಕತನ ಬೆಳೆಯುತ್ತದೆ; (ಇಂಗ್ಲೀಷಿನವರೇನೋ ಅದರಲ್ಲಿ ರಂಜಕಾಂಶವಿರುವುದರಿಂದ ಬುದ್ಧಿ ಚುರುಕಾಗುವದೆಂದು ಹೇಳಿದರೂ) [illegible]

ಎಂಬುದು ಹೊಳೆಯಿತು. ಹಾಗಾಗಿ [illegible] ಹುಳಿಯು ಒಗ್ಗರಣೆಯ ಕಂಪು ಮೂಗಿಗೆ ಬಡಿದು ಬಾಯಲ್ಲಿ ನೀರೂರಿಸುತ್ತಿದ್ದರೂ ಬೇಡವೆಂದು ಅದನ್ನು ಬಿಟ್ಟುಬಿಟ್ಟೆ.

ಹಲ್ಲು ಕಳೆದುಕೊಂಡು ಹೇಗೆ ಬದುಕಲಿ?

ಅನ್ನಕ್ಕೆ ಇನ್ನೇನು ಹಾಕಿಸಿ ಕೊಳ್ಳೋದಪ್ಪಾ? ಎಂದು ಚಿಂತಿಸುತ್ತಿದ್ದಾಗ ಅಕ್ಕಿ ಹಲ್ಲೇ ಇಡಿದೆ ಅಂತ ನೋಡಿದೆ. ಅನ್ನದಲ್ಲಿರ ಇರುವ ಪಿಷ್ಟ ಪದಾರ್ಥ ಕೂಡ ಹಲ್ಲು ಹಾಳುಮಾಡಿಬಿಟ್ಟು ಹೋಗುವುದು, ಸವೆದೇ ಹೋಗುವುದು, ನಾನು ಪ್ರಾಯದಲ್ಲೇ ಮುದುಕನಾಗುವುದು! ಅಯ್ಯೋ ಎಂದೆ. ಅಲ್ಲದೆ, ಅಕ್ಕಿ ತಿಂದವನು ಹಕ್ಕಿಯಂತೆ ಹಗುರ ಎಂದು ಬೇರೆ ಸರ್ಜನ್ ಹೇಳಿದ್ದಾನಂತೆ. ಹಾಗಾದರೆ ಚಪಾತಿ ತೆಗೆದುಕೊಂಡು ಬನ್ನಿ ಅಂದೆ. ಅದೋ ಒಳ್ಳೆಯ ಪಾಲಿಶ್ ಮಾಡಿದ ಗೋದಿಯಿಂದ ತಯಾರಿಸಿದ್ದು; ಬೆಳ್ಳಗಿತ್ತು. ನೋಡಿದ ಕೂಡಲೇ ಏನೋ ಒಂತರಹ ಎನಿಸಿತು. ಅದರಲ್ಲಿ ಜೀವನ ಸತ್ವವಿಲ್ಲ, ಕೊಬ್ಬಿಲ್ಲ, ವಿಜ್ಞಾನಿಯೊಬ್ಬನೇನೋ ಅದನ್ನು ಇಲಿಗಳಿಗೆ ತಿನ್ನಿಸಿ ಅದರಿಂದ ವಿಷಮ ಶೀತಜ್ವರ ಅವಕ್ಕೆ ಬರದಂತಾಯಿತು ಎಂದಿದ್ದಾನೆ. ಆದರೆ ಈ ರೇಶನ್ನಿನಲ್ಲಿ ಕೊಟ್ಟ ಈ ವಿದೇಶೀಯ ಗೋದಿಯ (ಬಿಳಿಯ) ಚಪಾತಿಯನ್ನು ತಿಂದ ನಾಯಿಗಳಿಗೆ ಮೂರ್ಛೆಬಂತು ಎಂದು ಮತ್ತೊಬ್ಬ ಪ್ರಯೋಗವಿಜ್ಞಾನಿ ಬರೆದಿದ್ದಾನೆ. ಈ ಅಂಶ ನೆನಪಾದಕೂಡಲೇ ದಿನವೂ ಇಂಥ ಚಪಾತಿಯನ್ನು ತಿಂದರೆ ಒಂದಲ್ಲ ಒಂದು ದಿನ ನನಗೂ ಮೂರ್ಛೆ, ಅಪಸ್ಮಾರ ಅಥವಾ ಉನ್ಮಾದ ತಗುಲಿಕೊಳ್ಳಬಹುದು; ಒಂದು ವೇಳೆ ನನ್ನ ಕಾಲದಲ್ಲಿ ಬರದಿದ್ದರೂ ನನ್ನ ಮುಂದಿನ ಪೀಳಿಗೆಗಾದರೂ ಬರಬಹುದು ಎಂದು ಹೌಹಾರಿ, ಚಪಾತಿ ಹಾಕಬೇಡಿರಿ ಎಂದೆ. ಆ ಮೇಲೆ? ಎದ್ದೇಬಿಟ್ಟೆ ಊಟ ಬಿಟ್ಟು! "ಹಾಗಾದರೆ ಮಹಾರಾಯಾ, ಕಾಫಿಯನ್ನಾದರೂ ಮಾಡಿಕೊಡುತ್ತೇವೆ, ಕುಡಿ. ವರ್ಷಾವಧಿ ಹಬ್ಬದ ದಿನ, ಬ್ರಹ್ಮಚಾರಿಯಾದ ನೀನು ಉಣ್ಣದೆ ಕೂತಿರುವೆ" ಎಂದು ಉಪಚಾರಮಾಡಿದರು. ಹೂಂ ಎಂದೆ. ಏಕೆಂದರೆ, ಇಲಿಗಳಿಗೆ ಕಾಫಿ ಕುಡಿಸಿ ನೋಡಿದಾಗ ಅವು ಮರಿಮಕ್ಕಳುಗಳ ಸಂಖ್ಯೆಯನ್ನು ಹೆಚ್ಚಿಸಿಕೊಂಡು ಅಸಂಖ್ಯವಾಗಿ ಅಭಿವೃದ್ಧಿ ಹೊಂದಿದವೆಂದು ಪ್ರಯೋಗದಿಂದ ತಿಳಿದುಬಂದಿದೆಯೆಂಬುದು ನಾನೋದಿದ ಒಂದು ಮಹಾಗ್ರಂಥದಲ್ಲಿತ್ತು. ಆದರೆ ಕೂಡಲೆ ಮತ್ತೊಂದು ಆಲೋಚನೆ ಹೊಳೆಯಿತು. ಕಾಫಿ ಕುಡಿದರೆ ಹೊಟ್ಟೆಯಲ್ಲಿ ಹುಣ್ಣಾಗುತ್ತದೆ ಎಂದು ಸರ್ಜನ್ನರೊಬ್ಬರು ಅನೇಕ ಅನುಭವ ಮತ್ತು ಪ್ರಯೋಗಗಳಿಂದ ಕಂಡು ಹೇಳಿದ್ದು ನೆನಪಾಯಿತು. ಅಯ್ಯೋ ಬೇಡವೇ ಬೇಡ ಕಾಫಿ, ಎಂದು ಒಳಗೆ ಹೋಗಿ ಒದರಿಬಿಟ್ಟೆ. ಒಲೆಯ ಮೇಲೆ ಮರಳುತ್ತಿದ್ದ ನೀರನ್ನು ನಾನೇ ಹೋಗಿ ಇಳಿಸಿ ಬಂದು ಬಿಟ್ಟೆ. ನನಗೆ ಅನುಭವವಿತ್ತು ಕಾಫಿಯಿಂದ ಎಂಥ ಕಾವ್ಯ ಸ್ಫೂರ್ತಿ ಬರುತ್ತದೆ ಎಂಬುದು; ಆದರೆ ಉಪಾಯವಿಲ್ಲ. ನೂರುವರ್ಷ ಬದುಕಬೇಕು ಎಂಬ ಆಸೆಯಿರುವ ನನ್ನಂಥ ಪ್ರಾಣಿ ಕಾಫಿ ಕುಡಿದುಬಿಟ್ಟರೆ ಏನುಗತಿ? ಹೊಟ್ಟೆಯಲ್ಲಿ ಹುಣ್ಣಾಗಿ ಅನ್ನ ತಿನ್ನಲಾಗದೆ ಮೂರೇ ವರ್ಷಗಳಲ್ಲಿ ಮಣ್ಣು ಮುಕ್ಕಿಹೋಗುವುದೇ ಸರಿ. ಸದ್ಯಕ್ಕೆ ಒಳ್ಳೆಯ ಸಮಯಕ್ಕೆ ನೆನಪಾಯಿತು, ಬದುಕಿದೆಯಾ ಬಡಜೀವವೇ! ಎಂದು ನನ್ನ ಹೊಟ್ಟೆಯ ಮೇಲೆ ನಾನೇ ಕೈಯಿಟ್ಟುಕೊಂಡೆ!

ಹೋಗಲಿ, ಒಂದು ಲೋಟ ಸೀ ನೀರು— ಅದನ್ನಾದರೂ ಕುಡಿಯುವುದಿಲ್ಲವೆ? ಅಂತ ಬಹಳ ಪಶ್ಚಾತ್ತಾಪದಿಂದಲೂ [illegible] ಯಿಂದಲೂ ಕೇಳಿದರು ಬಡಿಸುವಾಕೆ. [illegible] ವರೆಗಿನ ಅನುಭವದ [illegible] ಸ್ವಲ್ಪ ತಡೆಯಿರಿ, ಆಲೋಚನೆ ಮಾಡಿಕೊಳ್ಳುತ್ತೇನೆ ಎಂದೆ. ನೀರು...? [illegible]

[illegible]

ಎಂದು ಕಾರ್ಯಾರಂಭಿಸಿದರು. [illegible]

"ಇದರಲ್ಲೋ ಒಳಿದು ಕಿಡಿಯೂ ಕಿಡಿ [illegible]"

[illegible]


ಸಮಾಶ್ವಾಸನಗಳು

ಅಣುಶಕ್ತಿ ಸಂಬಂಧಿತ ಚರ್ಚೆ ಮಾಡುವಾಗ, [illegible] ಯಲ್ಲೂ [illegible] ಮತ್ತು ಆ ಕಾರಣದಿಂದ ಅಮೇರಿಕದ ಸಾಮರ್ಥ್ಯವನ್ನು [illegible] ನಮ್ಮಲ್ಲಿ ಕಾಪಿಟ್ಟಿರುವ [illegible] ದೆಂದು ತಿಳಿಯಬಹುದು ಎಂಬ [illegible] ವನ್ನು ಅಧ್ಯಕ್ಷ [illegible] ದರು.

"ನವೀನವೂ ಹೆಚ್ಚು ಪರಿಣಾಮಕಾರಿಯೂ ಆದ ಅಣು ಬಾಂಬುಗಳು ಕಳೆದ ವರ್ಷ [illegible] ಪ್ರದೇಶದಲ್ಲಿರುವ [illegible] ಎಟೋಲ್ ಎಂಬಲ್ಲಿ ಪರೀಕ್ಷಿಸಲ್ಪಟ್ಟವು; ಅವನ್ನೀಗ "[illegible]" ಉತ್ಪಾದಿಸಲಾಗುತ್ತಿದೆ ಎಂದು [illegible] ವರದಿಯೇ ಸ್ವತಃ ಸಾರುತ್ತದೆ. [illegible] ದಲ್ಲಿ ನಾಗರಿಕತೆಗೆ ಅಮೇರಿಕವಿತ್ತ ಕೊಡುಗೆ ಮಾಡಿದ್ದು ಮನಸ್ಸಿನಲ್ಲಿ ಅಚ್ಚೊತ್ತಿಯದಿರುವಾಗ ಯಾವನಾದರೊಬ್ಬನು "ಸಮಾಶ್ವಾಸನಗಳು" ಎಂಬುದರ ಅರ್ಥದ ಮುಂದೆ ಪ್ರಶ್ನಾರ್ಥಕ ಚಿಹ್ನವನ್ನಿಟ್ಟರೆ ಅದು ಕ್ಷಮ್ಯ ಎಂದು ಹೇಳದಿರಲಾರೆನು. ರುಂಡಮಾಲಾಧರನಾದ ಘೋರ ರಾಕ್ಷಸನೊಬ್ಬನು ತನ್ನ ಆಯುಧಗಳ [illegible] ತತೆಯ ಬಗ್ಗೆ ಸಮಾಧಾನವನ್ನು ವ್ಯಕ್ತಪಡಿಸುವಂತೆ ಅಟ್ಟಹಾಸವನ್ನು ವ್ಯಕ್ತಪಡಿಸಿದರೆ ಅದರಿಂದ ಶರಣಾರ್ಥಿಗಳಿಗೆ ಭಯ ನಿವಾರಣೆಯಾದೀತೇ? ಅದು "ಸಮಾಶ್ವಾಸನ" ವೆನಿಸಬಲ್ಲುದೇ? ಆಯುಧಗಳ ಮೂಲಕ ಶಾಂತಿಯನ್ನು ತರಲು ಮನುಷ್ಯನಿಗೆ ಸಾಧ್ಯವಿಲ್ಲ ಎಂಬುದನ್ನು ಇತ್ತೀಚಿನ ಎರಡು ಮಹಾಯುದ್ಧಗಳು ನಿಃಸಂಶಯವಾಗಿ ಸಿದ್ಧಾಂತಿಸಿವೆ. ಮಾನವನ ನೈತಿಕ ವ್ಯಕ್ತಿತ್ವವು ಅವನ ಬೌದ್ಧಿಕ ಸಿದ್ಧಿಯ ಶಿಖರಗಳಿಂದ ಬಹಳ ಕೆಳಗುಳಿದಿದೆ. [illegible] ಮತ್ತು [illegible] ಯಲ್ಲಿ ಸತ್ಪ್ರವೃತ್ತಿಗೆ ಅನುಕೂಲ ಪರಿಸ್ಥಿತಿಯೊದಗಬೇಕಾದರೆ ಮೊದಲನೆಯದು [illegible] ದನ್ನು [illegible] ಬೇಕು ಅಂದು [illegible] ಸಂಸ್ಕೃತಿಗೇ [illegible] ದೆಂದು ನಿರೀಕ್ಷಿಸುವುದು ತಪ್ಪಾಗುತ್ತದೆ. ಅದುದರಿಂದ ಒಬ್ಬ ಮೈಮೇಲೆ ಬೀಳುವ [illegible] ತಾನು ಕಾಳಗದ [illegible] ಸಿದ್ಧನಿರುವನೆಂಬುದನ್ನು, [illegible] ಗಳನ್ನು [illegible] ವನ್ನು [illegible] ಸ್ವಲ್ಪ ಎಡೆಗುಡಿಯಾಗುವುದೇ ಸರಿ. [illegible] ಇದನ್ನು ಕಂಡು ಎಚ್ಚರಿಕೆಯುಂಡಿರಲಿ!

[illegible]

[illegible]



ಪೂರ್ವದಲ್ಲಿ ನವಜರ್ಮನಿಯ ಉದಯ

ಅಂತಾರಾಷ್ಟ್ರೀಯ ರಾಜಕಾರಣದಲ್ಲಿ ಪಾಶ್ಚಾತ್ಯ ಪೌರಸ್ತ್ಯರೆಂಬ ಇಬ್ಬಣಗಳಾದುದರ [illegible] ಚಟುವಟಿಕೆಗಳ ಬಗ್ಗೆ ಪರಸ್ಪರ ಅಪಪ್ರಚಾರ [illegible] ಇಂದಿನ [illegible] ನಿಜಸ್ಥಿತಿಯ ಪರಿಚಯ ಮಾಡಿಕೊಳ್ಳಲು [illegible]. ಆದರೆ [illegible] ಕ್ಷೇತ್ರಗಳನ್ನು ಸ್ವತಃ ಸಂದರ್ಶಿಸಿ ಬಂದವರಿಗೆ [illegible] ಅರಿವಾಗುವುದು. ಪೂರ್ವ ಜರ್ಮನಿ[illegible]ಲ್ಲಿ ರಶಿಯನ್ನರು ಸರ್ವಾಧಿಕಾರಿತ್ವದ ದಬ್ಬಾಳಿಕೆ ನಡೆಸಿ ಪ್ರಜೆಗಳನ್ನು ದುಃಸಹ ಸಂಕಟ[illegible] ಎಂಬ ಅಭಿಪ್ರಾಯವುಂಟಾಗುವಂತೆ ನಡೆಸಿದ ಪ್ರಚಾರ ಸತ್ಯದಿಂದ [illegible] ಅಲ್ಲಿಗೆ ಹೋಗಿಬಂದ ಕಮಾಂಡರ್ ಎಡ್ಗರ್ ಪಿ. ಯಂಗರು "ನ್ಯಾಶನಲ್ ಹೆರಾಲ್ಡ್" ನಲ್ಲಿ ಬರೆದಿದ್ದಾರೆ.

[illegible] ಪಶ್ಚಿಮ ಜರ್ಮನಿಯಲ್ಲಿ, [illegible] ಅನುಮತಿಯನ್ನು ಪಡೆದು ಬೇಸರ ಹೊಂದಿದವರು ಪೂರ್ವ ಜರ್ಮನಿಗೆ ಹೋಗಬೇಕು. ನಾನು ಅದೇ ವೇಳೆಗೆ ಜುಲೈಯಲ್ಲಿ ಮೂರು [illegible] ಹಾಗೆ ಪೂರ್ವ ಜರ್ಮನಿಯಲ್ಲಿ ತಿರುಗಾಡಿ ಬಂದೆ. ನನ್ನಂತೆ ಇತರರು ಆಗಾಗ ಅಲ್ಲಿಗೆ ಹೋಗುವುದಿಲ್ಲ. ಬಹುಶಃ ಅವಕ್ಕೆ ಸೋವಿಯಟ್ಟಿನ ಅನುಮತಿಪತ್ರ [illegible]

ಸಾರ್ವಜನಿಕರ ಕೈಗೆ ಅಧಿಕಾರ

ಪೂರ್ವ ಜರ್ಮನಿಯಲ್ಲಿ ಪ್ರಜಾಪ್ರಭುತ್ವ ಸುರಕ್ಷಿತವಾಗಿ ಬಾಳಲಾರದು ಎಂದು [illegible]

[illegible] ನಿರ್ಭಯವಾಗಿಯೂ ನಿರ್ಭೀಕರವಾಗಿಯೂ ಬಾಳುವುದು ಕೇವಲ ಪೂರ್ವ ಜರ್ಮನಿಯಲ್ಲಲ್ಲದೆ ಪಶ್ಚಿಮ ಜರ್ಮನಿಯಲ್ಲೂ ಅನೇಕರ ಅಪೇಕ್ಷೆಯಾಗಿದೆ.

ಅರ್ಥಿಕ ಪುನರುದ್ಧಾರ

ಪೂರ್ವದ ಹೊಸ ಜರ್ಮನಿಯ ಜನಪ್ರಿಯತೆಗೆ ಮತ್ತೂ ಒಂದು ಕಾರಣವುಂಟು. ಅದೆಂದರೆ ಅರ್ಥಿಕ ಪುನರುದ್ಧಾರವನ್ನು ಸಾಧಿಸಿದ್ದು. ಜನರಲ್ಲಿ ಅರ್ಥಿಕ ವೈಷಮ್ಯವಿಲ್ಲದಂತೆ ಮಾಡಿ ಕ್ರಮೇಣ ಪ್ರತಿಯೊಬ್ಬನ ಸ್ಥಿತಿಯೂ ಉತ್ತಮಗೊಳ್ಳುವ ಅನುಕೂಲವನ್ನು ಕಲ್ಪಿಸಿದ್ದು ಬಹಳ ಮಹತ್ವದ ಕೆಲಸವಾಗಿದೆ. ಅಲ್ಲಿ ನಿರುದ್ಯೋಗ ಸಮಸ್ಯೆ ಇಲ್ಲವೇ ಇಲ್ಲ. ಪೂರ್ವ ಪ್ರಶಿಯ, ಪೋಲೆಂಡ್ ಮತ್ತು ಜೆಕೊಸ್ಲೋವೇಕಿಯಗಳಿಂದ ಬಹಿಷ್ಕೃತರಾದ ಪ್ರಜೆಗಳನ್ನು ಅಲ್ಲಿ ಸ್ವಾಗತಿಸಿ ಅವರಿಗೆ ಇರಲು ಅನುಕೂಲ ಮಾಡಿಕೊಡಲಾಗಿದೆ. ಜರ್ಮನ್ ಅರ್ಥಿಕ ಸಮಿತಿಯ (eutsche Wirtschaftskommission) ನೇತೃತ್ವದಲ್ಲಿ ಉತ್ಪಾದನಕಾರ್ಯ ಜಯಪ್ರದವಾಗಿ ಸಾಗಿದೆ. ಪಶ್ಚಿಮದ ಅಧಿಕಾರಿಗಳು ಅಡ್ಡಿಅತಂಕಗಳನ್ನೊಡ್ಡುತ್ತಿದ್ದರೂ ಪೂರ್ವ ಜರ್ಮನಿಯ ವಿದೇಶವ್ಯಾಪಾರ ಈಗ ಕಳೆದ ವರ್ಷಕ್ಕಿಂತ ಐದು ಪಟ್ಟು ಹೆಚ್ಚಾಗಿದೆ. ಜೊತೆಗೆ, ಸುತ್ತುಮುತ್ತಲಿನ ದೇಶಗಳೊಡನೆ ಸ್ನೇಹಿತ ದೃಷ್ಟಿಯಿಂದ ಅನೇಕ ಅರ್ಥಿಕ ಮತ್ತು ಔದ್ಯಮಿಕ ಒಪ್ಪಂದಗಳನ್ನು ಮಾಡಿಕೊಂಡು ಪರಿಸ್ಥಿತಿಯನ್ನು ಹಿಡಿತದಲ್ಲಿ ತರಲಾಗಿದೆ. ಇದರ ಮೇಲೆ ಉತ್ಪಾದನೆಯನ್ನು ಹೆಚ್ಚಿಸುವುದರ ಸಲುವಾಗಿ Activist Movement ಉತ್ಸಾಹಿಗಳ ಚಳವಳಿ ಎಂಬುದನ್ನು ನಡೆಸಲಾಗುತ್ತಿದೆ. ಈ ಕಾರ್ಯದಲ್ಲಿ ಸ್ವತಂತ್ರ ಜರ್ಮನಿಯ ಮಜೂರ ಸಂಘದವರು ಬಹಳ ದುಡಿದಿದ್ದಾರೆ ಅವರು ಪರಸ್ಪರ ಸಹಾಯಕ ಸಂಘಗಳನ್ನು ತೆರೆದು ತನ್ಮೂಲಕ ವ್ಯಾಪಾರದಲ್ಲಿ ಅನಿರ್ಬಂಧವನ್ನು ತಂದು ಅಂಗಡಿಗಳು ಸಾಮುಗ್ರಿಗಳಿಂದ ತುಂಬಿ ಯಥಾವತ್ತಾಗಿ ಕೆಲಸ ಸಾಗುವಂತೆ ಮಾಡಿದ್ದಾರೆ. ಕೂಲಿಕಾರರ ಜೇಬಿನಲ್ಲಿ ಹಣ ತುಂಬಿದೆ. ಆ ಸಾಮಾನುಗಳನ್ನು ಅವರು ಕೊಳ್ಳಬಲ್ಲವರಾಗಿದ್ದಾರೆ. ಅಲ್ಲಲ್ಲಿ ಜನತಾಕಾರಖಾನೆಗಳನ್ನು ಸ್ಥಾಪಿಸಲಾಗಿದೆ. ಅವುಗಳಲ್ಲಿ ಲಾಭದ ನ್ಯಾಯ್ಯವಾದ ಅಂಶವನ್ನು ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಗಳಿಗಾಗಿ ತೆಗೆದಿಡಲಾಗುತ್ತಿದೆ. ಕಾರ್ಯದಲ್ಲಿ ವಿಶೇಷ ಪ್ರೌಢಿಯನ್ನು [illegible] ಬೋನಸ್ಸನ್ನು ಕೊಡುವ ರೂಢಿಯನ್ನು ತರಲಾಗಿದೆ. ಕೆಲಸಗಾರರು ಸವೇತನ ರಜಾದಿನಗಳನ್ನು ಅಲ್ಪವೆಚ್ಚದಿಂದ ಹೆಚ್ಚು ಸುಖ ಸಾಧನಗಳನ್ನು ಪಡೆದು ಅನುಭವಿಸಲು ಅನುಕೂಲ ಮಾಡಿ[illegible]

[illegible]

11/120	5/36	67/360	7/30	101/360	59/180	27/72	-11/45	-71/360	-3/20	-37/360	-1/18	-1/120	7/180	31/360
39/360	11/60	83/360	5/18	13/40	67/180	-37/180	-1/5	-11/72	-19/180	-7/120	-1/90	13/360	7/72	[illegible]
[illegible]/72	41/180	11/40	29/90	133/360	-15/72	-73/360	-7/45	-13/120	-11/180	-1/72	1/30	29/360	23/180	2/15
9/40	49/180	23/72	11/30	-19/90	-59/360	-19/120	-1/9	-23/360	-1/60	11/360	7/90	1/8	49/360	8/45
97/360	57/180	131/360	-77/360	-1/6	29/180	-41/360	-1/15	-7/360	1/36	3/40	11/90	61/360	21/120	2/9
113/360	13/36	-13/60	-61/360	-11/90	-7/60	-5/72	-1/45	1/40	13/180	43/360	1/6	31/180	79/360	4/15
43/120	-79/360	-31/180	-1/8	-43/360	-13/180	-5/40	1/45	5/72	7/60	59/360	19/90	13/60	13/72	14/45
-2/9	-7/40	-23/180	-29/360	-3/90	-1/36	7/360	1/15	41/360	29/180	15/72	77/360	47/180	37/120	16/45
-8/45	-47/360	-1/12	-7/90	-11/360	+1/60	23/360	1/9	19/120	37/180	91/360	31/120	11/36	127/360	-9/40
-2/15	-31/360	-7/180	-1/30	1/72	11/180	13/120	7/45	73/360	1/4	23/90	109/360	7/20	-41/180	-13/72
-4/45	-1/24	-13/360	1/90	7/120	19/180	11/72	1/5	89/360	53/180	3/10	25/72	-83/360	-11/60	-49/360
-2/45	1/360	1/120	1/18	37/360	27/180	71/360	11/45	21/72	107/360	31/90	-7/30	-67/360	-5/36	-11/120
0	-1/180	19/360	1/10	53/360	7/36	87/360	13/45	121/360	41/120	-17/72	-17/90	-51/360	-17/180	-17/360
2/45	1/20	7/72	13/90	23/120	43/180	103/360	1/3	61/180	-43/180	-23/120	-13/90	-7/72	-1/20	-1/360
17/360	17/180	51/360	17/90	17/72	51/180	119/360	17/45	-87/360	-7/36	-53/360	-1/10	-19/360	-1/180	1/24

ಭಿನ್ನರಾಶಿಗಳ ಏಕಚಕ್ರ ಇದರಲ್ಲಿ ಯಾವ ಕಡೆಯಿಂದ ಕೂಡಿದರೂ ಮೊತ್ತವು ಒಂದು ಪೂರ್ಣಾಂಶವಾಗುತ್ತದೆ ಇದರ ನಿರ್ಮಾತ ಲಾರೆನ್ಸ್ ಬ್ಲಾಸ್ಟೀನ್ ಚಾರಲ್ಸ್‌ಟನ್ ಎಂಬವನು

ಯಲ್ಲಿ ಜನರು ಮುಂದುವರಿದರೆ ಪೂರ್ವ ಪಶ್ಚಿಮಗಳೆರಡರಲ್ಲಿ ಯಾವುದಕ್ಕೂ ಅಪಾಯಕಾರಿಯೆನಿಸದ ಸ್ವತಂತ್ರ ಸಂಯುಕ್ತ ಜರ್ಮನಿ ನಿರ್ಮಿತವಾಗಿ ಶಾಂತಿಯು ಚಿರಕಾಲ ಎಲ್ಲೆಡೆಯಂತೆ ಅಲ್ಲಿ ನಿಲ್ಲಬಲ್ಲುದೆಂದು ನನಗೆನಿಸುತ್ತದೆ.

ಮಧ್ಯಮ ವರ್ಗದವರಿಗೆ

(೭ ನೇ ಪುಟದಿಂದ)

ಆರೈಕೆಯನ್ನೂ ಮಾಡಬೇಕಾಗುತ್ತದೆ. ಈ ರೀತಿಯಾಗಿ ಹೆಣ್ಣುಮಕ್ಕಳ ಕೆಲಸ ಇಮ್ಮಡಿಯಾಗುವದು. ಮಧ್ಯವರ್ಗದ ಕುಟುಂಬಗಳಲ್ಲಿಯೂ ಹೆಣ್ಣುಮಕ್ಕಳು ಕೆಲಸ ಮಾಡಬೇಕಾಗುವದರಿಂದ ಅವರ ಪರಿಸ್ಥಿತಿ ಅಂತೆಯೇ ಇದೆ. ಆದರೆ ನೀವು ಹಾಗೆ ಮಾಡಲಾರಿರಿ. ಗಾಂಧೀಜಿಯ ಮರಣದ ತರುವಾಯ ಕೂಡಿದ್ದ ಸಮ್ಮೇಲನದಲ್ಲಿ ಈ ವಿಷಯದ ಬಗ್ಗೆ ಬಹಳ ಚರ್ಚೆ ನಡೆಯಿತು. ಗಂಡಸು ಹೆಂಗಸರಿಗೆ ಸಮಾನ ಸ್ಥಾನಗಳಿರಬೇಕೆಂದು ನಿರ್ಧರಿಸಲಾಯಿತು. ಆದುದರಿಂದ ಕುಟುಂಬ ಸಹಿತ ನಾವು ಉತ್ಪಾದನ ಕಾರ್ಯದಲ್ಲಿ ತೊಡಗಬೇಕಾದರೆ, ಸಾಮೂಹಿಕ ಅಡಿಗೆ ಮತ್ತು ಮಕ್ಕಳ ಸಾಮೂಹಿಕ ಲಾಲನೆ ಪಾಲನೆಗೆ ನಾವು ಒಪ್ಪಲಿಕ್ಕೆಬೇಕು ನಯೀ ತಾಲೀಮಿಯಲ್ಲಿ ಸಾಮೂಹಿಕ ಅಡಿಗೆ ಅವಶ್ಯವಾಗಿದೆ. ಕಮ್ಯೂನಿಸ್ಟ ಸಮಾಜದ ಸಂಬಂಧದಲ್ಲಿ ಗಾಂಧೀಜಿ ತೋರಿದ ಮಾರ್ಗವಿದು ಇವೆರಡನ್ನು ಒಮ್ಮೆಲೆ ನಾವು ಕೈಕೊಳ್ಳದಿದ್ದರೆ ಸ್ವಾತಂತ್ರ್ಯ ಮತ್ತು ವರ್ಗಯುದ್ಧದ ಈ ಕಾಲದಲ್ಲಿ ಹೆಣ್ಣುಮಕ್ಕಳ ಚಳವಳಿಯು ಬಲಿತು ಅವರು ಸಮಾನ ಸ್ಥಾನಗಳನ್ನು ಬೇಡುವರು ಗಂಡಸರಿಗಿಂತ ಹೆಣ್ಣುಮಕ್ಕಳಿಂದಲೆ ನನ್ನೀ ಸೂಚನೆಗೆ ವಿರೋಧ ಬರಬಹುದೆಂಬುದು ನನಗೆ ಗೊತ್ತುಂಟು. ಪ್ರಾರಂಭದಲ್ಲಿ ಇದು ಸ್ವಾಭಾವಿಕ. ಆದರೆ ಈ ವಿಷಯದ ಬಗ್ಗೆ ನೀವು ಆಳವಾಗಿ ವಿಚಾರಿಸಿ, ಈ ಯುಗದಲ್ಲಿ ವೈಯಕ್ತಿಕ ವಿಚಾರಗಳು ಬೇಗನೆ ಸಾಮಾಜಿಕ ವಿಚಾರಗಳಲ್ಲಿ ಪರಿವರ್ತನ ಹೊಂದುವವೆಂಬುದನ್ನು, ಕಾಲಮಾನ ಪರಿಸ್ಥಿತಿಯನ್ನು ತಿಳಿದುಕೊಂಡು ಯಾವನು ವರ್ತಿಸುವದಿಲ್ಲವೊ ಅವನು ಪ್ರವಾಹದಲ್ಲಿ ಸಿಕ್ಕು ಮುಳುಗುವನೆಂಬುದನ್ನು ಮುಂದಿಟ್ಟು ಮಾಡಿಕೊಳ್ಳಬೇಕು.

ಸುಧಾರಕ ಸಂಘದ ಸದಸ್ಯರಾದ ನೀವು [illegible]

ಕೆಲವರೇನೋ ಇವನ್ನೆಲ್ಲ ಬಿಟ್ಟುಗೊಡಲು ಸಿದ್ಧತೆಯನ್ನು ತೋರಿಸುವರು. ಆದರೆ ತಮ್ಮ ಹೆಂಡಂದಿರಿಗೆ ಹಾಗೆ ಮಾಡುವದಾಗಲಿಕ್ಕಿಲ್ಲ ಎಂದು ವಾದಿಸುವರು ಈ ಪರಿಸ್ಥಿತಿಯಲ್ಲಿ ನೀವು ಹಳ್ಳಿಗರಿಗೆ ಚಟಗಳನ್ನು ಬಿಟ್ಟುಬಿಡಿರೆಂದು ಹೇಗೆ ಉಪದೇಶಿಸಬಲ್ಲಿರಿ ಎಂದು ನಾನವರಿಗೆ ಕೇಳಬಯಸುತ್ತೇನೆ. ತಾವು ಚಟಗಳನ್ನು ಬಿಡಲು ಸಿದ್ಧರಾಗದೆ ಎರಡನೆಯವರಿಗೆ ಚಟಗಳನ್ನು ಬಿಟ್ಟುಬಿಡಿರೆಂದು ಕೇಳುವುದೆಂದರೆ ಸ್ವತಃ ಇತಿಹಾಸವನ್ನೋದದೆ ಎರಡನೆಯವರಿಗೆ ಅದನ್ನು ಕಲಿಸಬಯಸಿದಂತೆಯೇ ಸೈ. ವಿದ್ಯಾರ್ಥಿಗಳು ಇಂಥವರಿಂದ ಶಿಕ್ಷಣ ಪಡೆಯುವದಿಲ್ಲ ಇಷ್ಟೇ ಅಲ್ಲ, ಅವರನ್ನು ನೋಡಿ ನಗುವರು

ಈ ದೃಷ್ಟಿಯಿಂದ ನೀವು ವಿಚಾರ ಮಾಡಿ ನಿಮ್ಮ ಜೀವನಮಾರ್ಗದಲ್ಲಿ ಅವಶ್ಯವಾದ ಬದಲಾವಣೆ ಮಾಡಿಕೊಳ್ಳಲು ನಿರ್ಧರಿಸಿರಿ. ನಮ್ಮ ದುರ್ಬಲತೆ ಹೆಚ್ಚೆಂಬುದನ್ನು ನಾನು ಬಲ್ಲೆ; ನಾವೆಲ್ಲ ದುರ್ಬಲ ಮನೋವೃತ್ತಿಯವರು. ಆದುದರಿಂದಲೆ ಪ್ರತಿಯೊಬ್ಬನು ಅವುಗಳ ಬಗ್ಗೆ ವಿಚಾರಮಾಡಲಿ ಈ ಪತ್ರದಲ್ಲಿಯ ವಿಷಯಗಳ ಬಗ್ಗೆ ನಿಮ್ಮ ಕುಟುಂಬದಲ್ಲಿಯ ಜನರ ಕೂಡ ವಿಚಾರವಿನಿಮಯ ಮಾಡಿರಿ ಅನಂತರ ನಿಮ್ಮ ಯೋಗ್ಯತೆಗನುಸಾರವಾಗಿ ನಡೆಯಲು ನಿರ್ಧರಿಸಿರಿ ಎಂದು ನಾನು ಸೂಚಿಸುತ್ತೇನೆ. ಪ್ರತಿಯೊಂದು ವಿವರದಲ್ಲಿಯೂ ಎಲ್ಲರೂ ಒಂದೇ ಬಗೆಯ ನಿರ್ಧಾರಕ್ಕೆ ಬರಬೇಕೆಂಬ ನಿಯಮವಿಲ್ಲ ಸಹಜವಾಗಿ ಮಾಡಬಲ್ಲೆವೆಂದೆನಿಸುವದಕ್ಕಿಂತ ಸ್ವಲ್ಪ ಹೆಚ್ಚಿಗೆ ಮಾಡಲು ನೀವು ನಿರ್ಧರಿಸಬೇಕು. ನಿಮ್ಮ ಕೇಂದ್ರದಲ್ಲಿಯವರೆಲ್ಲರೂ ಅನುಸರಿಸತಕ್ಕಂತಹದೇನಾದರೂ ಅದರಲ್ಲಿ ಇರಲಿಕ್ಕೆಬೇಕು. ಕಳೆದ ಜನೆವರಿ ೩೦ ಕ್ಕೆ ಸೇವಾಗ್ರಾಮದಲ್ಲಿಯ ಕಾರ್ಯಕರ್ತರು ತೆಗೆದುಕೊಂಡ ಪ್ರತಿಜ್ಞೆಯ ಪ್ರತಿಯೊಂದನ್ನು ನಾನು ಇದರ ಸಂಗಡ ಕಳಿಸುತ್ತೇನೆ. (ಇದನ್ನು ಬೇರೆಕಡೆ ಕೊಟ್ಟಿದೆ) ಆದರೆ ನೀವು ಅನುಸರಿಸಬೇಕೆಂದಲ್ಲ; ಅದು ನಿಮಗೆ ಮಾರ್ಗದರ್ಶನ ಮಾಡಬಲ್ಲದು. ಒಂದೇ ಒಂದು ಸಣ್ಣ ಹೆಜ್ಜೆಯನ್ನು ನೀವು ಮುಂದೆ ಇಡಲು ನಿರ್ಧರಿಸಿ ಬಿಟ್ಟು ಬಿಡದೆ ಮುಂದೆ ಸಾಗಿದರೆ ಬಹಳವನ್ನು ನೀವು ಕಾಲದಲ್ಲಿ ಸಾಧಿಸಬಹುದು. ಜಯಂತಿಯ (ಸಪ್ಟಂಬರ ೧೮ ರಿಂದ ಅಕ್ಟೋಬರ ೨ ವರೆಗೆ) [illegible] ಈ ಬಗ್ಗೆ ವಿಚಾರಮಾಡಿ ಕೊನೆಯ ದಿನ ಏನು ಮಾಡಬೇಕೆಂಬ ನಿರ್ಧಾರ ಕೈಕೊಳ್ಳಿರಿ. [illegible] ಜನೆವರಿ ೩೦ ರ ವರೆಗೆ [illegible] ಬಗೆಯ ಸಿದ್ಧತೆಯನ್ನು ಮಾಡಿಕೊಳ್ಳಿರಿ. [illegible] ಗಾಂಧೀಜಿಯ ಕೊನೆಯ [illegible] ಪ್ರತಿಜ್ಞೆಯನ್ನು ಕೈಕೊಳ್ಳಿರಿ. [illegible] ಬರೆಯುತ್ತಿದ್ದೇನೆ. [illegible]

(ಹಿಂದುಸ್ಥಾನಿಯಿಂದ ಅನುವಾದಿತ)

ಸಮಸ್ತ ಭಾರತ

ಮುಂಬಯಿ

ಸರಕಾರೀ ಬಂಗಲೆಗಳಲ್ಲಿ ವಾಸಿಸುತ್ತಿರುವ ಅಧಿಕಾರಿಗಳೆಲ್ಲ ತಮ್ಮ ಬಂಗಲೆಗಳ ಆವರಣಗಳಲ್ಲಿ ಕಾಯಿಪಲ್ಲೆ ಮತ್ತು ಆಹಾರ ಧಾನ್ಯಗಳನ್ನು ಬೆಳೆಯಬೇಕೆಂದು ಮುಂಬಯಿ ಸರಕಾರವು ಆದೇಶವನ್ನಿತ್ತಿದೆ. ಅದರಂತೆ ಜಿಲ್ಲಾ ಒಕ್ಕಲುತನ ಅಧಿಕಾರಿಗಳ ಸಲಹೆ ಪಡೆದು ಸಾರ್ವಜನಿಕರಿಗೆ ಬೇಕಾಗುವ ಸಸಿಗಳನ್ನು ತಯಾರಿಸುವ ಕಾರ್ಯವನ್ನು ಕೈಕೊಳ್ಳಬೇಕೆಂದೂ ತಿಳಿಸಲಾಗಿದೆ.

ಮುಂಬಯಿ ಸರಕಾರದವರು ೭೫ ಕೋಟಿ ರೂ ಗಳ ಪಂಚವಾರ್ಷಿಕ ಯೋಜನೆಯೊಂದನ್ನು ಸಿದ್ಧಪಡಿಸಿದ್ದಾರೆ– ಇದರಲ್ಲಿ ಕೆರೆ ಕಾಲುವೆ ಯೋಜನೆ, ಒಕ್ಕಲುತನ ಸುಧಾರಣೆ, ವಸತಿ ಸೌಕರ್ಯ, ರಸ್ತೆಗಳ ಸುಧಾರಣೆ, ಹಿಂದುಳಿದ ವರ್ಗದವರ ಸುಧಾರಣೆ, ಹಾಲಿನ ಪೂರೈಕೆ ಮೊದಲಾದವುಗಳಿವೆ. ಗ್ರಾಮೋದ್ಧಾರಕ್ಕೆ ಹೆಚ್ಚು ಮಹತ್ವ ಕೊಡಲಾಗಿದೆ, ಎಂದು ಮುಂತಾಗಿ ಮುಖ್ಯ ಮಂತ್ರಿ ಖಾಶಾ ಸಾಹೇಬರು ಬಾನುಲಿ ಭಾಷಣದಲ್ಲಿ ವಿವರಿಸಿದರು.

ಭಾರತದಲ್ಲಿ ಕೆಲ ವರ್ಷಗಳಲ್ಲಿಯೇ ಕೂಲಿಕಾರರ ರಾಜ್ಯವನ್ನು ಸ್ಥಾಪಿಸುವದಾಗಿ ಸಾಮ್ಯವಾದೀ ಪಕ್ಷವು ನಿರ್ಧರಿಸಿದೆಯೆಂದು ಸಾಮ್ಯವಾದೀ ಪಕ್ಷದ ಧುರೀಣರಾದ ಶ್ರೀ ಜಯಪ್ರಕಾಶ ನಾರಾಯಣರು ಮುಂಬಯಿ ಧಕ್ಕೆ ಕೆಲಸಗಾರರ ಸಭೆಯಲ್ಲಿ ಮಾತಾಡುತ್ತ ಹೇಳಿದರು. ಕಾಂಗ್ರೆಸ್ಸು ಬಂಡವಲುದಾರರೊಡನೆ ಕೂಡಿಕೊಂಡು ಕೂಲಿಕಾರರ ಹಿತ ಸಾಧಿಸುವದನ್ನು ಮರೆತು ಬಿಟ್ಟಿದೆಯೆಂದೂ ಅವರು ಹೇಳಿದರು.

ಭಾರತ ಸರಕಾರದ ಆಹಾರ ಸಮೀಕ್ಷಕರ ತಂಡೆಯವರು ನಿಧನ ಹೊಂದಿದ ಸುದ್ದಿ ಬಂದದ್ದರಿಂದ ಪುಣೆಯಲ್ಲಿಯ ಶ್ರೀ ಪಾಟೀಲರ ಕಾರ್ಯಕ್ರಮವನ್ನು ರದ್ದುಗೊಳಿಸಲಾಯಿತು. ಅವರು ನಾಗಪುರಕ್ಕೆ ಹೋದರು.

ಮುಂಬಯಿಯ ಶ್ರೀ ಎಸ್. ವಿ ಗೋಖಲೆಯೆಂಬವರು ೧೬||"×೧೦||" ಆಕಾರದ ಒಂದು ಕಾಗದದ ಮೇಲೆ ಭಗವದ್ಗೀತೆಯ ೭೦೦ ಶ್ಲೋಕಗಳನ್ನು ಕೆಲಾಪೂರ್ಣವಾಗಿ ಬರೆದಿದ್ದಾರೆ. ಇದನ್ನು ಸೀಸಿನ ಕಡ್ಡಿ ಮತ್ತು ಬಣ್ಣದಿಂದ ಮಾತ್ರ ಬರೆಯಲಾಗಿದೆ. ಅಕ್ಷರಗಳೆಲ್ಲ ಸಾಮಾನ್ಯವಾಗಿವೆ. ರಥದ ಬದಿಯಲ್ಲಿ ನಿಂತು ಅರ್ಜುನನು ಭಕ್ತಿಭಾವದಿಂದ ಶ್ರೀಕೃಷ್ಣನ ಉಪದೇಶ ಕೇಳುವ ಚಿತ್ರವನ್ನು ಹೃದಯಂಗಮವಾಗಿ ತೆಗೆಯಲಾಗಿದೆ.

ರ ಪಾಯಿಯ ಬೆಲೆ ಇಳಿಸಿದ್ದರ ಪರಿಣಾಮವಾಗಿ, ಮುಂಬಯಿಯಲ್ಲಿ ಮೊದಲೆ ಎರಡು ದಿನ ಅಫೀರಿಕೆಯ ಸರಕುಗಳ ಬೆಲೆ ವಿಪರೀತ ಏರಹತ್ತಿದೆ ನೂರಕ್ಕೆ ಸರಾಸರಿ ೩೦ ರಷ್ಟು ಬೆಲೆ ಹೆಚ್ಚಿದೆ. ಪೆನ್ಸಿಲಿನ್ ಮತ್ತು ಇತರ ಔಷಧಗಳಿಗೆ ಬೇಡಿಕೆ ಹೆಚ್ಚಿಗಿದ್ದಿತು. ಕಳೆದ ವಾರಕ್ಕಿಂತ ಬೆಲೆ ಇಮ್ಮಡಿಯಾಗಿದೆ. ಕಾಜಿನ ಸಾಮಾನುಗಳ ಬೆಲೆನೂರಕ್ಕೆ ೧೦ರಷ್ಟು, ಉಳಿದ ವಿಲಾಸ ಭೋಗಗಳ ಸಾಮಾನುಗಳ ಬೆಲೆ ೨೦–೨೫ ರಷ್ಟು ಏರಿವೆ. ಫೋರ್ಡ ಕಂಪನಿಯವರು ಈಗ ಸಂಗ್ರಹದಲ್ಲಿ ಇದ್ದ ಮೋಟಾರ ಗಳ ಬೆಲೆ ಏರಿಸುವದಿಲ್ಲೆಂದು ಸಾರಿದ್ದಾರೆ.

ಮುಂಬಯಿ ನಾಗರಿಕ ಪೂರೈಕೆ ಖಾತೆಯ ಪ್ರಕಟಣೆಯವರಿಂದ ಹೊರಟಿದ್ದು ಮುಂಬಯಿ ಪ್ರಾಂತದಿಂದ ಹೊರಗಡೆ ಸಕ್ಕರೆಯನ್ನು ಕಳಿಸಬಾರದೆಂದು ವಿಧಿಸಲಾಗಿದೆ ಕಲ್ಲು ಸಕ್ಕರೆ ಹಾಗು ಬೋರಾ ಸಕ್ಕರಿಗೂ ಈ ನಿರ್ಬಂಧ ಅನ್ವಯಿಸುವದು.

ಕಾಶ್ಮೀರ ಸಂಬಂಧದಲ್ಲಿ ಭಾರತವು ತಾಳಿದ ಧೋರಣವು ದುರ್ಬಲವಾಗಿಲ್ಲ, ಪಾಕಿಸ್ತಾನದ ದಾಳಿಯ ಧೋರಣದಿಂದಲೆ ಕಾಶ್ಮೀರಿಗಳು ಪಾಕಿಸ್ತಾನ ಸೇರಲು ಒಪ್ಪಲಿಲ್ಲ ಮುಂತಾಗಿ ಡಾ. ಕೇಸಕರರು ಪುಣೆಯ ಸಭೆಯೊಂದರಲ್ಲಿ ಹೇಳಿದರು.

ಅಹಮದಾಬಾದ ಪೋಲೀಸ ದಳದಲ್ಲಿ ಹೆಣ್ಣು ಮಕ್ಕಳನ್ನು ತೆಗೆದುಕೊಂಡು ಹೆಣ್ಣುಮಕ್ಕಳ ಪೋಲೀಸ ದಳವನ್ನು ಸಂಘಟಿಸಲಾಗಿದೆ. ಮಹಿಳಾ ಅಪರಾಧಿಗಳ ಶೋಧ, ಅಪಹೃತ ಮಹಿಳೆಯರ ಶೋಧ ಮುಂತಾದ್ದನ್ನು ಮಹಿಳಾ ಪೋಲೀಸ ದಳದವರು ನಿರ್ವಹಿಸುವರು.

ಹೊಸದಿಲ್ಲಿ

ಆಂಗ್ಲೋ ಇಂಡಿಯನ್ನರ ಧುರೀಣರೂ ಭಟನಾ ಸಮಿತಿಯ ಸದಸ್ಯರೂ ಆಗಿರುವ ಫ್ರ್ಯಾಂಕ್ ಅಂಥನಿಯವರು ಹೊಸದಿಲ್ಲಿಯಲ್ಲಿ ೧೮ ಕ್ಕೆ ಮೋಟಾರ ಅಪಘಾತಕ್ಕೊಳಗಾಗಿ ಗಾಯಗೊಂಡಿರುವರು. ಅಂಥನಿಯವರ ಕಾರಿನೆದುರಿಗೆ ಬರುತ್ತಿದ್ದ ವಾಹನದ ರಭಸದಿಂದ ಕಣ್ಣುಕತ್ತಿ, ದಾರಿಯೇ ಕಾಣದಂತಾಗಲು ಅವರ ಮೋಟಾರಕ್ಕೆ ಅಪಘಾತ ಸಂಭವಿಸಿತು.

ಉಪಯುಕ್ತ ದನಗಳ ವಧೆಯನ್ನು ಕೂಡಲೆ ಪ್ರತಿಬಂಧಿಸಬೇಕೆಂದು ಕೇಂದ್ರ ಸರಕಾರವು ಎಲ್ಲ ಪ್ರಾಂತ ಮತ್ತು ಸಂಸ್ಥಾನ ಸರಕಾರಗಳಿಗೆ ಆದೇಶಪತ್ರವನ್ನು ಕಳಿಸಿದ್ದಾರೆಂದು ತಿಳಿಯುತ್ತದೆ.

ಧಾರವಾಡ ಆಕಾಶವಾಣಿ ಕೇಂದ್ರದಲ್ಲಿಯ ಯಂತ್ರವು ಕಡಿಮೆ ಶಕ್ತಿಯುದಿದೆಯೆಂಬ ತಪ್ಪು ತಿಳಿವಳಿಕೆ ಆದಂತೆ ತೋರುತ್ತದೆ. ಅಲ್ಲಿಯ ಯಂತ್ರವು ನಾಗಪುರ, ವಿಜಯವಾಡಾ, ಅಹಮ್ಮದಾಬಾದ ಮೊದಲಾದ ಕೇಂದ್ರಗಳಲ್ಲಿಯ ಯಂತ್ರದಷ್ಟೇ ಶಕ್ತಿ ಸಂಪನ್ನವಾಗಿದ್ದು ರಾತ್ರಿ ೨೦೦ ಮೈಲುಗಳ ವರೆಗೆ ಅದು ಕೇಳಿಸಬಹುದು. ಹೆಚ್ಚು ಶಕ್ತಿಯ ಯಂತ್ರ ಸಾಮಗ್ರಿಗಳು ಬಂದ ಕೂಡಲೆ ಧಾರವಾಡ ಕೇಂದ್ರದಲ್ಲಿಯ ಯಂತ್ರಗಳನ್ನೂ ಹೆಚ್ಚು ಶಕ್ತಿಯುಳ್ಳವುಗಳನ್ನಾಗಿ ಮಾಡಲಾಗುವದೆಂದು ಸ್ಪಷ್ಟೀಕರಿಸಲಾಗಿದೆ.

ಕಾಶ್ಮೀರ ಪ್ರಕರಣದ ಸಂಬಂಧದಲ್ಲಿ ಕಾಶ್ಮೀರ ಸಮಿತಿಯ ಭದ್ರತಾ ಮಂಡಳಕ್ಕೆ ವರದಿಯನ್ನೊಪ್ಪಿಸಿದೆ. ಮಧ್ಯಸ್ಥನ ನೇಮಕಕ್ಕೆ ಪಾಕಿಸ್ತಾನ ಒಪ್ಪಿಗೆ ಕೊಟ್ಟಿದ್ದು ಭಾರತಕ್ಕೆ ಮಾತ್ರ ಕೊಟ್ಟಿರುವದು ಸಾಧ್ಯವಾಗಲಿಲ್ಲ ಎಂದು ಮುಂತಾಗಿ ಆ ವರದಿಯಲ್ಲಿ ಹೇಳಲಾಗಿದೆ.

ಭಾರತ ಸರಕಾರದ ಸುದ್ದಿ ಮತ್ತು ಬಾನುಲಿ ಖಾತೆಗಳ ಮಂತ್ರಿಗಳಾದ ಮಾನ್ಯ ದಿವಾಕರರಾಯರು ಕಾಶ್ಮೀರ ರಾಷ್ಟ್ರೀಯ ಪರಿಷತ್ತಿಗಾಗಿ ಜಮ್ಮೂಕ್ಕೆ ೨೪.೨೫ ಕ್ಕೆ ಮುಖ್ಯ ಮಂತ್ರಿ ಪಂಡಿತ ನೆಹರು ಮೊದಲಾದವರೊಂದಿಗೆ ಹೋಗುವರು. ಅನಂತರ ಅವರು ೨೬ ಕ್ಕೆ ನಾಡಹಬ್ಬದಲ್ಲಿ ಭಾಗವಹಿಸಲು ಹೈದರಾಬಾದಕ್ಕೆ ಬರುವರು. ಅಲ್ಲಿಂದ ೨೭ ಕ್ಕೆ ಬೆಂಗಳೂರು ಮೈಸೂರಿಗೆ ಹೋಗಿ ದಸರಾ ಮಹೋತ್ಸವದಲ್ಲಿ ಮೈಸೂರು ಸರಕಾರದ ಅತಿಥಿಗಳೆಂದು ಭಾಗವಹಿಸುವರು. ಅವರು ೪ ನೇ ತಾರೀಕಿಗೆ ಮರಳಿ ದಿಲ್ಲಿಯನ್ನು ಮುಟ್ಟುವರು.

ಪಾಕಿಸ್ತಾನ

ಪಾಕಿಸ್ತಾನ ಸರಕಾರವು ತನ್ನ ರೂಪಾಯಿಯ ಮೌಲ್ಯವನ್ನು ತಗ್ಗಿಸಬಾರದೆಂದು ನಿರ್ಧರಿಸಿದೆ. ಪಾಕಿಸ್ತಾನ ಮಂತ್ರಿಮಂಡಳವು ಆರುದು ಗಂಟೆ ಈ ವಿಷಯದ ಚರ್ಚೆ ಮಾಡಿ ಈ ನಿರ್ಣಯಕ್ಕೆ ಬಂದಿತು.

ಅಫಗಾಣಿಸ್ತಾನದಲ್ಲಿ ಪಾಕಿಸ್ತಾನದ ರಾಯಭಾರಿಯಾಗಿರುವ ಆಯ ಆಯ ಚುಂದ್ರಿಗಾರ ಇವರ ಲಕ್ಷಗಟ್ಟಲೆ ರೂಪಾಯಿ ಬೆಲೆ ಬಾಳುವ ಅಹಮ್ಮದಾಬಾದಿನಲ್ಲಿಯ ಆಸ್ತಿಯನ್ನು ನಿರಾಶ್ರಿತರ ಆಸ್ತಿ ಕಾಯದೆಯನ್ವಯ ಅಹಮದಾಬಾದಿನಲ್ಲಿಯ ಆಸ್ತಿಯನ್ನು ನಿರಾಶ್ರಿತರ ಆಸ್ತಿ ಕಾಯದೆಯನ್ವಯ ಅಹಮದಾಬಾದದ ಕಲೆಕ್ಟರರು ವಶಪಡಿಸಿಕೊಂಡಿದ್ದಾರೆ.

ಶ್ರೀಮತಿ ಸಾಥೀಬಾಯಿ ದಾಮೋದರ ಠಾಕರಸಿ ಮಹಿಳಾ ವಿದ್ಯಾಲಯಕ್ಕೆ ಮುಂಬಯಿ ಸರಕಾರದವರು ಅಧಿಕೃತವಾಗಿ ಮನ್ನಣೆ ಕೊಡಲಿರುವರು.

ಆಹಾರ ಧಾನ್ಯಗಳು ಕೆಡದಂತೆ ಸಂಗ್ರಹಿಸಿಡುವದಕ್ಕಾಗಿ ಹಿಂದುಸ್ತಾನದಲ್ಲಿ ಸುಮಾರು ಒಂದು ನೂರು ಸುಸಜ್ಜಿತ ಉಗ್ರಾಣಗಳನ್ನು ಕಟ್ಟಲು ಹಿಂದುಸ್ತಾನ ಸರಕಾರವು ನಿರ್ಧರಿಸಿದ್ದು ಈಗಾಗಲೆ ಐದನ್ನು ಕಟ್ಟಲು ಪ್ರಾರಂಭವಾಗಿದೆ. ಇದರಲ್ಲಿ ಒಟ್ಟಿಗೆ ಬಂಡವಲುದಾರ ೨ ೩ ಕೋಟಿ ರೂ. ಪಾಕಿದ್ದಾರೆ. ೧೦ ಲಕ್ಷ ಮಣ ಆಹಾರ ಧಾನ್ಯಗಳನ್ನು ಇವುಗಳಲ್ಲಿ ಸಂಗ್ರಹಿಸಲಾಗುವದು.

ಮುಂಬಯಿಯಲ್ಲಿ ೨೦.೨೧ ಕ್ಕೆ ಅತಿರೇಕ ಮಳೆ ಬಿದ್ದುದರಿಂದ ವಾಹನಗಳ ಸಂಚಾರಕ್ಕೆ ತಡೆಯುಂಟಾಯಿತು. ೨೨ ಗಂಟೆಗಳಲ್ಲಿ ೫೮ ಇಂಚು ಹೆಚ್ಚು ಇಂಚು ಮಳೆ ಬಿದ್ದಿತು. ೫೦ ವರ್ಷಗಳ [illegible]

ಮದ್ರಾಸ

[illegible]

[illegible]

ಕರ್ನಾಟಕದಲ್ಲಿ

ಧಾರವಾಡ

ಹುಬ್ಬಳ್ಳಿಯ ಎಂ. ಎಸ್. ಎಂ. ರೇಲ್ವೆಯಲ್ಲಿ ಪಾರ್ಸಲ ಕಾರಕೂನರಾಗಿದ್ದ ಎಸ್. ಪಿ ಕಾಶನೂರ ಇವರು ಎಂಟಾಣೆ ತೆಗೆದುಕೊಂಡರೆಂದು ನಡೆದ ಪ್ರಕರಣದಲ್ಲಿ ನಿರ್ದೋಷಿಗಳೆಂದು ಬಿಡುಗಡೆ ಮಾಡಲ್ಪಟ್ಟರು. ಅದೇ ರೀತಿ ಧಾರವಾಡ ತಾಲೂಕ ಕಚೇರಿಯ ಶ್ರೀ ಆರ್. ಎಸ್. ಲಕ್ಷ್ಮೇಶ್ವರ ಇವರ ಮೇಲಿನ ಲಂಚದ ಪ್ರಕರಣವೂ ಪುರಾವೆಗಳಿಲ್ಲದ್ದ ಮೂಲಕ ಕಿತ್ತುಹಾಕಲಾಯಿತು.

ಕಳೆದ ೧೮ ನೇ ತಾರೀಕಿನ ದಿನ ಗದಗಿನಲ್ಲಿ ಶ್ರೀಮದ್ರಂಭಾಪುರಿ ಸ್ವಾಮಿಗಳ ಅಡ್ಡಪಲ್ಲಕ್ಕಿ ಮಹೋತ್ಸವವು ಮುಂಜಾನೆ ೮ ರಿಂದ ಸಾಯಂಕಾಲ ೭ ರ ವರೆಗೆ ವಿಜೃಂಭಣೆಯಿಂದ ಜರುಗಿತು. ಸಾಯಂಕಾಲ ಅಬ್ಬೀಗೇರಿ ಆಯಿಲ್ ಮಿಲ್ಲಿನಲ್ಲಿ ಸಭೆ ಸೇರಿ ಸ್ವಾಮಿಗಳಿಗೆ ಸ್ವಾಗತವನ್ನು ಕೋರಲಾಯಿತು. ಆಯಾ ಜನರು ತಮ್ಮ ಧರ್ಮದ ಕಾರ್ಯಗಳಲ್ಲಿ ನಿರತರಾಗಬೇಕೆಂದು ಸ್ವಾಮಿಗಳು ಉಪದೇಶಿಸಿದರು.

ಜಿಲ್ಹೆಯ ಬಹುಶಃ ಎಲ್ಲ ಭಾಗದಲ್ಲಿ ಮಳೆ ಬಿದ್ದ ಸುದ್ದಿ ಬಂದಿದೆ. ಹುಬ್ಬಳ್ಳಿಯಲ್ಲಿ ೧೯ ರಿಂದ ೩ ದಿನ ಒಂದೇ ಸವನೆ ಮಳೆ ಹತ್ತಿದೆ ದೊಡ್ಡ ಮಳೆಯಲ್ಲದಿದ್ದರೂ ಸಣ್ಣ ಶೆಳಕುಗಳು ಬಿಟ್ಟೂಬಿಡದೆ ಬರುತ್ತಿವೆ

ಬೆಳಗಾವಿ

ಯಕ್ಕುಂಡಿಯ ಪೀರ ದಿಲಾವರ ಸಾಹೇಬರ ಉರುಸಿನಲ್ಲಿ ಊರ ಹದ್ದಿಯಲ್ಲಿ ಯಾವದೇ ಪ್ರಾಣಿವಧೆಯಾಗಬಾರದೆಂದು ಪ್ರಾಂತ ಸಾಹೇಬರು ವಿಧಿಸಿದ್ದಾರೆ.

ಬೆಳವಡಿ ಪ್ರಕರಣದ ಸಂಬಂಧದಲ್ಲಿ ಜಿಲ್ಹಾ ಕಲೆಕ್ಟರರು ಶ್ರೀ ಶಿವಾಪ್ರಮಪ್ಪ ಹರಕುಣಿಯವರಿಗೆ ಕೊಟ್ಟ ಆಶ್ವಾಸನದ ಬಗ್ಗೆ ಈ ರೀತಿ ಸ್ಪಷ್ಟೀಕರಣ ಮಾಡಿದ್ದಾರೆ. ಶಿವಾಪ್ರಮಪ್ಪನವರ ಹತ್ತರ ಈ ಪ್ರಕರಣದ ಸಂಬಂಧದಲ್ಲಿ ನಿಮ್ಮ ಲಕ್ಷಕ್ಕೆ ಬಾರದಿದ್ದ ಕೆಲ ಅಂಶಗಳನ್ನು ತೋರಿಸಿಕೊಟ್ಟದ್ದಾದರೆ ಪ್ರಕರಣದ ಪುನರ್ವಿಚಾರ ಮಾಡುವಿರಾ ಎಂದು ಶ್ರೀ ಅಂಗಡಿ ಹಣ್ಮಬಸಪ್ಪನವರು ಕೇಳಿದ್ದಕ್ಕೆ ಮಾಡುವದಾಗಿ ತಾವು ಆಶ್ವಾಸನ ಕೊಟ್ಟಿದ್ದೇವೆ ಎಂದು ಮುಂತಾಗಿ ಕಲೆಕ್ಟರರು ಹೇಳಿರುವರು.

ದಕ್ಷಿಣ ಭಾಗದ ಅಸಿಸ್ಟಂಟ ಕಮೀಶನರರಾಗಿದ್ದ ಶ್ರೀ ವಿ. ಎಸ್. ಹಿರೇಮಠ ಇವರು ರಾಣೇಬಿನ್ನೂರ ಭಾಗದ ಪ್ರಾಂತ ಆಫೀಸರರಾಗಿದ್ದು ಶ್ರೀ ಭಾಗೋಜಿಯವರು ಅಸಿಸ್ಟಂಟ ಕಮೀಶನರರಾಗಿರುವರು.

ಬಾಚ್ಯಾಪುರದ ನಿಷ್ಠಾವಂತ ಕಾಂಗ್ರೆಸ್ಸಿಗರಾಗಿದ್ದ ಶ್ರೀ ವಾಮನ ಜೋಶಿಯವರು ಹುದಲಿಯಲ್ಲಿ ಜಲೋದರದಿಂದ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ೪೨ ರ ಚಳವಳಿಯ ಕಾಲಕ್ಕೆ ಅವರಿಗೆ ಕ್ಷಯದ ಬಾಧೆ ತಟ್ಟಿ ಈಗ ಗುಣವಾಗಿದ್ದಿತು. ಕಳೆದ ವರ್ಷವೇ ಇವರು ವಿವಾಹ ಮಾಡಿಕೊಂಡಿದ್ದರು. ಪರಮಾತ್ಮನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲಿ.

ರೇಡಿಯೋ ಸಂಬಂಧದಲ್ಲಿ ೨॥ ವರ್ಷಗಳವರೆಗೆ ಅಮೇರಿಕೆಯಲ್ಲಿ ಅಭ್ಯಾಸಮಾಡುವದಕ್ಕಾಗಿ ಶ್ರೀ ಟಿ. ಆರ್. ಕೇಳಕಾರ ಇವರು ಅಲ್ಲಿಗೆ ತೆರಳಿದರು. ಇವರು ಪುಣೆಯಲ್ಲಿ ರೇಡಿಯೋ ವ್ಯವಸಾಯ ಮಾಡುತಿದ್ದರು.

ವಿಜಾಪುರ

ವಿಜಾಪುರ ಜಿಲ್ಹೆಯ ಪ್ರಸಿದ್ಧ ಅಗ್ರ ಮನೆತನಕ್ಕೆ ಸೇರಿದ್ದ ವೇ. ರಾಜಾಚಾರ್ಯ ಹುಣ್ಣೂರ ಇವರು ಕೊಲ್ಹಾಪುರದಲ್ಲಿ ಕಳೆದ ೧೫ ಕ್ಕೆ ಸ್ವರ್ಗಸ್ಥರಾದರು. ಇವರಿಗೆ ಯೋಗ್ಯೇದವು ಮಹೋದ್ಗತವಾಗಿದ್ದಿತಲ್ಲದೆ ಯಾಜ್ಞಿಕದಲ್ಲಿಯೂ ಇವರು ಒಳ್ಳೆ ತಜ್ಞರಾಗಿದ್ದರು.

ತೆಲಗಿಯಲ್ಲಿ ಕನ್ನಡ ೫-೬ ೭ ಇಯತ್ತೆ ಕಲಿಯುವ ಹರಿಜನರ ಬಡ ಹುಡುಗರಿಗೆ ಪುಕ್ಕಟೆ ಊಟ ವಸತಿಗಳ ಏರ್ಪಾಡು ಮಾಡಿದೆ ಇದರ ಲಾಭ ಪಡೆಯಬಯಸುವವರು ಹೆಡ್ ಮಾಸ್ತರರಿಗೆ ಬರೆದುಕೊಳ್ಳಬೇಕು.

ವಿಜಾಪುರ ಜಿಲ್ಹೆಯ ಬಹು ಭಾಗದಲ್ಲಿ ಕಳೆದ ವಾರ ಚೆನ್ನಾಗಿ ಮಳೆಯಾದ ಸುದ್ದಿಯಿದೆ. ೧೯ ರಿಂದ ೩ ದಿನ ವಿಜಾಪುರ ಬಾಗಲಕೋಟೆಗಳಲ್ಲಿ ಸುಮಾರು ೪ ಇಂಚು ಮಳೆ ಬಿದ್ದದ್ದರಿಂದ ಅನೇಕ ಮನೆಗಳು ಬಿದ್ದಿವೆ ಹಲವಾರು ಜನರು ಗಾಯಗೊಂಡು ಒಂದೆರಡು ಮರಣಗಳೂ ಸಂಭವಿಸಿದ ಸುದ್ದಿ. ಮೋಟರ ವ್ಯವಹಾರ ನಿಂತುಹೋಗಿತ್ತು.

ಉತ್ತರ ಕನ್ನಡ

ಕಾಳೀನದಿಯಲ್ಲಿ ತಾರೀದೋಣಿಯೊಂದು ಮುಗುಚಿಬಿದ್ದು ಇಬ್ಬರು ಮರಣ ಹೊಂದಿದ್ದು ಉಳಿದವರನ್ನು ಪಾರುಮಾಡಲಾಯಿತು.

ನಾಜಾಳಿಯಲ್ಲಿ ಬಹಳ ಹಾವಳಿ ನಡೆಸಿದ್ದ ೧೩॥ ಫೂಟ ಉದ್ದವಿದ್ದ ದೊಡ್ಡ ಹುಲಿಯೊಂದನ್ನು ಕಳೆದ ೧೩ ಕ್ಕೆ ವಿರೋಬಾರಾಣೆ ಮೊದಲಾದವರು ಕೂಡಿ ಗುಂಡಿಕ್ಕಿ ಕೊಂದರು. ಕಳೆದ ೬ ೭ ತಿಂಗಳಲ್ಲಿ ಈ ಹುಲಿಯು ಅನೇಕ ದನಗಳನ್ನು ತಿಂದು ಹಾಕಿದ್ದಿತು.

ಕಾರವಾರದ ಗೃಹರಕ್ಷಕ ದಲದವರು ಹೆಚ್ಚು ಆಹಾರ ಬೆಳೆಯಿರಿ. ಯೋಜನೆಗೆ ತಮ್ಮ ನೆರವನ್ನು ನೀಡಲಿದ್ದಾರೆ. ದಲದ ಸೆಕೆಂಡ ಕಮಾಂಡೆಂಟರಾದ ಶಾಮರಾವ ಕೈಕಿಣಿಯವರು ತಮ್ಮ ೩೦ ಗುಂಠೆ ಸ್ಥಳವನ್ನು ಕೊಡಲಿದ್ದು ಅದರಲ್ಲಿ ಕಾಯಿಪಲ್ಲೆ ಮೊದಲಾದ್ದನ್ನು ಬೆಳೆಯಲಾಗುವದು. ಗೊಬ್ಬರವನ್ನು ತಯಾರಮಾಡಲಾಗುವದು. ಗೃಹರಕ್ಷಕ ದಲದವರೇ ಸ್ವತಃ ಈ ಕೆಲಸಮಾಡುವರು.

ಕಾರವಾರದಲ್ಲಿ ಮಲ್ಲಾಪುರ ಮೊದಲಾದ ಕೆಲ ಹಳ್ಳಿಗಳಲ್ಲಿ ಅನೇಕ ಭತ್ತದ ಗದ್ದೆಗಳಲ್ಲಿ ಸಸಿಗಳಿಗೆ ತೆನೆಯ ಬದಲು ಉದ್ದದಂಟುಗಳು ಬಂದಿವೆಂದೂ ಇಂಥ ಹೊಲಗಳು ಸುಮಾರು ೫೦-೬೦ ಎಕರೆಯಷ್ಟಾಗಬಹುದೆಂದೂ ತಕರಾರು ಕೇಳಬರುತ್ತದೆ. ಕಾರವಾರ ಮಾಮಲೇದಾರರಿಗೆ ಈ ಬಗ್ಗೆ ತಿಳಿಸಲಾಗಿದೆಯಂತೆ

ಜಿಲ್ಹೆಯಲ್ಲಿ ಒಂದೇ ಸವನೆ ಮಳೆಹತ್ತಿದ್ದರಿಂದ ಕಾಳೀನದಿಯ ಉತ್ತರಭಾಗದಲ್ಲಿಯ ಭತ್ತ ಕೊಯ್ಯಲು ತಡೆಯುಂಟಾಗಿದೆ ಇದರಿಂದ ಬೆಳೆ ಕಡಮೆ ಬರಬಹುದು ಎಂಬಂಜಿಕೆ

ಹೈದರಾಬಾದ

ಕ್ಷಯರೋಗ ತಜ್ಞರ ತಂಡವೊಂದು ಡೆನ್ಮಾರ್ಕದಿಂದ ಹೈದರಾಬಾದಿಗೆ ಅಲ್ಲಿಯ ಡಾಕ್ಟರರನ್ನು ತರಬೇತುಗೊಳಿಸಲು ಬೇಗನೆ ಬರಲಿದೆ. ಪ್ರಾರಂಭದಲ್ಲಿ ಹೈದರಾಬಾದಿನಲ್ಲಿ ಅನಂತರ ಉಳಿದ ಕಡೆ ಈ ಕೆಲಸ ಪ್ರಾರಂಭವಾಗುವದು. ಹೈದರಾಬಾದ ಸರಕಾರದ ಆಮಂತ್ರಣದ ಮೇರೆಗೆ ಈ ತಜ್ಞರು ಬರಲಿರುವರು.

ಲಾಯಕ ಅಲ್ಲಿ ಮಂತ್ರಿಮಂಡಲದಲ್ಲಿ ಅರ್ಥ ಮಂತ್ರಿಯಾಗಿದ್ದ ನವಾಬ ಮೊಯಿನ ಜಂಗ ಮತ್ತು ಅವರ ಹೆಂಡತಿಯ ಒಡೆತನದ ಸ್ಥಾವರ ಆಸ್ತಿ ಶೇರು ಠೇವು ಮೊದಲಾದವುಗಳನ್ನು ನಿರಾಶ್ರಿತರ ಆಸ್ತಿಯ ಮೇಲ್ವಿಚಾರಕರು ವಶಪಡಿಸಿಕೊಂಡಿದ್ದಾರೆಂದು ಪತ್ರಿಕಾ ಪ್ರಕಟನೆ ಹೊರಟಿದೆ. ಆಗ ಮತ್ತೊಬ್ಬ ಮಂತ್ರಿಯಾಗಿದ್ದ ಇಕ್ರಮುಲ್ಲಾ, ಕರಾಚಿಯಲ್ಲಿ ಎಜಂಟ ಜನರಲ್ ಆಗಿದ್ದ ಮಾಷ್ತಾಕ ಅಹಮ್ಮದ, ಲಂಡನದಲ್ಲಿ ಎಜಂಟ ಜನರಲ್‌ರಾಗಿದ್ದ ನವಾಬ ಮೀರ ಜಂಗ ಬಹಾದ್ದೂರ, ವಕ್ತದ (ಹಿಂದೀ) ಸಂಪಾದಕ ಅಬ್ದುಲ್ ರಹಿಮಾನ ಮೊದಲಾದ ೫೪ ಜನರ ಆಸ್ತಿಯನ್ನು ವಶಪಡಿಸಿಕೊಳ್ಳಲಾಗಿದೆ.

ಹೈದರಾಬಾದದ ಪೈಗಂಬರ ಪಾಸಿಯಾದ ಸಾಲಾರಜಂಗರ ಜಾಗೀರಿನ ದುಂಡಿಗಲ್ಲ ತಹಸೀಲನ್ನು ಮತ್ತು ಬೊಕ್ಕಸ ವಶಪಡಿಸಿಕೊಳ್ಳಲಾಯಿತು. ಸಂಸ್ಥಾನದಲ್ಲಿಯ ಇತರ ಪ್ರದೇಶಗಳಲ್ಲಿ ಸಾಲಾರಜಂಗರ ಆಸ್ತಿ ೧೫೦೦ ಚದುರ ಮೈಲು ಇದ್ದು ಅದನ್ನೆಲ್ಲ ವಶಪಡಿಸಿಕೊಳ್ಳಲಾಗುವದು, ಈ ಜಾಗೀರಿಯಲ್ಲಿ ಒಟ್ಟು ೨ ಲಕ್ಷ ಜನಸಂಖ್ಯೆಯಿದ್ದು ೧೬ ಲಕ್ಷ ರೂ. ಉತ್ಪನ್ನವಿದೆ. ಸರಕಾರವು ನೇಮಿಸಿದ ಸಮಿತಿಯವರು ಈ ಜಾಗಿರಿಯ ವ್ಯವಸ್ಥೆ ನೋಡಿಕೊಳ್ಳುವರು.

ಕನ್ನಡ ಸಂಸ್ಥಾನ

ಚಿತ್ರದುರ್ಗ ಶಾಖೆಯ ಸೇವಾದಲ ಕಾರ್ಯಕರ್ತರು ಕಳೆದವಾರ ಮೋಚಿಹಳ್ಳಿಗೆ ಹೋಗಿ ದೇವಸ್ಥಾನದ ಮುಂದಿನ ರಸ್ತೇದ ಕೆಲಸ ಪ್ರಾರಂಭಮಾಡಿ ಚರಂಡಿ ತೋಡಲು ಗುರುತು ಮಾಡಿದ್ದಲ್ಲದೆ ಊರ ಜನರಿಂದ ಕೂಡಿಕೊಂಡು ಒತ್ತರಿಸಟ್ಟ ಹಳ್ಳದಲ್ಲಿಯ ಹೊಲಸ ಜಾಗೆಯನ್ನು ಸ್ವಚ್ಛಮಾಡಿದರು. ಹರಿಜನಕೇರಿಯ ಮುಖ್ಯರಸ್ತೆಯನ್ನು ಒಡ್ಡರಸಟ್ಟ ರಸ್ತೆಗೆ ಸೇರಿಸಿದರು.

ಮೈಸೂರ ಮಹಾರಾಜರ ಖಾಸಗಿ ವೆಚ್ಚಕ್ಕೆ ಪ್ರತಿವರುಷ ೨೬ ಲಕ್ಷ ರೂಪಾಯಿ ಕೊಡಲು ನಿರ್ಧರಿಸಲಾಗಿದೆಯಂತೆ. ಇನ್ನು ಮೇಲೆ ಇದರಲ್ಲಿ ಯಾವ ಕಡಿತ ಮಾಡಲಿಕ್ಕಿಲ್ಲೆಂದು ಹೇಳಲಾಗುತ್ತದೆ. ಕಳೆದ ವರುಷ ಮಹಾರಾಜರಿಗೆ ಖಾಸಗಿ ವೆಚ್ಚವೆಂದು ೪೬ ಲಕ್ಷ ರೂಪಾಯಿ ಕೊಡಲಾಗಿತ್ತು.

ದಕ್ಷಿಣ ಕನ್ನಡ

ಮದ್ರಾಸ ಸರಕಾರದ ಸಾರ್ವಜನಿಕ ಖಾತೆಯ ಮಂತ್ರಿಗಳಾದ ಶ್ರೀ ಎಂ ಭಕ್ತವತ್ಸಲಂ ಅವರು ದಿನಾಂಕ ೧೪ ರಿಂದ ೧೮ ರ ವರೆಗೆ ದಕ್ಷಿಣ ಕನ್ನಡ ಜಿಲ್ಹಾ ಸಂಚಾರ ಮಾಡಿ ಹಿಂತೆರಳಿದರು. ಅವರು ದಿನಾಕ ೧೪ ರಂದು ಸಂಜೆಗೆ ಕಾಸರಗೋಡಿನಲ್ಲಿ ಬಂದಿಳಿದರು ಅಂದು ಸಂಜೆ ಅಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿ ಮರುದಿನ ಸಿರಿಯ, ಸುಳ್ಯ ಪುತ್ತೂರುಗಳನ್ನು ಸಂದರ್ಶಿಸಿಕೊಂಡು ಸಂಜೆಗೆ ಮಂಗಳೂರಿಗೆ ಬಂದರು ಮರುದಿನ ದಿನಾಂಕ ೧೬ ರಂದು ಪೂರ್ವಾಹ್ನ ಕಲೆಕ್ಟರರ ಕಚೇರಿಯಲ್ಲಿದ್ದು ಸಂಘ ಸಂಸ್ಥೆಗಳ ಮನವಿಗಳನ್ನು ಸ್ವೀಕರಿಸಿದರು. ಅಪರಾಹ್ನ ಮಂಗಳೂರಿನ ವಿದ್ಯುದ್ಧಾಮದಿರವನ್ನು ಸಂದರ್ಶಿಸಿ ಮಹಾತ್ಮಾ ಗಾಂಧೀಜಿಯ ಭಾವ ಚಿತ್ರ ಅನಾವರಣ ಮಾಡಿದರು. ಅಲ್ಲಿಂದ ವಾಣಿಜ್ಯ ಸಂಘದ ಭವನಕ್ಕೆ ಹೋಗಿ ಅವರಿತ್ತ ಬಿನ್ನವತ್ತಳೆಯನ್ನು ಸ್ವೀಕರಿಸಿದರು. ವಾಣಿಜ್ಯ ಸಂಘದ ಕೋರಿಕೆಗಳನ್ನು ಸಹಾನುಭೂತಿಯಿಂದ ಪರಾಮರಿಸುವುದಾಗಿ ತಿಳಿಸಿದರು. ಬಳಿಕ ಬಸ್ತಿ ಗಾರ್ಡನ್ ಬಾಲಕಿಯ ಶಾಲೆಯಲ್ಲಿ ನಡೆಯುವ ಸರಕಾರಿ ಮಹಿ ಅಭಿವೃದ್ಧಿ ಕೇಂದ್ರವನ್ನು ಸಂದರ್ಶಿಸಿ ಅವರ ಚಟುವಟಿಕೆಗಳನ್ನು ಪರಿಶೀಲಿಸಿ ಸ್ತ್ರೀಯರು ಮುಂದೆ ಬರಬೇಕಾಗಿ ಕೇಳಿಕೊಂಡರು. ಆ ಮೇಲೆ ಮಂತ್ರಿಗಳು ಫಾದರ್ ಮುಲ್ಲರರ ಧರ್ಮಾಸ್ಪತ್ರೆಯನ್ನೂ ಕುಷ್ಠರೋಗಿಗಳ ನಿಲಯಲನ್ನು ಸಂದರ್ಶಿಸಿದರು. ಬಳಿಕ ಮಂತ್ರಿಗಳು ದಕ್ಷಿಣ ಸಹಕಾರಿ ಬೇಂಕಿನ ಆಶ್ರಯದಲ್ಲಿ ನಡೆದು ಬರುವ ಪುಸ್ತಕ ಭಂಡಾರದ ಉದ್ಘಾಟನೆ ಮಾಡಿದರು. ಮರುದಿನ ಮಂತ್ರಿಗಳು ಮೂಡಬಿದ್ರೆ, ಕಾರ್ಕಳ ವಿಪ್ಪಿಗಳಿಗೆ ಹೋಗಿ ಮರಳಿ ಬಂದವರೇ ದಿನಾಂಕ ೧೮ ರಂದು ಮದ್ರಾಸಿನತ್ತ ತೆರಳಿದರು.

ದಕ್ಷಿಣ ಕನ್ನಡ ಮೋಟರ್ ಕೆಲಸಗಾರ ಯೂನಿಯನ್ನಿನ ಸಭೆಯೊಂದು ಮಂಗಳೂರಿನಲ್ಲಿ ಡಾ ನಾಗಪ್ಪಾಳ್ವರ ಅಧ್ಯಕ್ಷತೆಯಲ್ಲಿ ಜರಗಿದಾಗ ಸರಕಾರದ ನಿರ್ವಾರ್ದನ್ನು ಜಿಲ್ಹೆಯ ಬಸ್ಸು ಕಂಪನಿಗಳು ಕೊಡುವಂತೆ ಸರಕಾರವು ಒತ್ತಾಯಿಸಬೇಕು ಈ ಸಂಘವನ್ನು ಕೆಲಸಗಾರರ ಪ್ರಾತಿನಿಧಿಕ ಸಂಸ್ಥೆಯೆಂದು ಅಂಗೀಕರಿಸಬೇಕೆಂದು ಮುಂತಾದ ನಿರ್ಣಯಗಳಾದುವು.

ಮಂಗಳೂರು ನಗರ ಸಭೆಯು ದಿನಾಂಕ ೧೨ ರಂದು ಜರಗಿದಾಗ ಈ ನಗರಕ್ಕೆ ಬಂದಿರುವ ನಿರಾಶ್ರಿತರಿಗಾಗಿ ತಾತ್ಕಾಲಿಕವಾಗಿ ಅಂಗಡಿಗಳನ್ನು ಕಟ್ಟಿಸುವರೆ ರೂ ೪೬೫೦ ನೇ ಮಂಜೂರು ಮಾಡಿ ಸ್ಥಳಕ್ಕಾಗಿ ಕಲೆಕ್ಟರರನ್ನು ಕೇಳುವ ನಿರ್ಧಾರವಾಯಿತು. ನಗರದ ನಾನಾ ಸ್ಥಳಗಳಲ್ಲಿರಿಸಬೇಕಾದ ೧೬ ಪಾದರಸ-ವಿದ್ಯುತ್ ದೀಪಗಳಿಗಾಗಿ ಬೇಕಾದ ೩ ಸಾವಿರ ರೂಪಾಯಿಗಳ ಪೈಕಿ ೮ ದೀಪಗಳಿಗಾಗಿ ೧೫೦೦ ರೂಪಾಯಿ ಮಂಜೂರಾಯಿತು.

ಮಂಗಳೂರ ಹಾ॥ ವಿ॥ ಟ್ರೈನಿಂಗ್ ವಿದ್ಯಾರ್ಥಿಗಳ ಸಾಹಿತ್ಯ ಸಂಘದ ಸಭೆಯು ದಿನಾಂಕ ೧೫ ರಂದು ಜಿಲ್ಲೆಯ ಹಿರಿಯ ಸಾಹಿತಿಗಳಾದ ಕಡೆಂಗೋಡ್ಲು ಶಂಕರ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿದಾಗ ಶ್ರೀಗಳಾದ ಐ. ಗೋಪಾಲಕೃಷ್ಣ ಭಟ್ಟ ಮತ್ತು ಐ. ಗೋಪಾಲ ಕೃಷ್ಣ ಭಟ್ಟ ಇವರು ತುಳು ನಾಡಿನ ಕನ್ನಡ ಸಾಹಿತಿಗಳು ಎಂಬ ವಿಚಾರದಲ್ಲಿ ಭಾಷಣವಿತ್ತರು.

ಸಂಘದ ನೇತೃತ್ವದಲ್ಲಿ ಸಾರ್ವಜನಿಕ ಸಭೆಯು

ಮಂಗಳೂರಿನ ಕೇಂದ್ರ ಬಯಲಲ್ಲಿ ಕಾರ್ಮಿಕರ ಮುಂದಾಳು ಶ್ರೀ ಅಯಿಲ್ಲೋರವರ ಅಧ್ಯಕ್ಷತೆಯಲ್ಲಿ ದಿನಾಂಕ ೧೮ ರಂದು ಸಂಜೆ ಜರಗಿತು ಆಗ ಮುಂಬಯಿಯ ಕಾರ್ಮಿಕ ನಾಯಕರಾದ ಶ್ರೀ ದಿನಕರ ದೇಸಾಯಿ ಕರ್ನಾಟಕ ಸಮಾಜವಾದಿ ಪಕ್ಷದ ಅಧ್ಯಕ್ಷ ಶ್ರೀ ಕಾಳಿಂಗನ ರಾಘವೇಂದ್ರರಾವ ಮತ್ತು ಕಾರ್ಯದರ್ಶಿ ಶ್ರೀ ಎಸ್ ಗೋಪಾಲ ಗೌಡರು ಸದ್ಯದ ರಾಜಕೀಯ ವಿಚಾರವಾಗಿಯೂ ಸಮಾಜವಾದಿ ಹುರಿಯಾಳುಗಳಿಗೆ ಮತವೀಯಬೇಕೆಂದೂ ಮಾತಾಡಿದರು.

ನಾನು ಮಾಡಿದ ಭಾಷಣ

ಲೇಖಕರು: ಶ್ರೀ ಅನಂತ ಪುರಾಣಿಕ, ಬಾಗಲಕೋಟೆ

ಬಿ. ಎ. ಕ್ಲಾಸಿನಲ್ಲಿ ಲೆಕ್ಚರ್ ಕೊಟ್ಟು ಸ್ಟಾಫ ರೂಂನಲ್ಲಿ ಆದೇ ಬಂದು ಉಸ್ಸಪ್ಪಾ ಎಂದು ಕುಳಿತಿದ್ದೆ. ಗೆಳೆಯ ಕುಲಕರ್ಣಿ ನನ್ನನ್ನು ಕೂಗುತ್ತ ಬಂದ. ನಂದೂ ಅವನದ್ದೂ ಲಂಗೋಟಿ ಗೆಳೆತನ. ಅವನು ದುರ್ದೈವದಿಂದ (?) ಟ್ರೇನಿಂಗ ಕಾಲೇಜಿನಲ್ಲಿ ಮಾಸ್ತರ ಆದ. ನಾನು ಸುದೈವದಿಂದ (?) ಕಾಲೇಜಿನಲ್ಲಿ ಪ್ರೊಫೆಸರ ಆದೆ. ಅವನೂ ನನ್ನಷ್ಟೇ ಅಭ್ಯಾಸ ಮಾಡಿಕೊಂಡಿದ್ದಾನೆ. ನನಗೂ ಅವನಿಗೂ ಇರುವ ಅಂತರ ಇಷ್ಟೇ—ನನಗೆ ಎಮ್. ಎ. ದ ಸರ್ಟಿಫಿಕೆಟ್ ಇದೆ. ಅವನಿಗೆ ಇಲ್ಲ. ನಿಜವಾಗಿ ಹೇಳಬೇಕೆಂದರೆ ಅಭ್ಯಾಸದಲ್ಲಿ ನನಗಿಂತಲೂ ಒಂದು ತೂಕ ಅವನದು ಹೆಚ್ಚೆ. ಈಗಿನ ಜಗತ್ತು ಸರ್ಟಿಫಿಕೇಟಿನ ಮೇಲೆಯೇ ನಡೆದಿಲ್ಲವೆ? ಅವನು ಕೇವಲ ಬಿ. ಎ. ಬಿ. ಟಿ. ಅದ್ದರಿಂದ ಟ್ರೇನಿಂಗ ಕಾಲೇಜ ಸೇರಬೇಕ್ಕಾಯಿತು. ಪುಣ್ಯಕ್ಕೆ ಇಬ್ಬರೂ ಒಂದೇ ಊರಲ್ಲಿಯೇ ಇದ್ದೇವೆ. ಕಲಿಯುವ ಮುಂದೆ ಕೂಡ ಬಿ. ಎ. ದವರೆಗೆ ಇಬ್ಬರೂ ಕೂಡಿಯೇ ಇದ್ದೆವು— ಅದೂ ಒಂದೇ ಕೋಣೆಯಲ್ಲಿ ನಮ್ಮ ಲಂಗೋಟಿತನ ಇಲ್ಲಿಯ ವರೆಗೆ ಬೆಳೆದಿತ್ತು— ಒಂದೇ ಸಿಗರೇಟನ್ನು ಇಬ್ಬರೂ ಕೂಡಿಯೇ ಸೇದುತ್ತಿದ್ದೆವು. ನಮಗೆ ಹುಟ್ಟಿನ ಗೊಂಬೆ ಎಂದು ಕೂಡ ಎಷ್ಟೋ ಜನ ಹಿಂದೆ ಅಂದುಕೊಂಡಿದ್ದಾರೆ.

"ಯಾಕಪ್ಪಾ ಮಹಾರಾಜರ ಸವಾರಿ ಉರಿಬಿಸಿಲಿನಾಗ ಬಿಜಯಂಗೈಸಿತ್ತು" ಎಂದೆ. ಅವನು ನನ್ನ ಮೇಲೆ ಒಂದು ಭಾರವನ್ನು ಹೊರಿಸಲು ಬಂದಿದ್ದ. ಟ್ರೇನಿಂಗ ಕಾಲೇಜದ ಚರ್ಚಾಕೂಟದ ಉದ್ಘಾಟನ ಸಮಾರಂಭ ನನ್ನಿಂದಾಗಬೇಕೆಂದು ಕೇಳಿಕೊಳ್ಳಲು ಬಂದಿದ್ದ. ಅವನೇ ಚರ್ಚಾಕೂಟದ ಚೇರಮನ್. ನಾನು ಮೊದಮೊದಲು "ಒಲ್ಲೆ" ಎಂದು ಹೇಳಿದೆ ಏಕೆಂದರೆ ಭಾಷಣದ ಯಶಸ್ಸು ಶ್ರೋತೃವೃಂದದ ಮೇಲೂ ಅವಲಂಬಿಸಿರುತ್ತದೆ. ಅದರಲ್ಲಿಯೂ ಕನ್ನಡ ಟ್ರೇನಿಂಗ ಕಾಲೇಜ ವಿದ್ಯಾರ್ಥಿಗಳ ಮುಂದೆ ಭಾಷಣ ಹೇಳುವದಂತೂ ಸ್ವಲ್ಪ ಹೆಚ್ಚು ದುಸ್ತರ ಕೆಲಸ. ಪಾಪ ಅವರದಾದರೂ ಏನು ತಪ್ಪು? ಮೊದಲಿನಿಂದಲೂ ಅವರ ಸ್ವಭಾವವೇ ಹಾಗಿರುತ್ತದೆ. ಒಮ್ಮೆಲೆ ಬದಲಿಸುವದು ಸಾಧ್ಯವೆ? ಇಲ್ಲಿ ನಾನು ಹೇಳುವದು ಅವರನ್ನು ಟೀಕಿಸಲಿಕ್ಕಿಲ್ಲ. ಇದ್ದ ಸಂಗತಿಯನ್ನು ಹೇಳುವೆ. ಅವರಿಗೆ ಯಾವಾಗ ನಗಬೇಕು, ಯಾವಾಗ ಗಂಭೀರವಾಗಿರಬೇಕು ಎಂಬುದೇ ತಿಳಿಯುವದಿಲ್ಲ. ನಗಬೇಕಾದ ಪ್ರಸಂಗದಲ್ಲಿ ಗಂಭೀರವಾಗಿ ಕುಳಿತು, ಗಂಭೀರ ಸನ್ನಿವೇಶದಲ್ಲಿ ನಕ್ಕು ಭಾಷಣಕಾರರನ್ನು ಗೊಂದಲದಲ್ಲಿ ಹಾಕುವ ಸಂಭವವುಂಟು. ಮೊನ್ನೆ ಮೊನ್ನೆ ನಮ್ಮೂರಲ್ಲಿ ಭಾಷಣಕಾರರೊಬ್ಬರು ರಾಘವಾಂಕನ ಹರಿಶ್ಚಂದ್ರ ಕಾವ್ಯದ ಮೇಲೆ ಭಾಷಣ ಮಾಡಿದರು. ರೋಹಿತಾಶ್ವ ಮರಣ ಹೊಂದಿದಾಗ ಚಂದ್ರಮತಿಯು ಹಾಡಾಡಿಕೊಂಡು ಅಳುವ ಸನ್ನಿವೇಶವನ್ನು, ಅದರಲ್ಲಿಯೂ ಮಂದಾನಿಲರಗಳೆಯಲ್ಲಿ ಬರೆದ "ಏವೇನೇವೆನೆಲೆ ಮಗನೇ ಮಗನೇ..." ಈ ಪದ್ಯವನ್ನು ನುಡಿಯುತ್ತಿರುವಾಗ ನನ್ನೆದುರಿಗೆ ಕುಳಿತ ಶ್ರೋತೃವೊಬ್ಬ ಗಹಗಹಿಸಿ ನಗುತ್ತಿದ್ದ. ಇದೆಲ್ಲ ನೆನಪಾಗಿ ಭಾಷಣ ಮಾಡಲು ಒಪ್ಪಿಗೆ ಕೊಡಲಿಲ್ಲ. ಗೆಳೆಯನೂ ಸಿದ್ಧನಾಗಿಯೇ ಬಂದಿದ್ದ ಎಂದು ತೋರುತ್ತಿತ್ತು. ನನ್ನ ಬಗ್ಗೆ ಅದನ ಅದರ ಇಷ್ಟು ಇದ್ದಿತೋ, ಏನು ಭಾವೀ ಜನಾಂಗದ ಗುರುಗಳ ದರ್ಶನ ಮಾಡಿಸಬೇಕೆಂಬ ಹಟವಿದ್ದಿತೋ ಯಾರು ಬಲ್ಲರು? ಅವನಿಗೆ ಇನ್ನೂ ಒಂದು ಸಂಗತಿಯ ನೆನಪು ಕೊಟ್ಟೆ. ಅದೂ ನಾವು ಕಾಲೇಜಿನಲ್ಲಿ ಕಲಿಯುವಾಗಿನ ಸಂಗತಿಯ ನೆನಪು. ಚರ್ಚಾಕೂಟದಲ್ಲಿ ಮೊದಲನೆಯ ಸಲ ಭಾಗ ತೆಗೆದುಕೊಂಡಿದ್ದೆ. ವ್ಯಾಸಪೀಠವನ್ನೇರಿದೊಡನೆ ಎಲ್ಲ ಕಡೆಯಿಂದಲೂ ಕರತಾಡನ ಕೇಳಬಂದಿತು. ಅರ್ಥ ಬಲ ಉಡುಗಿತು. ಸ್ಮರಣಶಕ್ತಿಯ ಮೇಲೆ ವಿಶ್ವಾಸವಿಟ್ಟು ಭಾಷಣವನ್ನು ಬಾಯಿಪಾಠಮಾಡಿದ್ದೆ. ಕಾಗದವನ್ನು ಕಿಸೆಯಲ್ಲಿ ಇಟ್ಟಿರಲಿಲ್ಲ. ಅಂದಿನ ವಿಷಯ 'Gandhiji as a social reformer ಎಂಬುದಿತ್ತು. 'President and Gentlemen' ಎಂದು ಪ್ರಾರಂಭಿಸಿದೆ. ಹುಡುಗಿಯರು ಕುಳಿತ ಸ್ಥಳದಿಂದ ಗಲಾಟೆ ಕೇಳಬಂದಿತು. ಎದೆ ನಡುಗಿತು... and ladies too ಎಂದೆ. (ಹುಡುಗಿಯರ ಮೇಲೆ ಸಿಟ್ಟು ಇದ್ದಿಲ್ಲ. ಅದರೂ ಸಭಾಕಂಪದಿಂದ ಅವರ ಹೆಸರು ಉಚ್ಚರಿಸಿದ್ದಿಲ್ಲ). ಗದ್ದಲ ಸ್ವಲ್ಪ ಶಾಂತವಾಯಿತು. ಆದರೆ ನಾನು ವಿಶ್ವಾಸವಿಟ್ಟ ಸ್ಮರಣಶಕ್ತಿ ವಿಶ್ವಾಸಘಾತಮಾಡಿತು. ಕೈಕಾಲುಗಳು ನಡುಗಹತ್ತಿದವು. ಕರವಸ್ತ್ರಕ್ಕಾಗಿ ಕಿಸೆಯಲ್ಲಿ ಕೈಹಾಕಿದೆ. ಅಯ್ಯೋ ದೈವವೇ? ಕರವಸ್ತ್ರವೂ ಕಿಸೆಯಲ್ಲಿರಬಾರದೆ! ಮತ್ತಿಷ್ಟು ಗಾಬರಿಯಾದೆ! ಯಾವ ವಿಷಯದ ಬಗ್ಗೆ ಮಾತಾಡುವೆ ಎನ್ನುವದೇ ಮರೆಯಿತು. ತಲೆ ತಿರುಗಹತ್ತಿತು. ಎದುರಿಗೆ ಕುಳಿತವರೆಲ್ಲ ಮಸುಕಾಗಿ ಕಾಣತೊಡಗಿದರು. ಜೋಲಿಹಿಡಿಯುವದು ಅಸಾಧ್ಯವಾಗತೊಡಗಿತು. ಪ್ರೆಸಿಡೆಂಟರ ಗಂಟೆ ಕೂಗಿಕೊಳ್ಳುತ್ತಲೇ ಇತ್ತು. 'Sorry Excuse me' ಎಂದು ಕೆಳಗಿಳಿದುಬಿಟ್ಟೆ. ಆಗ ನನ್ನನ್ನು ಸಮಾಧಾನ ಪಡಿಸಿದ ಪ್ರಾಣಿ ಇದೇ ಕುಲಕರ್ಣಿ ತನ್ನ ಹಣದಿಂದಲೇ ಆಹೊತ್ತು ಸಿನೆಮಾಕ್ಕೆ ಕರೆದುಕೊಂಡು ಹೋಗಿದ್ದ. (ಆದರೆ ಆ ಹಣವನ್ನು ನನ್ನ ಕಡೆಯಿಂದಲೇ ಕೈಗಡ ಇಸಿದುಕೊಂಡಿದ್ದ, ಇನ್ನೂ ತಿರುಗಿ ಕೊಟ್ಟಿಲ್ಲ; ಕೊಡುವ ಸಂಭವವೂ ಇಲ್ಲ) ಇದನ್ನೆಲ್ಲ ಅವನಿಗೆ ನೆನಪು ಮಾಡಿಕೊಟ್ಟೆ. ಅವನು ನಕ್ಕು ಎಂದ, "ಏನರೆ ಅದ್ರ ನಾನು ನಿನ್ನ ಹತ್ತಿರಾನೇ ಇರತೀನಿ— ನೆತ್ತಿಗೆ ನೀರುಬಡೀಲಿಕ್ಕೆ. ಅದಕ್ಕಿಂತ ಹೆಚ್ಚಿಗೇನರೇ ಅವರ ನಾಲ್ಕುಮಂದಿಯನ್ನು ತಯಾರುಮಾಡೇ ಇಟ್ಟಿರತೀನಿ." ಬಹಳ ಸಾರೆಯ ಕರೆ, ಕರಕರೆಯಾಗಬಾರದೆಂದು ಒಪ್ಪಿದೆ. ಆದರೆ ವಿಷಯ? ಯಾವ ವಿಷಯದ ಮೇಲೆ ಮಾತನಾಡಬೇಕೆಂಬುದು ಸ್ವಲ್ಪ ಗೊಂದಲಕ್ಕೇ ಇಟ್ಟಿತು. "ಮತ್ತೇನ ಬುರುಡಿ ಉಳಿಸಲ್ಲ. ಸಾಹಿತ್ಯ, ಸಮಾಜ, ಕರ್ನಾಟಕ ಏಕೀಕರಣ, ಜಾತೀಯತಾನಿವಾರಣೆ, ಅಸ್ಪೃಶ್ಯೋದ್ಧಾರ ಇವೆಲ್ಲ ಒಳಗೊಂಡಿರುವ ವಿಷಯವನ್ನು ಆಯ್ದುಕೊ. ಮತ್ತ ಇನ್ನೊಂದು ಮಾತು. ಬಸವಣ್ಣವರ ವಚನ ಮತ್ತು ಪುರಂದರದಾಸರ ಪದ ಇವು ಕೂಡ ನಡುವೆ ಹಾಯ್ದು ಹೋಗಲಿಕ್ಕೇ ಬೇಕು. ಮತ್ತು ಯಾಕಂದರ, ಪ್ರಿನ್ಸಿಪಾಲರ ಲಿಂಗಾಯತ ಇದ್ದಾನ ಮತ್ತ ವೈಸ ಪ್ರಿನ್ಸಿಪಾಲ ಆಚಾರಿ ಇದ್ದಾನ, ಅದಕ್ಕಾಗಿ ಇಬ್ಬರೂ ತೃಪ್ತಿಬಡೂಹಂಗ ಮಾತಾಡಬೇಕು" ಎಂದು ಸಲಹೆ ಕೊಟ್ಟ. ಮತ್ತ ಇನ್ನೊಂದು ಕಿವಿಮಾತು ಹೇಳಿದ. ನಾನು ಯಾರನ್ನೂ ಬಹಿರಂಗವಾಗಿ ಟೀಕಿಸಬಾರದಂತೆ. "ರಾಮಾಯ ಸ್ವಸ್ತಿ; ರಾವಣಾಯ ಸ್ವಸ್ತಿ" ಈ ಧೋರಣೆ ವಹಿಸಬೇಕಂತೆ. ಒಳ್ಳೇದು ಎಂದು ಒಪ್ಪಿದೆ. ನಾನು ಆಯ್ದುಕೊಂಡ ವಿಷಯ". "ಇಂದಿನ ಸಮಾಜ" ಆಯ್ದುಕೊಂಡೆ ಎನ್ನುವದಕ್ಕಿಂತ ಕುಲಕರ್ಣಿ ಹೇಳಿದ ವಿವರವನ್ನು ಒಳಗೊಂಡಂತಹ ಮತ್ತೊಂದು ವಿಷಯವೇ ದೊರೆಯಲಿಲ್ಲ

ಆ ದಿನವೂ ಬಂದಿತು. ಅದಕ್ಕಾಗಿಯೇ ಮೀಸಲಿರಿಸಿದ್ದ ಗಂಜಿಯ ಧೋತರ, ನೆಹರೂ ಶರ್ಟ, ಬಿಳಿಯ ಖಾದಿ ಟೊಪ್ಪಿಗೆಯಿಂದ ಅಲಂಕೃತನಾಗಿ ಗೆಳೆಯ-ಅಲ್ಲಲ್ಲ- ಚರ್ಚಾಕೂಟದ ಚೆರಮನ್ ಕುಲಕರ್ಣಿಯೊಡನೆ ವೇಳೆಗೆ ಸರಿಯಾಗಿ ಹೋದೆ. ಮೊದಲೆ ಶಿಸ್ತಿನ ವ್ಯವಸ್ಥೆ ಮಾಡಿದರು. ಗೆಳೆಯ ಕುಲಕರ್ಣಿ ಚಾಣಾಕ್ಷ. ಚರ್ಚೆಯ ಅನಂತರ ಶಿಸ್ತಿನ ಪ್ರಕರಣ ಇಟ್ಟಿದ್ದರೆ ಭಾಷಣ ಮಾಡುವಾಗ ಬಾಕ್ಯದ ಶಿಸ್ತಿನ ಕಾರಣ ಬಾಯಲ್ಲಿ ನೀರು ಬಂದು ಗಂಟಲು ಕಟ್ಟೀತೆಂದು ಭಯಪಟ್ಟಿರಬಹುದು. ಅವನಿಗೆ ಗೊತ್ತು- ನನಗೆ ಎಲ್ಲ ವಿಷಯಗಳಿಗಿಂತಲೂ ಶಿಸ್ತಿನ ಮೇಲೆ ಹೆಚ್ಚು ಆಸಕ್ತಿ ಎಂದು.

ವ್ಯಾಸಪೀಠದ ಮೇಲೆ ಕುಳಿತೆ. ಬಲಕ್ಕೆ ಪ್ರಿನ್ಸಿಪಾಲ್ ಸಾಹೇಬರೂ ಎಡಕ್ಕೆ ಚೇರಮನ್‌ರೂ ಕುಳಿತಿದ್ದರು. ಒಬ್ಬ ಹುಡುಗ ಒಂದು ಸ್ವಾಗತ ಪದ್ಯ ನುಡಿಯಹತ್ತಿದ. "ಉದಯವಾಗಿದೆ ನಮ್ಮ ಚೆಲುವ ಕನ್ನಡ ನಾಡು" ಎಂದು ಪ್ರಾರಂಭಿಸಿ ನಡುವಿನ ಕೆಲವು ಸಾಲುಗಳನ್ನು ಅದಲು ಬದಲು ಮಾಡಿ "ಉದಯವಾಗಲಿ ನಮ್ಮ ಚಲುವ ಕನ್ನಡ ನಾಡು" ಎಂದ. ಮುಕ್ತಾಯಗೊಳಿಸಿದ. ಪಾಪ! ಅವನು ತಪ್ಪಿದಾಗ ನಡುವಿನ ಹುಡುಗರು "ಆಟಿನ್‌ಚನ್"ದಲ್ಲಿ [illegible] ಗಳನ್ನು ನುಡಿಯುತ್ತಿದ್ದರು.

ಅಂತಹ ಸ್ವಾಗತ ಪದ್ಯ [illegible] ಮಾಡಿತು. [illegible] (ಗನ್ನಡು) [illegible] [illegible] ನನ್ನ [illegible] ಅದರಿಂದ [illegible] ಹೊಡೆದರು. "ಇದರ [illegible] ಕುಲಕರ್ಣಿ [illegible] ನೋಡಿದ. [illegible] ನೋಡಿದ. [illegible] ನೆನಪು [illegible] "ಇದರು [illegible] [illegible] ಎತ್ತಿದಕ್ಕೆ..." [illegible] ದರು. [illegible] ಮಾಡಿಕೊಂಡೆ.

ಭಾಷಣ ಪ್ರಾರಂಭಿಸಿದೆ "ಸಹೋದರ ಸಹೋದರಿಯರೆ...." [illegible] ಹುಟಿದ. ನಾನು [illegible] ಕಣ್ಣುಹಾಯಿಸಿದೆ. ಸಹೋದರಿಯರು ಕೂಡ್ರುವ ಸ್ಥಳ ಖಾಲಿ ಇತ್ತು. "ಕ್ಷಮಿಸಿ" ಎಂದು ಪ್ರಾರಂಭಿಸಿದೆ ಮತ್ತೆ. ಅಷ್ಟರಲ್ಲಿಯೇ [illegible] ಯನ್ನು ಗ್ಲಾಸಿನಲ್ಲಿ ಹಾಕಿ ನನ್ನ ಮುಂದೆ ಅಂದರೆ ಟೇಬಲ್ ಮೇಲೆ ತಂದು ಇಟ್ಟ. ಹೊಗೆಯಿಂದ ಕಣ್ಣಲ್ಲಿ ನೀರೂರಿತು. ಅಸಹಾಯ ದೃಷ್ಟಿಯಿಂದ ಹುಡುಗರ ಕಡೆಗೆ [illegible] ಕರ್ಣಿಯ ಕಡೆಗೆ ನೋಡಿದೆ. [illegible] ಪಟ್ಟಿರಬಹುದು. ಗ್ಲಾಸನ್ನು ಕೆಳಗೆ ಇಟ್ಟ. [illegible] ದಿದ್ದ ಭಾಷಣವನ್ನು ಮತ್ತೆ ಪ್ರಾರಂಭಿಸಿದೆ. ಸಮಾಜದಲ್ಲಿಯ [illegible] ಹೇಳಿದೆ. ಹಾಗೆಯೇ ದೇಶವಿಭಜನೆಯ ಸಮಯದಲ್ಲಾದ ಬಂಗಾಲ, ಪಂಜಾಬಗಳ ಮರಣವನ್ನು ವರ್ಣಿಸಹತ್ತಿದೆ [illegible] ಪೂರ್ವಕವಾಗಿ ಗಂಭೀರ ಮಾಡಿಕೊಂಡು ಅತ್ಯಾಚಾರದ ಒಂದು ಕತೆಯನ್ನು, ಕಣ್ಣಲ್ಲಿ ನೀರು ಬರುವಂತೆ ಹೇಳಿದೆ ಅಷ್ಟರಲ್ಲಿಯೇ ವಿದ್ಯಾರ್ಥಿಯೊಬ್ಬ "ಕಿಸಕ್ಕನೆ ನಕ್ಕ (ಏಕೆ ನಕ್ಕ ಎಂಬುದು ಹಿಂದುಗಡೆ ತಿಳಿಯಿ[illegible] ಕುಲಕರ್ಣಿಯಿಂದ. ಅವನ ಎದುರಿಗೆ ಕುಳಿತ ಗೆಳೆಯನ ಗಾಂಧಿ ಟೊಪ್ಪಿಗೆಯಿಂದ ಜೊಂಡಿಗನ ಹುಳ ಹೊರಬಿತ್ತಂತೆ. ಮೇಲಾಗಿ ಗಂಭೀರ ಪ್ರಸಂಗ (?) ದಲ್ಲಿ ನಗಬಾರದೆಂಬ [illegible] ಯೊಂದು ಆ ಹುಡುಗನಲ್ಲಿಂದೇಕಲ್ಲ?) ನನಗೆ ಮುಖಭಂಗವಾದಂತಾಯಿತು. ಕುಲಕರ್ಣಿಯ ಮುಖದ ಮೇಲೆ ಮುಗುಳುನಗೆ ಕೇಳುತ್ತಿತ್ತು. ಆ ನಗೆ— "ಇಂಥ ಜನರಲ್ಲಿಯೇ ನಾನು ಜೀವಮಾನವನ್ನು ಕಳೆಯಬೇಕಾಗಿದೆ" ಎಂಬುದನ್ನು ಸೂಚಿಸುವಂತಿತ್ತು. ಇನ್ನೊಬ್ಬ ವಿದ್ಯಾರ್ಥಿ ಬಿಕ್ಕಿ ಬಿಕ್ಕಿ ಅಳುವನ್ನು ತಡೆಯುತ್ತಿದ್ದ (ಕೈವಸ್ತ್ರವನ್ನಂತೂ ಕಣ್ಣು ಮೇಲೆ ಹಿಡಿದಿದ್ದ) ಇಷ್ಟು ಪರಿಣಾಮಕಾರಿಯಾಗಿ ವರ್ಣಿಸಿದ್ದಕ್ಕೆ ನನ್ನ ಬೆನ್ನನ್ನು ನಾನೇ ಚಪ್ಪರಿಸಿ

[illegible]

Reg. No. B. 3148 | LICENCE No 3 Licensed to Post without Prepayment | KARMAVEER 26-9-49

ರೂಪಾಯಿಯ ಬೆಲೆಯ ಇಳಿತ

ಅದರ ಅರ್ಥ— ಪರಿಣಾಮಗಳು

"ರೂಪಾಯಿಯ ಬೆಲೆ ಇಳಿಯಿತು" ಎಂಬ ಸುದ್ದಿಯನ್ನು ಪತ್ರಿಕೆಗಳಲ್ಲಿ ಓದಿ ಒಮ್ಮೆಲೇ ಅನೇಕರು ಹೌಹಾರಿದರಂತೆ. ಬ್ಯಾಂಕುಗಳಲ್ಲಿಟ್ಟಿದ್ದ ತಮ್ಮ ಹಣದ ಗತಿಯೇನಾಯಿತು ? ನೂರಕ್ಕೆ ೩೦ ರಷ್ಟು ಇಳಿಯಿತಂತಲ್ಲಾ ? ಹಾಗಾದರೇನು ನಮ್ಮ ನೂರು ರೂಪಾಯಿಗೆ ೭೦ ಕ್ಕೇ ದೊರೆಯುವುದೆ ?

ಕೆಲವರು ಬ್ಯಾಂಕುಗಳಿಗೆ ಓಡಿದರಂತೆ. ಆದರೆ ಅಲ್ಲಿ ಅವರಿಗೆ ಮುಚ್ಚಿದ ಬಾಗಿಲು ಎದುರಾಯಿತು. ತಾ. ೧೯, ೨೦, ೨೧ ಈ ಮೂರು ದಿನ ಬ್ಯಾಂಕುಗಳಿಗೆ ರಜೆಯೆಂದು ಅಲ್ಲಿ ನೋಟೀಸು ಹಚ್ಚಿತ್ತು. ಠೇವುದಾರರಿಗೆ ಇನ್ನಷ್ಟು ಗಾಬರಿಯಾಯಿತು.

ಆದರೆ ಅವರ ಗಾಬರಿ ನಿಷ್ಕಾರಣವಾಗಿತ್ತು.

ಬ್ಯಾಂಕಿನಲ್ಲಿಟ್ಟ ಹಣವಾಗಲಿ, ನಮ್ಮ ಕೈಯಲ್ಲಿದ್ದ ರೊಕ್ಕವಾಗಲಿ ಈ ಬೆಲೆ ಇಳಿತಕ್ಕೆ ಗುರಿಯಾಗುವುದಿಲ್ಲ ನಮ್ಮ ರೂಪಾಯಿಗೆ ಹದಿನಾರೇ ಆಣೆ, ಆಣೆಗೆ ಹನ್ನೆರಡೇ ಪೈ (ಅಥವಾ ಪೈಗಳಿಂದ ಕೆಲಸವಾಗದಿರುವ ಈ ಕಾಲದಲ್ಲಿ ನಾಲ್ಕೇ ಬಿಲ್ಲೆಗಳೆನ್ನಿರಿ ಬೇಕಾದರೆ) ಬೆಲೆ ಉಳಿಯುತ್ತದೆ. ಯಾರೂ ತಮ್ಮ ಹಣದ ಬೆಲೆಯನ್ನು ಕುರಿತು ಚಿಂತಿಸಬೇಕಾಗಿಲ್ಲ.

ಹಾಗಾದರೆ ಏನಿದೆಲ್ಲ ಗೌಜಿ ?

ಇದೊಂದು ಅಂತಾರಾಷ್ಟ್ರೀಯ ಹಣಕಾಸಿನ ಕಸರತ್ತು ಅಷ್ಟೇ ! ಆದರೆ ಈ ಕಸರತ್ತಿನ ಪ್ರತ್ಯಕ್ಷ ಪರಿಣಾಮ ಈಗಲೇ ನಮ್ಮ ಮೇಲೆ ಆಗದಿದ್ದರೂ ಕೆಲ ದಿನಗಳ ನಂತರ ಅಪ್ರತ್ಯಕ್ಷವಾಗಿ ಆಗಬಹುದು. ಅದ್ದರಿಂದ ಅದನ್ನು ನಾವು ಅರಿತುಕೊಳ್ಳಲು ಪ್ರಯತ್ನಿಸೋಣ.

ಜಗತ್ತಿನಲ್ಲಿ ಒಂದೊಂದು ರಾಜ್ಯದಲ್ಲಿ ಒಂದೊಂದು ನಾಣ್ಯ ಚಲಾವಣೆಯಲ್ಲಿದೆ. ನಮ್ಮಲ್ಲಿ ರೂಪಾಯಿ, ಬ್ರಿಟನ್ನಿನಲ್ಲಿ ಪೌಂಡು, ಅಮೇರಿಕೆಯಲ್ಲಿ ಡಾಲರು, ಫ್ರಾನ್ಸಿನಲ್ಲಿ ಫ್ರಾಂಕು ಇತ್ಯಾದಿ. ಈ ರಾಷ್ಟ್ರಗಳಲ್ಲಿ ಪರಸ್ಪರ ವ್ಯಾಪಾರವಾಗುವಾಗ ಸಹಜವಾಗಿ ಇಂಥ ದೇಶದ ಇಂತಿಷ್ಟು ನಾಣ್ಯಗಳಿಗೆ ಇಂಥ ರಾಷ್ಟ್ರದ ಇಂತಿಷ್ಟು ನಾಣ್ಯಗಳು ಎಂದು ವಿನಿಮಯದರ ಗೊತ್ತಾಗುತ್ತಿರುತ್ತದೆ. ಉದಾಹರಣೆಗಾಗಿ ಬ್ರಿಟನ್ನಿನ ೧ ಪೌಂಡಿಗೆ ಅಮೇರಿಕೆಯ ೪.೦೩ ಡಾಲರು ಅಮೇರಿಕೆಯ ಒಂದು ಡಾಲರಿಗೆ ಭಾರತದ ೩.೩೦ ರೂಪಾಯಿಯೆಂದು (ಮೊನ್ನೆ ತಾ. ೧೯ ಕ್ಕಿಂತ ಮೊದಲು) ವಿನಿಮಯದರವಿತ್ತು. ಅಂದರೆ ನಾವು ರೂ. ೩.೩೦ ಬೆಲೆಯ ಸಾಮಾನುಗಳನ್ನು ಅಮೇರಿಕೆಗೆ ಒದಗಿಸಿದರೆ ಅವರು ನಮ್ಮ ಲೆಕ್ಕಕ್ಕೆ ೧ ಡಾಲರು ಜಮೆ ಹಿಡಿದು ಅಲ್ಲಿ ಒಂದು ಡಾಲರು ಬೆಲೆ ಬಾಳುವ ಸಾಮಾನು ಕಳಿಸುತ್ತಾರೆ.

ಆದರೆ ಈಗ ನಮಗೆ ೧ ಡಾಲರು ಬೆಲೆಯ ಸಾಮಾನುಗಳು ಬೇಕಾದರೆ ನಾವು ಅಮೇರಿಕೆಗೆ ೪.೭೬ ರೂಪಾಯಿ (ಅಥವಾ ಅಷ್ಟು ಸಾಮಗ್ರಿ) ಕೊಡಬೇಕಾಗುವದು. ರೂಪಾಯಿಯ ಬೆಲೆ ಇಳಿಸಿದ್ದರ ಮುಖ್ಯ ಫಲ ಇದು.

ಇದು ನಮಗೆ ನಷ್ಟವಲ್ಲವೆ ? ನಾವೇಕೆ ಹೀಗೆ ಮಾಡಬೇಕಿತ್ತು ?

ಹೌದು ನಷ್ಟವೇನೋ ನಿಜ. ಆದರೆ ಉಪಾಯವಿರಲಿಲ್ಲ.

ಎರಡು ಪ್ರದೇಶಗಳು

ಜಗತ್ತಿನಲ್ಲಿ ವ್ಯಾಪಾರ ವ್ಯವಹಾರವೆಲ್ಲ ಇಂದು ಮುಖ್ಯವಾಗಿ ಎರಡು ಪಂಗಡಗಳಲ್ಲಿ ನಡೆಯುತ್ತದೆ. ಒಂದು ಬ್ರಿಟನ್ನಿನ ಪಂಗಡದಲ್ಲಿ ಇನ್ನೊಂದು ಅಮೇರಿಕೆಯ ಪಂಗಡದಲ್ಲಿ ದೊಡ್ಡ ಸಾಮ್ರಾಜ್ಯ ಕಟ್ಟಿ ಇಡಿ ಜಗತ್ತಿನ ನಾಯಕತ್ವದಲ್ಲಿ ಮೆರೆಯುತ್ತಿದ್ದ ಬ್ರಿಟನ್ನಿನ ಸಂಗಡ ಅನೇಕ ರಾಷ್ಟ್ರಗಳ ವ್ಯಾಪಾರ ವ್ಯವಹಾರ ಸಂಬಂಧ ತಳಕು ಬಿದ್ದಿದ್ದು, ಅದಿನ್ನೂ ಹಾಗೆಯೆ ಉಳಿದಿದೆ. ಆದರೆ ಎರಡನೆ ಮಹಾಯುದ್ಧದ ನಂತರ ಉತ್ಕರ್ಷಕ್ಕೆ ಬಂದು ಈಗ ಅದ್ವಿತೀಯ ಸಂಪತ್ತಿಯಿಂದ ಮೆರೆಯುತ್ತಿರುವ ಅಮೇರಿಕೆಯ ಪ್ರಭಾವ ವಲಯದಲ್ಲಿ ಅನೇಕ ದೇಶಗಳ ವ್ಯಾಪಾರ ವ್ಯವಹಾರ ತಳಕುಬಿದ್ದಿದೆ. ಮೊದಲಿನ ಗುಂಪು ಸ್ಟರ್ಲಿಂಗ್ ಪ್ರದೇಶ, ಎರಡನೆಯದು ಡಾಲರ ಪ್ರದೇಶ ಎಂದು ಕರೆಯಲಾಗುತ್ತಿದೆ. ಭಾರತ ಸ್ಟರ್ಲಿಂಗ್ ಪ್ರದೇಶದಲ್ಲಿ ಸೇರಿದ ರಾಜ್ಯ. ನಮ್ಮ ಐತಿಹಾಸಿಕ ಸಂಬಂಧವೇ ಹಾಗಿದೆ. ಅದುದರಿಂದ ಬ್ರಿಟನ್ನಿನ ಪೌಂಡು ನಾಣ್ಯಕ್ಕೆ ಬರುವ ಸುಖದುಃಖಗಳು ನಮ್ಮ ರೂಪಾಯಿಯ ಮೇಲೂ ಪರಿಣಾಮ ಮಾಡಿಯೆ ಮಾಡುತ್ತವೆ.

ಮೊನ್ನೆ ಬ್ರಿಟನ್ನಿನ ಸರಕಾರ ಅಮೇರಿಕೆಯ ಸಂಗಡ ದೀರ್ಘವಾದ ಮಾತುಕತೆ ನಡೆಸಿ ಪೌಂಡಿನ ಬೆಲೆಯನ್ನು ತಗ್ಗಿಸಿತು. ಅಂದರೆ ಒಂದು ಪೌಂಡಿಗೆ ೪.೦೩ ಡಾಲರೆಂದಿದ್ದುದನ್ನು ೨.೮೦ ಡಾಲರೆಂದು ಬದಲಾಯಿಸಿತು. ಅದರ ಬೆನ್ನು ಹತ್ತಿ ನಾವೂ ಅಷ್ಟೇ ಪ್ರಮಾಣದಲ್ಲಿ ಅಂದರೆ ಡಾಲರಿಗೆ ೩.೩೦ ರೂಪಾಯಿ ಬೆಲೆಯೆಂದಿದ್ದುದನ್ನು ೪.೭೬ ರೂಪಾಯಿಯೆಂದು ಮಾಡಬೇಕಾಯಿತು.

ಬ್ರಿಟನ್ನಾದರೂ ಹೀಗೇಕೆ ಮಾಡಿತು ? ಮತ್ತು ಸ್ವತಂತ್ರರಾದ ನಾವೂ ಬ್ರಿಟನ್ನು ಮಾಡಿದಾಕ್ಷಣ ಹೀಗೇಕೆ ಮಾಡಬೇಕಿತ್ತು ? ಎಂದು ನೀವು ಸಹಜವಾಗಿ ಕೇಳುವಿರಿ.

ಬ್ರಿಟನ್ನಿನ ಕ್ರಮಕ್ಕೆ ಕಾರಣವಿಷ್ಟೇ: ಬ್ರಿಟನ್ನು ಈಗ ಮುಂದಿನ ಸಿಂಹದಂತಾಗಿದೆ. ಎರಡು ಮಹಾಯುದ್ಧಗಳಿಂದ ಅದರ ಬಲ ಕುಂದಿದೆ. ಮೊನ್ನೆಯ ಮಹಾಯುದ್ಧದಲ್ಲಂತೂ ಜರ್ಮನ್ ಬಾಂಬುಗಳಿಂದ ಅದರ ಉದ್ಯಮಗಳಿಗೆ ವಿಪರೀತ ಹಾನಿಯಾಯಿತು. ಬ್ರಿಟನ್ನು ಎಷ್ಟು ಬಲಿಷ್ಠವಾಗಿದ್ದರೂ ಅದು ಆಹಾರಾದಿ ಸಾಮಗ್ರಿಗಳಿಗೂ ತನ್ನ ಉದ್ಯಮಗಳಿಗೆ ಬೇಕಾದ ಕಚ್ಚಾ ಸರಕುಗಳಿಗೂ ವಿದೇಶಗಳನ್ನೇ ಅವಲಂಬಿಸಬೇಕಾಗಿದೆ. ಅದಕ್ಕೆ ಅಮೇರಿಕೆಯ ಪ್ರಭಾವಕ್ಷೇತ್ರದಿಂದಲೇ ಬಹಳ ಸಾಮಗ್ರಿಗಳು ಬೇಕಾಗುತ್ತವೆ. ಆದರೆ ಅದಕ್ಕೆ ಕೊಡುವಷ್ಟು ಹಣ ಬ್ರಿಟನ್ನಿನಲ್ಲಿಲ್ಲ. ಈ ವರೆಗೇನೋ ಅಮೇರಿಕೆ ಕೊಟ್ಟ ಸಾಲ ಮತ್ತು ಧರ್ಮದ ಬಲದಿಂದಲೂ ಬ್ರಿಟನ್ನಿನಲ್ಲಿದ್ದ ಚಿನ್ನದ ಸಂಗ್ರಹವನ್ನು ಕರಗಿಸಿಯೂ ದಿನ ಸಾಗಿತು. ಆದರೆ ಹೀಗೇ ಎಷ್ಟು ದಿನ ಸಾಗೀತು ? ಬ್ರಿಟನ್ನು ಗಾಬರಿಯಾಯಿತು. ಡಾಲರ ಕ್ಷೇತ್ರದಿಂದ ಸಾಮಗ್ರಿ ತರಿಸುವುದನ್ನು ನಿಲ್ಲಿಸಿದರೆ ಬ್ರಿಟನ್ನಿನ ಜನರು ತುಂಬ ಕಷ್ಟವನ್ನು ಬವಣೆಯನ್ನು ಅನುಭವಿಸಬೇಕಾದೀತು. ಅದು ಸಾಧ್ಯವಿರಲಿಲ್ಲ.

ವ್ಯಾಪಾರ ಹೆಚ್ಚಿಸುವ ಉಪಾಯ

ಇನ್ನೊಂದು ಉಪಾಯವೆಂದರೆ ಡಾಲರ ಕ್ಷೇತ್ರಕ್ಕೆ ಬ್ರಿಟನ್ನಿನಲ್ಲಿ ತಯಾರಾದ ಸಾಮಾನುಗಳನ್ನು ಕಳಿಸುವುದು. ಈಚೆಗೆ ಬ್ರಿಟನ್ನಿನ ಸಾಮಾನುಗಳನ್ನು ಡಾಲರ ಕ್ಷೇತ್ರದಲ್ಲಿ ಕೇಳುವವರಿಲ್ಲದಾಗಿತ್ತು. ಏಕೆಂದರೆ ಹಳೆಯ ರೀತಿಯಿಂದಲೇ ಕಾರಖಾನೆಗಳನ್ನು ನಡೆಸುತ್ತಿದ್ದ ಬ್ರಿಟಿಶರ ಸರಕುಗಳಿಗೆ ಬೆಲೆ ತುಂಬ ಹೆಚ್ಚು. ಬ್ರಿಟನದ ಸಾಮಾನುಗಳು ಉತ್ತಮವಾಗಿದ್ದರೂ ಬೆಲೆ ಹೆಚ್ಚೆಂದು ನಿಮಗೂ ಗೊತ್ತಿದೆ. ಆದರೆ ತುಟ್ಟಿ ಸಾಮಾನುಗಳನ್ನು ಕೊಳ್ಳಲು ಅಮೇರಿಕನ್ನರು ಸಿದ್ಧರಿಲ್ಲ. ಅಂದ ಮೇಲೆ ಗಿರಾಕಿ ಬರಬೇಕಾದರೆ ಅಮೇರಿಕೆಯಲ್ಲಿ ಅವು ಅಗ್ಗವಾಗುವಂತೆ ಮಾಡಬೇಕಾಯಿತು. ಹಾಗಾದರೆ ಅದರಿಂದ ಡಾಲರ ಕ್ಷೇತ್ರದಲ್ಲಿ ತಮ್ಮ ವ್ಯಾಪಾರ ಹೆಚ್ಚಾದೀತು ಎಂದು ಅವರ ಆಶೆ

ಇದರಲ್ಲಿ ಬ್ರಿಟನ್ನಿನ ಲೆಕ್ಕಾಚಾರ ಹೀಗೆ: ನಿಮ್ಮಲ್ಲಿ ಒಂದು ಚೀಲ ಜೋಳವಿದೆಯೆಂದು ತಿಳಿಯಿರಿ ರೂಪಾಯಿಗೆ ನಾಲ್ಕು ಸೇರಿನಂತೆ ಮಾರಿದರೆ ನಿಮಗೆ ಚೀಲದ ಮೇಲೆ ೫ ರೂಪಾಯಿ ಲಾಭವಿದೆಯೆಂದು ತಿಳಿಯಿರಿ. ಆದರೆ ಅದರಲ್ಲಿ ನಿಮ್ಮ ಅರ್ಧ ಚೀಲಕ್ಕೂ ಗಿರಾಕಿ ಬರಲಿಲ್ಲವಾದರೆ ಲಾಭ ಎರಡೂವರೆ ರೂಪಾಯಿಯೇ ಆದೀತು ಆದರೆ ಸ್ವಲ್ಪ ಬೆಲೆ ತಗ್ಗಿಸಿದರೆ ಇಡೀ ಚೀಲವೂ ಮಾರಿ ಹೋಗಬಹುದು. ಆಗ ನಿಮಗೆ ನಾಲ್ಕು ರೂಪಾಯಿ ಲಾಭವಾಗುವದು. ಅರ್ಧ ಚೀಲ ಮನೆಯಲ್ಲೆ ಉಳಿಸಿಕೊಂಡು ಅಷ್ಟರ ಬೆಲೆಯನ್ನೂ ಕಳೆದುಕೊಳ್ಳುವದಕ್ಕಿಂತ ಇಡೀ ಚೀಲ ಮಾರಿ ಸ್ವಲ್ಪ ಕಡಿಮೆ ಲಾಭ ಮಾಡಿಕೊಳ್ಳುವುದು ಲೇಸಲ್ಲವೆ ? ಹಾಗೆಯೆ ಬ್ರಿಟನ್ನಿನ ಲೆಕ್ಕ. ಅಗ್ಗವಾಗಿ ಸಾಮಾನು ಮಾರಿ ಲಾಭದ ಪ್ರಮಾಣ ಕಡಿಮೆಯಾದರೂ ಪರಿಮಾಣ ಹೆಚ್ಚಿಸಿಕೊಳ್ಳುವುದು ಜಾಣತನವೆಂದು ಅದು ಭಾವಿಸಿದೆ.

ಇದಲ್ಲದೆ, ಬ್ರಿಟಿಶ ಸಾಮಗ್ರಿಗಳು ಗಿರಾಕಿಯಿಲ್ಲದೆ ಬಿದ್ದರೆ ನಿರುದ್ಯೋಗ ಬೆಳೆದು ದೇಶಕ್ಕೆ ಕಷ್ಟವೊದಗೀತೆಂದೂ ಅದು ಬೆದರಿತು.

ಈಗ ಸಾಮಾನಿನ ಬೆಲೆಯನ್ನೆ ಇಳಿಸಿದ್ದರೆ ಬ್ರಿಟನ್ನಿನ ಒಳನಾಡಿನಲ್ಲಿಯೂ ಅದು ಅಗ್ಗವಾಗಿ ಗಲಾಟೆಯುಂಟಾಗುತ್ತಿತ್ತು. ಬ್ರಿಟನ್ನಿಗೆ ಬೇಕಾಗಿದ್ದುದು ಅಮೇರಿಕೆಯ ಪೇಟೆಯಲ್ಲಿ ವ್ಯಾಪಾರ ಅದಕ್ಕಾಗಿ ನೇರವಾಗಿ ಅಮೇರಿಕೆಯ ನಾಣ್ಯವಾದ ಡಾಲರಿನ ಸಂಬಂಧದಲ್ಲಿ ಅದು ತನ್ನ ಪೌಂಡಿನ ಬೆಲೆ ತಗ್ಗಿಸಿತು. ಇದರ ಪರಿಣಾಮವೇನಾಗುವುದೆಂದು ನೋಡೋಣ.

ಅಮೇರಿಕೆಗೆ ಆದು ಮೊದಲು ಒಂದು ಪೌಂಡು ಬೆಲೆಯ ಸಾಮಾನು ಕಳಿಸಿದ್ದರೆ ಅದು ಅಲ್ಲಿ ೪ ಡಾಲರು ೩ ಸೆಂಟಿಗೆ ಮಾರುತ್ತಿತ್ತು. ಈಗ ಪೌಂಡಿನ ಬೆಲೆ ಇಳಿಸಿದ್ದರಿಂದ ಅದೇ ಸಾಮಾನು ಅಮೇರಿಕೆಯಲ್ಲಿ ೨.೮೦ ಡಾಲರಿಗೆ ಮಾರುತ್ತದೆ. ಅಂದರೆ ನೂರಕ್ಕೆ ೩೦ ರಷ್ಟು ಅಗ್ಗವಾಗುತ್ತದೆ ಆಗ ಬ್ರಿಟಿಶ ಸಾಮಗ್ರಿಗಳಿಗೆ ಅಲ್ಲಿ ಗಿರಾಕಿ ಬಹಳ ಬಂದೀತು ಮೊದಲಿಗಿಂತಲೂ ಹೆಚ್ಚು ಹಣ ಡಾಲರು ರೂಪದಲ್ಲಿ ಬಂದೀತು. ಆಗ ಬೇಕಾದಷ್ಟು ಅಮೇರಿಕನ್ ಸಾಮಾನುಗಳನ್ನು ಬ್ರಿಟನ್ನು ತರಿಸಿ ಕೊಳ್ಳಲನುಕೂಲವಾದೀತು.

ಈಗ ಭಾರತವೂ ತನ್ನ ರೂಪಾಯಿಯ ಬೆಲೆ ..ಡಾಲರಿನ ಸಂಬಂಧದಲ್ಲಿ.. ಇಳಿಸಿದೆ. ಬ್ರಿಟನ್ನಿನ ಆರ್ಥಿಕಪದ್ಧತಿಯೊಡನೆ ನಮ್ಮ ಸಂಬಂಧ ಬಹುಕಾಲದಿಂದ ಇದೆ. ಅದ್ದರಿಂದ ಬ್ರಿಟನ್ನಿನ ಪೌಂಡಿನ ಬೆಲೆ ಇಳಿಸಿದೊಡನೆ ನಾವೂ ರೂಪಾಯಿಯ ಬೆಲೆ ಇಳಿಸಬೇಕಾಯಿತು. ಯುರೋಪಿನ ಮತ್ತು ಏಶಿಯದ ಇನ್ನೂ ಅನೇಕ ರಾಷ್ಟ್ರಗಳು ನಮ್ಮಂತೆಯೇ ಮಾಡಿವೆ. ಹೀಗೆ ಮಾಡದಿದ್ದರೆ ಅಮೇರಿಕೆಯಲ್ಲಿ ನಮ್ಮ ಸಾಮಗ್ರಿಗಳು ಮೊದಲಿನಷ್ಟೇ ಬೆಲೆಗೆ ಮಾರಿದರೂ ಬೇರೆ ಎಲ್ಲ ಯುರೋಪಿಯನ ಮತ್ತು ಏಶಿಯಾ ರಾಷ್ಟ್ರಗಳಲ್ಲಿ ಅವು ತುಂಬ ತುಟ್ಟಿಯಾಗುತ್ತಿದ್ದವು. ಅದರಿಂದ ನಮ್ಮ ವ್ಯಾಪಾರ ಹಾಳಾಗುತ್ತಿತ್ತು. ಬೆಲೆ ಇಳಿಸಿದ್ದರಿಂದ ನಾವು ಅಮೇರಿಕೆಯಲ್ಲಿ ನಮ್ಮ ಸಾಮಗ್ರಿಗಳನ್ನು ಅಗ್ಗವಾಗಿ ಮಾರಿದಂತಾಗುತ್ತಿದ್ದರೂ ಉಳಿದ ದೇಶಗಳಲ್ಲಿ ಮೊದಲಿನ ಬೆಲೆಗೇ ಮಾರಿದಂತಾಗುತ್ತದೆ. ಈಗ ನಮ್ಮಂತೆ ತಮ್ಮ ನಾಣ್ಯಗಳನ್ನು ಬ್ರಿಟನ್ನಿನ ಮಟ್ಟಕ್ಕೇ ಬೆಲೆ ಇಳಿಸಿದ ಹದಿನೈದು ರಾಷ್ಟ್ರಗಳಿವೆ. ಅವುಗಳ ಸಾಲಲ್ಲಿ ನಾವು ಸೇರದಿದ್ದರೆ ಏಕಾಂಗಿಗಳಾಗಿ ಸಾಗಬೇಕಾಗುತ್ತಿತ್ತು.

ಶ್ರೀ ಕರಮರಕರರಿಗೆ ಬೀಳ್ಕೊಡುವ ಸಮಾರಂಭ



ಸುದ್ದಿ ಮತ್ತು ಬಾನುಲಿ ಮಂತ್ರಿಗಳಾದ ಶ್ರೀ. ರಂ. ರಾ. ದಿವಾಕರರು ಯು. ಎನ್. ಸಂಘದ ಸಾಮಾನ್ಯ ಸಭೆಗೆ ತೆರಳಿದ ಹಿಂದೀ ಶಿಷ್ಟಮಂಡಳದ ಸದಸ್ಯರಿಗೆ ಮೊನ್ನೆ ಮಂಗಳವಾರ ಸತ್ಕಾರ ಕೂಟವನ್ನೇರ್ಪಡಿಸಿದ್ದರು. ಕೆಲ ಮಂತ್ರಿಗಳು ಮತ್ತು ಘಟನಾ ಸಮಿತಿ ಸದಸ್ಯರನ್ನು ಆಮಂತ್ರಿಸಲಾಗಿತ್ತು. ಚಿತ್ರದಲ್ಲಿ ಎಡದಿಂದ ಬಲಕ್ಕೆ – ಶ್ರೀ ಕೆ. ಸಿ. ರೆಡ್ಡಿ (ಮೈಸೂರ ಮುಖ್ಯ ಮಂತ್ರಿ), ಶ್ರೀ. ಡಿ. ಪಿ. ಕರಮರಕರ (ಶಿಷ್ಟಮಂಡಳದ ಬದಲಿ ಸದಸ್ಯರು) ಫಾದರ ಜೇರೋಮ ಡಿಸೋಜ್ (ಶಿಷ್ಟಮಂಡಳದ ಸದಸ್ಯರು) ಶ್ರೀ ರಂ. ರಾ. ದಿವಾಕರ, ಮುಖ್ಯ ಮಂತ್ರಿ ಪಂ. ನೆಹರು, ಶ್ರೀಮತಿ ಸುಚೇತಾ ಕೃಪಲಾನಿ (ಶಿಷ್ಟಮಂಡಳದ ಸದಸ್ಯರು) ಶ್ರೀಮತಿ ಅಮ್ಮು ಸ್ವಾಮಿನಾಥನ್, ಶ್ರೀ. ಅನಂತಶಯನಂ ಅಯ್ಯಂಗಾರ (ಹಿರಿಯೋಲಗದ ಉಪಾಧ್ಯಕ್ಷ).

ಕರಾಚಿಯ ಸುಪ್ರಸಿದ್ಧ "ಕಿಂಟೆಳಕಿನ" ಪ್ರದೇಶದಲ್ಲಿಯ ನರ್ತಕಿಯರು ತಮ್ಮೊಳಗೆ ಒಂದು ಸಂಘಟನೆ ಮಾಡಿಕೊಂಡು "ಸಂಗೀತದ ಚಟ್ಟ" ಎಂದು ಒಂದು ಸ್ಮಶಾನ ಯಾತ್ರೆಯ ಮೆರವಣಿಗೆಯನ್ನು ಹೊರಡಿಸಲು ನಿರ್ಧರಿಸಿದ್ದಾರೆ. ಅವರು ಈ ನಿರ್ಧಾರಕ್ಕೆ ಬರಲು ಪಾಕಿಸ್ತಾನದ ಪಾರ್ಲಿಮೆಂಟು ಕಳೆದ ಸಭೆಯಲ್ಲಿ ಸೂಳೆತನವನ್ನು ಪ್ರತಿಬಂಧಿಸುವ ಕಾಯದೆಯನ್ನು ರಚಿಸಿದ್ದೇ ಕಾರಣ.

ಈ ಪತ್ರಿಕೆಯನ್ನು [illegible] ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ಲೋಕಶಿಕ್ಷಣ ಟ್ರಸ್ಟಿನ ಪರವಾಗಿ [illegible]